Statement of Leader of the House on request for holiday on 27th on account of Commonwealth Cricket Match.

* **The Hon'ble Sri K. CHENGALARAYA REDDY** (Leader of the House).—Before proceeding with the legislative business, I want to say a word regarding the request made by the Hon'ble Member Janab Imam in connection with the Commonwealth Cricket Match on the 27th instant. We have given our most earnest consideration to the request and much as we would have liked to witness the cricket match, the business before the House precludes us from postponing it. If we could possibly extend the Session beyond the 1st February, it would have been possible for us to declare a holiday on the 27th also. But, as is well known, on the 2nd February there is the Convocation; and on the 3rd and 4th February there are conferences in connection with the High Power and Dam Conferences of the All India Institute of Engineers. We therefore cannot see our way to adjust the very essential business scheduled for 27th. So with great regret I must say that we are not in a position to declare a holiday in connection with the said Cricket Match.

Mushir-ul-Mulk J. MOHAMED IMAM (Tumkur *cum* Chitaldrug—Muslim).—Yesterday we had an understanding that we could have the Session from 3 p.m. to 7 or 8 p.m. if necessary. Let us make that experiment.

* **Rajamantrapravina H. B. GUNDAPPA GOWDA** (Hassan District—General).—ಕ್ರಿಕೆಟ್ ಮ್ಯಾಚಿಗೆ ಹೋಗಲು ಹೆಚ್ಚು ಮಂದಿ ಸದಸ್ಯರು ಆಸೆಪಡುವಂತೆ ಕಾಣುವುದಿಲ್ಲ, ನಮ್ಮ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಕ್ರಿಕೆಟ್ ಮ್ಯಾಚಿಗಾಗಿ ಆ ಟೀಮ್ ಬಂತು, ಈ ಟೀಮ್ ಬಂತು ಎಂದು ಈ ಸಭೆಯನ್ನು adjourn ಮಾಡುವುದು ಸರಿಯಲ್ಲ. Our work is more important than anything else. It is paramount.

Janab J. MOHAMED IMAM.—Any way I leave it to the Government.

LEGISLATIVE BUSINESS.

Mr. SPEAKER (The Hon'ble Sri V. Venkatappa).—The discussion on the Village Panchayets and District Boards Bill, 1951, may now be resumed.

The Mysore Village Panchayets and District Boards Bill, 1951.

Motion to refer.

*ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ಈ ಗ್ರಾಮ ಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡುಗಳ ಮಸೂದೆಯನ್ನು ಚರ್ಚೆ ಮಾಡುವಾಗ ಬಹಳ ಮುಖ್ಯವಾಗಿ ಒಂದೆರಡು ವಿಚಾರಗಳನ್ನು ನಾನು ಹೇಳಬೇಕಾಗಿದೆ. ನಾನು ಇದನ್ನು ಪರಿಶೀಲಿಸಿದಾಗ ಒಟ್ಟಿನಲ್ಲಿ ಗ್ರಾಮ ಪಂಚಾಯಿತಿಯ ಮಸೂದೆಯನ್ನು ತಿದ್ದುಪಾಟು ಮಾಡುವಾಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬಹುದಾಗಿತ್ತು ಎನ್ನಿಸಿತು. ಈಗ ಸಾಮಾನ್ಯವಾಗಿ ಗ್ರಾಮ ಪಂಚಾಯಿತಿಗಳಲ್ಲಿ ಸ್ಯಾನಿಟೇಷನ್ ಹೇಗಿರಬೇಕು, ಟ್ಯಾಕ್ಸ್ ಹೇಗೆ ಹಾಕಬೇಕು ಎಂಬ ಬಗ್ಗೆ ತಿದ್ದುಪಡಿ ಮಾಡಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಸರ್ಕಾರದವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಪಂಚಾಯಿತಿಗೆ ಸಿವಿಲ್ ಮತ್ತು ಕ್ರಿಮಿನಲ್ ಅಧಿಕಾರವನ್ನು ಕೊಟ್ಟಿದ್ದರೆ ಚೆನ್ನಾಗಿತ್ತು. ಹಿಂದೆ ಇದ್ದ ಹಾಗೆ ಈಗ ಒಂದೊಂದು ಗ್ರಾಮಕ್ಕೂ ಒಂದೊಂದು ಪಂಚಾಯಿತಿ ಇರುವುದಿಲ್ಲ. ಆರು, ಏಳು, ಎಂಟು, ಹತ್ತು ಗ್ರಾಮಗಳು ಸೇರಿ ಒಂದೊಂದು ಪಂಚಾಯಿತಿಯಾಗುವ ಸಂದರ್ಭಗಳಿರುತ್ತವೆ. ಹೀಗಿರುವಾಗ ನೂರು ರೂಪಾಯಿನೊಳಗೆ ಸಿವಿಲ್ ವ್ಯವಹಾರಗಳನ್ನು ಅವರೇ ತೀರ್ಮಾನಿಸಲು ಅವಕಾಶ ಮಾಡಿದ್ದರೆ ಚೆನ್ನಾಗಿತ್ತು,

The Hon'ble Sri K. T. BHASHYAM (Minister for Law and Labour).—We can do it under Civil Courts Act. Not necessarily in this Bill.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇದರಲ್ಲೂ ಮಾಡಬಹುದಾಗಿತ್ತು, ಹೋಗಲಿ, ಅದರಲ್ಲಾದರೂ ಮಾಡಿ.

ಇನ್ನು ಕ್ರಿಮಿನಲ್ ವ್ಯವಹಾರಗಳ ವಿಷಯದಲ್ಲಿ, ಅನೇಕ ಸಣ್ಣ ಸಣ್ಣ ವ್ಯವಹಾರಗಳಿರುತ್ತವೆ. Cattle Trespass Act ಪ್ರಕಾರ ಸಣ್ಣ ಸಣ್ಣ ವ್ಯವಹಾರಗಳಿಗೂ ಹಳ್ಳಿಯವರು ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಹೋಗಬೇಕಾಗಿದೆ. ಇಂತಹ ಸಣ್ಣಪಣ್ಣ ತಕ್ಸೀರುಗಳನ್ನು ವಿಚಾರಣೆ ಮಾಡುವುದಕ್ಕೆ ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ಕೊಡಬಹುದಾಗಿತ್ತು.

The Hon'ble Sri H. SIDDAIYA (Minister for Revenue & Excise).—Those falling within the jurisdiction of th Beench Courts ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹೌದು. ತಮ್ಮ ಸ್ಥಳದಲ್ಲೇ ವಿಚಾರಣೆ ನಡೆದರೆ ಹಳ್ಳಿಯವರು ಸುಳ್ಳು ಹೇಳಲು ಹೆದರಿಕೆ ಪಡುತ್ತಾರೆ. ಸ್ವಲ್ಪ ಅಧಿಕಾರವನ್ನು ಕೊಡಬಹುದಾಗಿತ್ತು. ಪಂಚಾಯಿತಿ ಕಾನೂ

---

* Speech has not been approved by the Members concerned.

ನನ್ನು ತಿದ್ದುಪಾಟುಮಾಡುವ ಈ ಸಂದರ್ಭದಲ್ಲಿ ನಮ್ಮ ಜನರಿಗೆ ಹೆಚ್ಚಿನ ಜವಾಬ್ದಾರಿಯಿಂದ ನಡೆದುಕೊಳ್ಳುವುದನ್ನು ಕಲಿಸಬೇಕು. ಪಂಚಾಯಿತಿಗಳು ತಳಹದಿಯಾಗಿವೆ. ಈಗ ದೇಶದಲ್ಲಿ ವಯಸ್ಕರ ಮತದಾನ ಪದ್ಧತಿ ಜಾರಿಗೆ ಬಂದಿದೆ. ಪಂಚಾಯಿತಿಗಳ ಅಧಿಕಾರವನ್ನು ಸ್ವಲ್ಪ ಸ್ವಲ್ಪವಾಗಿ ಹೆಚ್ಚಿಸುವುದು ಸೂಕ್ತ. ಸಾಮಾನ್ಯವಾಗಿ ಅವರು ಪ್ರಾರಂಭದಲ್ಲಿ ಸ್ವಲ್ಪ ತಪ್ಪುಗಳನ್ನು ಮಾಡಬಹುದು, ಚಿಂತೆಯಿಲ್ಲ. ಹಿಂದೆ ವಿಲೇಜ್ ಮುನ್ಸೀಫ್ ಕೋರ್ಟೆಂದು ಇರಲಿಲ್ಲವೆ? ಈಗ ಈ ಸುಧಾರಣೆ ಮಾಡುವುದಕ್ಕೆ ವಾತಾವರಣ ಚೆನ್ನಾಗಿದೆ. ವಯಸ್ಕರ ಮತದಾನ ಪದ್ಧತಿ ಇದೆ, ಮೇಲೆ ಹತೋಟಿಯನ್ನಿಟ್ಟುಕೊಳ್ಳುವುದಕ್ಕೆ ಒಬ್ಬರು ಬೇರೆ ಕಮಿಷನರನ್ನು ನೇಮಕ ಮಾಡಿದ್ದಾರೆ. ಇಂತಹ ಸರಿಯಾದ ವಾತಾವರಣದಲ್ಲಿ ಇನ್ನೂ ಮುಂದೆ ಒಂದು ಹೆಜ್ಜೆ ಹೋಗಿ ಈ ಸುಧಾರಣೆ ಮಾಡಿದ್ದರೆ ಚೆನ್ನಾಗಿತ್ತು. ಬಹುಶಃ ಇಂಡಿಯಾ ದೇಶದಲ್ಲೇ ಇತರ ಕಡೆಗಳಲ್ಲಿ ಇಂತಹ ಅಧಿಕಾರ ಇದ್ದಂತೆ ನನಗೆ ಜ್ಞಾಪಕ. ನನಗೆ ತಿಳಿದಿರುವಂತೆ ಕಾಶ್ಮೀರದಲ್ಲಿ ಇದೆ ಅಲ್ಲಿಂದ ಇದರ ಸಂಬಂಧವಾದ ಲಿಟರೇಚರ್ ಕೂಡ ನಾನು ತರಿಸಿದ್ದೆ. ಈ ತಿದ್ದುಪಡಿ ಮಾಡಲು ಕಷ್ಟವಿಲ್ಲವೆಂದು ಕಾಣುತ್ತದೆ.

The Hon'ble Sri K. T. BHASHYAM.—We have considered it and we are thinking of taking it up under the Civil Cour s Act and the Criminal Procedure Code.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಮಾಡುತ್ತೇವೆಂದು ಹೇಳುತ್ತಾರೆ. ಸಂತೋಷ.

The Hon'ble Sri K. T. BHASHYAM.—I said "We will consider" and not do.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—We have to insist some new spirit there. ಇನ್ನು ಪಂಚಾಯಿತಿಗಳ ಸದಸ್ಯತ್ವದ ವಿಷಯದಲ್ಲಿ ಒಂದು ವಿಚಾರ ಹೇಳಬೇಕಾಗಿದೆ. ಇದರಲ್ಲಿ ಸದಸ್ಯರ ಸಂಖ್ಯೆ 15ಕ್ಕೆ ಕಡಿಮೆಯಿಲ್ಲದಂತೆಯೂ 2 ಕ್ಕೆ ಜಾಸ್ತಿಯಿಲ್ಲದಂತೆಯೂ ಇರಬೇಕೆಂದಿದೆ. ಇದು ಬಹಳ ಜಾಸ್ತಿ. ಸ್ವಲ್ಪ ಕಡಿಮೆ ಮಾಡಿದರೆ ಒಳ್ಳೆಯದು.

The Hon'ble Sri K. CHENGALARAYA REDDY (Chief Minister).—Punchayets are much bigger now than they were.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—I know there are more members on it and also there are more villages. ಈಗ ಪಂಚಾಯಿತಿ ಸದಸ್ಯರ ಸ್ಥಾನ 15 ರಿಂದ 20ರ ವರೆಗೂ ಇಟ್ಟಿದ್ದೀರಿ. ಮತ್ತು ಮುನಿಸಿಪಾಲಿಟಿಗಳಿಗೂ ಕೂಡ ಅದೇ ರೀತಿ ಇದೆ. ಪಂಚಾಯಿತಿಗಳಲ್ಲಿ ಸದಸ್ಯರು ಒಂದು, ಎರಡು ಮೈಲಿ ದೂರದಿಂದ ಬರಬೇಕಾಗುತ್ತದೆ. ಮೀಟಿಂಗ್‌ಗೆ ಸದಸ್ಯರು ಬರುವುದಕ್ಕೂ ಮೀಟಿಂಗ್ ನಡೆಸುವುದಕ್ಕೂ ಅನುಕೂಲವಾಗುತ್ತದೆಯೇ ಎಂಬುದನ್ನು ಆಲೋಚನೆ ಮಾಡಬೇಕಾಗಿದೆ. ಅಷ್ಟು ಹೆಚ್ಚು ಜನ ಇರುವುದಕ್ಕೆ ಬದಲಾಗಿ 8ರಿಂದ 12ರ ವರೆಗೂ ಇಟ್ಟುಕೊಂಡರೆ ಸಾಕು ಎಂದು ಕಾಣುತ್ತದೆ. ಇನ್ನೊಂದು ವಿಷಯ ಏನೆಂದರೆ ಒಂದು ಪಂಚಾಯಿತಿ ಸ್ಥಾಪನೆ ಮಾಡಲು 2,000ದಿಂದ 5,000ದ ವರೆಗೂ ಪ್ರಜಾಸಂಖ್ಯೆ ಇರಬೇಕೆಂದು ಮಾಡಿದ್ದೀರಿ. ಆದರೆ ಮುನಿಸಿಪಾಲಿಟಿಗೆ ಡೆಫಿನಿಷನ್ ಕೊಟ್ಟಿಲ್ಲ. ಒಂದು ಟೌನ್ ಮುನಿಸಿಪಾಲಿಟಿ ಮಾಡಬೇಕಾದರೆ ಜನಸಂಖ್ಯೆ ಎಷ್ಟಿರಬೇಕೆಂಬುದನ್ನು ಸೂಚಿಸಿಲ್ಲ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಚಿವರು).—ಅದೂ ಇದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನನಗಂತೂ ಸಿಕ್ಕಲಿಲ್ಲ. ಇದ್ದರೆ ನೋಡಬೇಕು. ಅಂತೂ ಗ್ರಾಮ ಪಂಚಾಯಿತಿಯ ಸದಸ್ಯರ ಸಂಖ್ಯೆ 8ರಿಂದ 12ರ ವರೆಗೆ ಇಟ್ಟರೆ ಸಾಕು ಎಂದು ನನ್ನ ಅಭಿಪ್ರಾಯ.

ಇನ್ನು 'Powers of Secretary of Panchayet''' ಎಂದು ಇದೆ. ಈ ಆಕ್ಟ್ ನೋಡಿದ್ದರಲ್ಲಿ ಹಣ ಕಾಸಿನ ವ್ಯವಹಾರ ಮಾಡುವವರು ಯಾರು ಎಂಬುದು ಸ್ಪಷ್ಟವಾಗಿಲ್ಲ. ಚೆಕ್ಕು ಮುಂತಾದುವನ್ನು ಕೊಡುವಾಗ ಸೆಕ್ರೆಟರಿಯವರು ಆಪರೇಟ್ ಮಾಡಬೇಕೇ, ಚೇರ್‌ಮನ್ ಆಪರೇಟ್ ಮಾಡಬೇಕೇ ಎಂಬುದನ್ನು ಹೇಳಿಲ್ಲ.

ಅಧ್ಯಕ್ಷರು.—ಚೇರ್‌ಮನ್ ಎಂದು ಇದೆಯಲ್ಲಾ!

ಶ್ರೀ ಎಚ್. ಬಿ. ಗುಂಡಪ್ಪಗೌಡರು.—Pass bills and sanction estimates up to Rs. 25 ಎಂದು ಇದೆ.

ಅಧ್ಯಕ್ಷರು.—ಚೇರ್‌ಮನ್‌ರವರು ಕೌಂಟರ್ ಸೈನ್ ಮಾಡುತ್ತಾರೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ನಾನು ಹೇಳುತ್ತಿರುವುದು ಕೌಂಟರ್ ಸೈನ್ ವಿಚಾರ ಅಲ್ಲ. ಹಣ ಕೊಡಬೇಕಾದರೆ ಚೆಕ್ಕು ಮುಂತಾದುವುಗಳನ್ನು ಆಪರೇಟ್ ಮಾಡುವವರು ಯಾರು? Duties of the Secretary ಏನು? ಸೆಕ್ರೆಟರಿ ಆಪರೇಟ್ ಮಾಡಬೇಕೇ ಅಥವಾ ಚೇರ್‌ಮನ್ ಆಪರೇಟ್ ಮಾಡಬೇಕೇ?

The Hon'ble Sri H. C. DASAPPA (Minister for Finance and Industries).—Those are for rules.

Sri H. B. GUNDAPPA GOWDA.—They cannot be for rules. It is not a question of counter-signature but it is a question of issuing cheques. Who is the proper authority to issue cheques?

The Hon'ble Sri K. T. BHASHYAM.—That can be decided by rules.

Sri H. B. GUNDAPPA GOWDA.—In other Acts it has been stated; why not here?

ಇನ್ನೊಂದು ವಿಷಯ ಏನೆಂದರೆ ಮುನಿಸಿಪಾಲಿಟಿಯಿಂದ ಕೆಲವು ಪ್ರದೇಶವನ್ನು ತೆಗೆದು ಪಂಚಾಯಿತಿಯಾಗಿ ಮಾಡಬೇಕಾದರೆ ಗೆಜೆಟ್ ನೋಟಿಫಿಕೇಷನ್ ಮಾಡಬೇಕೆಂದು ನಮೂದು ಮಾಡಿದ್ದೀರಿ. ಮುನಿಸಿಪಲ್ ಆಕ್ಟ್ ಸೆಕ್ಷನ್ 7ರ ಪ್ರಕಾರ ಸರ್ಕಾರದ ಉದ್ದೇಶ ಏನಿದೆ ಎಂಬುದನ್ನು ನಮೂದಿಸಿ ಆಯಾಯ ಪ್ರದೇಶದ ಜನಗಳಿಗೆ ತಿಳುವಳಿಕೆ ಕೊಡಬೇಕೆಂದು ಸೂಚಿಸಿದೆ.

The Hon'ble Sri K. T. BHASHYAM.—It is unnecessary. There is a limit of population for constituting a village panchayet. There is also a limit where the city municipalities will be constituted above a certain population. Between the two town municipalities come in

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಾಗಲ್ಲ. ಗ್ರಾಮಪಂಚಾಯಿತಿಗೆ 3000 ದಿಂದ 5000ದ ವರೆಗೆ

(ಶ್ರೀ ಎಚ್. ಬಿ. ಗುಂಡಪ್ಪಗೌಡರು.)

ಜನಸಂಖ್ಯೆ ನಿಗದಿ ಮಾಡಿದ್ದೀರಿ. ಮೂರು ಸಾವಿರಕ್ಕೆ ಮೇಲ್ಪಟ್ಟಿದ್ದರೆ ಟೌನ್ ಮುನಿಸಿಪಾಲಿಟಿಯಾಗಿ ಮಾಡಬಹುದು ಎಂದಿದೆ. ಇದು ಅಷ್ಟು ಸ್ಪಷ್ಟವಾಗಿಲ್ಲ. ಮುಂದೆ ಈ ಮಸೂದೆ ಸೆಲೆಕ್ಟ್ ಸಮಿತಿಗೆ ಹೋದಾಗ ಇದನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಇವೆರಡರ ಜ್ಯೂರಿಸ್‌ಡಿಕ್ಷನ್ ಒಂದಕ್ಕೊಂದಕ್ಕೆ overlap ಆಗದ ಹಾಗೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು, I should like to draw attention to clause 7 of the Mysore Town Municipalities Bill where it is stated:

> "Not less than two months before the publication of any notification declaring any local area a town municipality, or altering the limits of any such municipality or declaring that any local area shall cease to be a town municipality, the Government shall cause to be published in the *Mysore Gazette*, in English and Kannada and to be posted up in conspicuous places in the said local area,......"

ಪಂಚಾಯಿತಿಗೆ ಸಂಬಂಧಪಟ್ಟಂತೆ ಈ ರೀತಿಯ ಒಂದು ಪ್ರಾವಿಜನ್ ಇಲ್ಲ. ಏಕೆಂದರೆ ಪಂಚಾಯಿತಿಗಳ ವಿಷಯದಲ್ಲಿ ಸರ್ಕಾರದವರಿಗೆ ನಾಳೆ ಇದು ಒಂದು ದೊಡ್ಡ ಸಮಸ್ಯೆಯಾಗಿ ಕಾಳಿತಾಕೊಳ್ಳುತ್ತದೆ. ಒಂದು ಪಂಚಾಯಿತಿಯಿಂದ ಕೆಲವು ಗ್ರಾಮಗಳನ್ನು ತೆಗೆದು ಇನ್ನೊಂದು ಪಂಚಾಯಿತಿ ಮಾಡಬೇಕೆಂದರೆ; ಒಂದು ದೊಡ್ಡ ಪೈಪೋಟಿ ಪ್ರಾರಂಭವಾಗಿ ಈ ಪಂಚಾಯಿತಿಗೆ ಸೇರಿಸಕೂಡದು, ಆ ಪಂಚಾಯಿತಿಗೆ ಸೇರಿಸಕೂಡದು ಎಂದು ಭಿನ್ನಾಭಿಪ್ರಾಯಗಳುಂಟಾಗುತ್ತವೆ. ಗೆಜೆಟ್ ನೋಟಿಫಿಕೇಷನ್ ಮಾಡಿದರೂ ಕೂಡ ಅದು ಆ ಹಳ್ಳಿಗಳಿಗೂ ತಲುಪುವುದೇ ಇಲ್ಲ. ಸಾಧಾರಣವಾಗಿ ನೀವೇನೋ Published in such and such a Gazette Notification ಎಂದು ಹೇಳಿಬಿಡುತ್ತೀರಿ. ಆದರೆ ಅದನ್ನು ಓದುವವರು ಎಷ್ಟು ಜನ ಇರುತ್ತಾರೆ? ಏನೇ ಆಗಲಿ ....

The Hon'ble Sri K. T. BHASHYAM.—But it is valid without their knowledge.

Sri H. B. GUNDAPPA GOWDA.—Why should it be left to the rules? ಆದ್ದರಿಂದ ಟೌನ್ ಮುನಿಸಿಪಾಲಿಟಿಗಳಿಗೆ ಸಂಬಂಧಪಟ್ಟಂತೆ ಯಾವ ರೀತಿ ಗೆಜೆಟ್ ನೋಟಿಫಿಕೇಷನ್ ಮಾಡುತ್ತೀರೋ ಅದೇ ರೀತಿ ಪಂಚಾಯಿತಿಗಳಿಗೆ ಸಂಬಂಧಪಟ್ಟಂತೆಯೂ ಆಯಾಯಾ ಹಳ್ಳಿಗಳಲ್ಲಿ ಚಾವಡಿ ಅಥವಾ ಪೋಲೀಸ್ ಸ್ಟೇಷನ್ ಮುಂದೆ ನೋಟಿಫಿಕೇಷನ್ ಹಾಕಿ ತಿಳಿವಳಿಕೆ ಕೊಡಬೇಕು. ಈ ರೀತಿ ಒಂದು ಪ್ರಾವಿಜನ್ ಇರಬೇಕೆಂದು ಒತ್ತಿ ಹೇಳುತ್ತೇನೆ.

The Hon'ble Sri R. CHENNIGARAMIAH.—On page 7 of the Mysore Town Municipalities Bill it is stated that—

> "It shall not be lawful......to constitute any town municipality in any area of which the population is less than three thousand............",

The Hon'ble Sri K. T. BHASHYAM.—We can have a village panchayet in an area which has a population up to 5,000. A Town Municipal Council may also be constituted if the population is above 3,000 but it cannot be done if it is below 3,000. Between 3,000 and 5,000 a town municipality can be formed. But there is no need for us to fix the population for town municipality.

Sri H. B. GUNDAPPA GOWDA.—I am not concerned with town or city municipality. The question is about the population being 3,000 and 5,000.

The Hon'ble Sri K. T. BHASHYAM.—Up to 5,000 we can form a village panchayet. Should there be any special reason to constitute a town municipality, where the population is between 3,000 and 5,000 we are permitted to do so. Below 3,000 we cannot do so.

The Hon'ble Sri R. CHENNIGARAMIAH.—I have made it clear yesterday alone that if a group of villages (more than one village), has got a population within two thousand and five thousand, they can be formed into a Panchayet. If one village has got a population of more than five thousand, it can become a Municipality.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಗೇನೋ ಅದು ಸ್ವಲ್ಪಮಟ್ಟಿಗೆ ಅರ್ಥವಾಯಿತು; ಅದಕ್ಕಾಗಿ ವಂದನೆಗಳು.

ಆಮೇಲೆ, ಈ ಮಸೂದೆಯ ಪ್ರಕಾರ ವಿಲೇಜ್ ಪಂಚಾಯಿತಿಗಳಲ್ಲಿ ವೈಸ್ ಪ್ರೆಸಿಡೆಂಟರೂ ಇರಬೇಕೆಂದು ಮಾಡಿದ್ದೀರಿ. ಇದಕ್ಕೆ ಅವಶ್ಯಕತೆಯಿದೆಯೇ ಎಂದು ನಾನು ಕೇಳುತ್ತೇನೆ. ವೈಸ್‌ಪ್ರೆಸಿಡೆಂಟ್ ಎಂದು ಇದ್ದ ಮೇಲೆ ಇನ್ನು ಅವರಿಗೆ ಕರ್ತವ್ಯಗಳನ್ನು ಗೊತ್ತುಮಾಡುವುದು, ಅವರ ಅಧಿಕಾರಗಳನ್ನು ಗೊತ್ತುಮಾಡುವುದು ಮುಂತಾದಕ್ಕೆಲ್ಲಾ ಹೋಗಿ ಜಿಜ್ಞಾಸಕ್ಕೆಡೆ ಕೊಡುವುದು ಸರಿಯಲ್ಲ. ಆದ್ದರಿಂದ ಬರೀ ಛೇರ್ಮನ್ನರೇ ಇದ್ದರೆ ಸಾಕು ಎಂದು ನನ್ನ ಅಭಿಪ್ರಾಯ.

The Hon'ble Sri K. T. BHASHYAM.—But it is Local Self-Government!

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇರಬಹುದು. ಅದಕ್ಕೇ, ಛೇರ್ಮನ್ನರನ್ನು ಇಟ್ಟುಕೊಳ್ಳಿ; ವೈಸ್‌ಪ್ರೆಸಿಡೆಂಟರೇನೂ ಬೇಕಿಲ್ಲ.

ಆ ಮೇಲೆ, ಈ ಪಂಚಾಯಿತಿ ಆಕ್ಟ್ ಪ್ರಕಾರ ಕೆಲಗಳ ವಿಚಾರದಲ್ಲಿ ಪಂಚಾಯಿತಿಗಳವರಿಗೆ ಹೆಚ್ಚು ಅಧಿಕಾರ ಕೊಟ್ಟಿದ್ದೀರಿ. ಇದು ಸಂತೋಷದ ವಿಚಾರ. ಆದರೆ ಸರ್ಕಾರದವರು ಪಂಚಾಯಿತಿಗಳಿಗೆ ಗ್ರಾಂಟ್‌ಗಳನ್ನು ಕೊಡುವ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಅನುಮಾನಕ್ಕೆ ಅವಕಾಶವಿದೆ. 38 (1)ನೆಯ ಸೆಕ್ಷನ್ನಿನಲ್ಲಿ

> "The Government shall *ordinarily* assign to a Panchayet an amount equal to six and one-fourth per cent of the land revenue collected in the area of the Panchayet"

ಎಂದು ಹೇಳಿ ಸರ್ವೇಸಾಮಾನ್ಯವಾಗಿ ಹೀಗೆ ಕೊಡಬೇಕೆಂದಿದೆ ಅಷ್ಟೆ.

ಮಾನ್ಯ ಶ್ರೀ ಚೆನ್ನಿಗರಾಮಯ್ಯನವರು.—ಈ $6\frac{1}{4}$% ನ್ನು ಕೊಡುವುದಲ್ಲದೆ ಅದರ ಜೊತೆಗೆ ಸಬ್‌ವೆನ್ಷನ್ ಬೇರೆ ಕೊಡಬೇಕೆಂದಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಾಗೆ ಏನ ದನ್ನೂ ಕೊಡಬೇಕೆಂದು ಇಲ್ಲ ಹೇಳಿಲ್ಲ. "It shall be given" ಎಂದು ಹೇಳುವುದಕ್ಕೆ ಬದಲು "shall ordinarily assign" ಎಂದು ಹೇಳಿದ್ದೀರಿ. ಇಲ್ಲ "Ordinarily" ಎಂಬುದರ ಅರ್ಥವೇನು. ಸರ್ಕಾರದ ರಿಗೆ "Option" ಕೊಟ್ಟ ಹಾಗಾಯಿತು! I therefore propose for the deletion of that word in both the sub-clauses 1 and 2. ಸರ್ಕಾರದಲ್ಲಿ ಹಣವಿಲ್ಲವೆ ಹೋದರೆ ಅರ್ಥಿಕ ಸಚಿವರು ಇದಕ್ಕೆ ಹಣ ಕೊಟ್ಟರೆ ಕೊಡಬಹುದು, ಇಲ್ಲದಿದ್ದರೆ ಬಿಡಬಹುದು.

The Hon'ble Sri H. C. DASAPPA.—In certain case ನಲ್ಲಿ ಹಾಗಾಗಬಹುದು ಅಷ್ಟೆ. It is not obligatory.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—I want that it should be obligatory. Otherwise, what is the use of this Local Self-Government institution?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—That cannot be.

Sri H. B. GUNDAPPA GOWDA.—That should be. I am saying that it is very necessary. What is the total amount you are paying every year now? After all by this you are guaranteeing a sum of Rs. 25 lakhs. Otherwise, you are giving more than Rs. 25 lakhs if you take the average; you have at times given Rs. 40 lakhs and Rs. 50 lakhs.

The Hon'ble Sri R. CHENNIGARAMIAH.—It is not Rs. 25 lakhs, it is 25 per cent.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—Never mind.

ಶ್ರೀ ಎಲ್. ಸಿದ್ದಪ್ಪನವರು.—It will not be Rs. 25 lakhs for the village panchayets!! ನೀವೀಗ ಗ್ರಾಮಪುನರುಜ್ಜೀವನಕ್ಕಾಗಿ ಎಷ್ಟು ಕೊಡುತ್ತಿದ್ದೀರಿ! ನಿಮ್ಮ ಬಡ್ಜೆಟ್ ಭಾಷಣದಲ್ಲಿ ಮಾತ್ರ ಇದಕ್ಕಾಗಿ ಅಷ್ಟು ಕೊಟ್ಟಿದ್ದೇವೆ, ಇಷ್ಟು ಕೊಟ್ಟಿದ್ದೇವೆಂದು ಹೇಳುತ್ತೀರಿ ಅಷ್ಟೆ. ಈ ಸಾರಿಯೂ 40-50 ಲಕ್ಷ ರೂಪಾಯಿಗಳವರೆಗೆ ಕೊಟ್ಟಿದೆಯೆಂದು ಹೇಳಿದಿರಿ. ಆದರೆ ವಾಸ್ತವವಾಗಿ ಕೊಟ್ಟಿರುವುದು ನೋಡಿದರೆ ಬಹಳ ಕಡಿಮೆ. ಹಾಗೆಯೇ ಮುಂದೆ ಇದರಲ್ಲಿ ಕೊಡುವುದೂ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—But this is in addition to the existing sources of income.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—I am not speaking of the District Boards; I am speaking of the Village Panchayets. ಈಗ ನೋಡಿದರೆ ವಿಲೇಜ್ ಪಂಚಾಯಿತ್ತಿಗಳಿಗೆ ಕೊಟ್ಟಿರತಕ್ಕ ಹಣವನ್ನೇ ಪೂರ್ತಿಯಾಗಿ ಖರ್ಚು ಮಾಡುತ್ತಿಲ್ಲ. ಅವರಿಗೆ ಎಲ್ಲಾ ಹಣವನ್ನೂ ಖರ್ಚುಮಾಡಿ ಎಂದು ಹೇಳುತ್ತಿದ್ದೀರಾ! ಈಗೇನೋ ಹಣ ಒದಗಿಸಿರಬಹುದು. ಆದರೆ ಇದೇ ಮನೋಭಾವ ಮುಂದೆಯೂ ಇರುತ್ತದೆಯೇ? ಕೈಯಲ್ಲಿ ದುಡ್ಡಿದ್ದರೆ ಕೊಡಬಹುದು; ಇಲ್ಲದಿದ್ದರೆ ಖೋತಾಮಾಡಬಹುದು. ಪಂಚಾಯಿತ್ತಿಗಳ ಅಭಿವೃದ್ಧಿ ಸರಿಯಾಗಿ ಆಗಬೇಕಾದರೆ ಈ ವಿಷಯಕ್ಕೆ ನಾವು ಪ್ರಥಮತಃ ಗಮನ ಕೊಡಬೇಕು. ಇಲ್ಲಿ ಅ ಕ್ಕೆ ಹಣ ಒದಗಿಸುವ ಏರ್ಪಾಡು ಮಾಡಿದ್ದರೆ ಹೇಗೆ? I want to place this on a statutory basis.

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—May I explain why that word 'Ordinarily' is included? There are some village panchayets which do not get as much money as they need. ಕೆಲವು ಪಂಚಾಯಿತ್ತಿಗಳಿಗೆ ಹೆಚ್ಚಿಗೆ ಖುಷ್ಕಿ ಪ್ರದೇಶವೇ ಸೇರಿರಬಹುದು. ಅ ಥವರಿಗೆ ಕೇವಲ $\frac{1}{4}$% ಜಮಾನು ಕಂದಾಯ ಕೊಡುವುದರಿಂದ ಏನೂ ಹೆಚ್ಚಿಗೆ ಹಣ ಬಂದಂತಾಗುವುದಿಲ್ಲ; ಇನು ಕೆಲವು ಪಂಚಾಯಿತ್ತಿಗಳಲ್ಲಾದರೂ ಹೆಚ್ಚಿಗೆ ಬಾಗಾಯಿತು ಮತ್ತು ತರಿ ಪ್ರದೇಶಗಳು ಅವಕ್ಕೆ ಸೇರಿದ್ದು ಬೇಕಾದಷ್ಟು ಹಣ ಜಮಾನು ಕಂದಾಯದ ರೂಪದಲ್ಲಿ ವಸೂಲಾಗುತ್ತದೆ. ಆದರೆ ಅಂಥವರಿಗೆ ಈ ಆಕ್ಟಿನ ಪ್ರಕಾರ ಒದಗುವ ಪೂರಾ ಹಣವನ್ನೂ ಖರ್ಚು ಮಾಡುವುದಕ್ಕೆ ಸಾಧ್ಯವಿಲ್ಲದೆ ಇರಬಹುದು. ಅವರಿಗೆ ಬಲಾತ್ಕಾರವಾಗಿ ಈ ಹಣ ಕೊಟ್ಟರೆ ಅವರು ವ್ಯಥಾ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ಅಂಥ ಸಂದರ್ಭದಲ್ಲಿ ಸ್ವಲ್ಪ ಖೋತಾಮಾಡಿ ಬೇರೆ ಇನ್ನಾವುದಾದರೂ ಅವಶ್ಯಕತೆಯಿರುವ ಕಡೆಗೆ ಕೊಡುವುದಕ್ಕೆ ಅವಕಾಶವಿರಲೆಂದು ಇಲ್ಲಿ 'Ordinarily' ಎಂಬ ಪದವನ್ನು ಸೇರಿಸಿದೆ, ಅಷ್ಟೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇಲ್ಲಿ ಹೇಳಿದೆ, 38 (2)ನೆಯ ಕ್ಲಾಜಿನಲ್ಲಿ,

"The Government shall also ordinarily assign to all the Panchayets in the State an amount equal to six and a one-fourth per cent of the land revenue collected in the State, the amount to be allotted to each panchayet being such as the Government may from time to time determine."

ಎಂದು. ಇದನ್ನು ನಾನು ಒಪ್ಪುತ್ತೇನೆ. ಆ ಅಧಿಕಾರವನ್ನಿಟ್ಟುಕೊಳ್ಳಿ. ಒಂದೊಂದು ಪಂಚಾಯಿತ್ತಿಗೂ $6\frac{1}{4}$% ಕೊಟ್ಟರೆ ಕೆಲವಕ್ಕೆ ಜಾಸ್ತಿ ಹಣ ಬಂದಂತಾಗಿ ಅವುಗಳಿಗೆ ಖರ್ಚುಮಾಡುವುದಕ್ಕಾಗುವುದಿಲ್ಲವೆಂದು ಹೇಳಿದಿರಿ. ಆದ್ದರಿಂದ ಇದನ್ನು ಹಂಚಿಕೆಮಾಡುವ ಅಧಿಕಾರವನ್ನು ನೀವು ತೆಗೆದುಕೊಳ್ಳುವುದು ಸೂಕ್ತ. ಆದರೆ 38 (1)ರಲ್ಲಿರುವುದು......................

ಮಾನ್ಯ ಶ್ರೀ ಕೆ. ಟಿ. ಭಾಷ್ಯಂರವರು.—ಸರ್ವೇಸಾಧಾರಣವಾಗಿ six and a quarter per cent of the land revenue collected in the area of the panchayet will be given. ಆದರೆ, ಕೆಲವು ಪಂಚಾಯಿತ್ತಿಗಳ ಪ್ರದೇಶದಲ್ಲಿ ಹೆಚ್ಚಿಗೆ ಬಾಗಾಯಿತು ಮತ್ತು ತರೀ ಪ್ರದೇಶಗಳೇ ಬೇಕಾದಷ್ಟಿದ್ದು ಹೆಚ್ಚಿಗೆ ಹಣ ಬಂದು ಅಷ್ಟೂ ಖರ್ಚು ಮಾಡುವುದಕ್ಕೆ ಅವಶ್ಯಕತೆಯಿರುವುದಿಲ್ಲ. ಬಲಾತ್ಕಾರಮಾಡಿ ಅವರನ್ನು ಖರ್ಚು ಮಾಡಬೇಕೆಂದು ಹೇಳುವುದು ಸರಿಯಲ್ಲ. ಇನ್ನು ಕೆಲವು ಪ್ರದೇಶಗಳಲ್ಲಿ ಹೆಚ್ಚಿನ ಅವಶ್ಯಕತೆಯಿದ್ದರೂ ದುಡ್ಡಿರುವುದಿಲ್ಲ. ಆದ್ದರಿಂದ ಇಂಥ ಸಂದರ್ಭಗಳಲ್ಲಿ ಹಣ ತೆಗೆದುಕೊಂಡು Pool ಮಾಡಿ ಎಲ್ಲಾ ಕಡೆಗೂ ನೋಡಿಕೊಂಡು ಹಂಚಿಕೆ ಮಾಡುವುದಕ್ಕಾಗಿ ಈ ಎರಡನೆಯ ವಿಧಿಯನ್ನು ಇಟ್ಟುಕೊಂಡಿದೆ.

ಶ್ರೀ ಎಲ್. ಸಿದ್ದಪ್ಪನವರು. —38 (2)ನೆಯ ವಿಧಿಯನ್ನೇನೋ ಹಣವನ್ನು ಹಂಚಿಕೆ ಮಾಡುವುದರಲ್ಲಿ ಸ್ವಲ್ಪ

(ಶ್ರೀ ಎಲ್. ಸಿದ್ದಪ್ಪನವರು.)

discretion ಉಪಯೋಗಿಸಿ ಹಂಚುವುದಕ್ಕೆ ಅವಕಾಶ ವಿರಲೆಂದು ಮಾಡಿಕೊಂಡಿದ್ದೀರಿ. ಆದರೆ 3- (1)ನೆಯ ವಿಧಿಯನ್ನೇಕೆ ಮಾಡಿಕೊಂಡಿದ್ದೀರಿ! "Ordinarily" ಎನ್ನುವುದಕ್ಕೆ ನೀವು ಹೇಳಿದಷ್ಟು ಮಾತ್ರ ಅರ್ಥಮಾಡುವುದಾದರೆ ಸರಿಯಾಗಿಲ್ಲ. ಅದಕ್ಕಿಂತ ಸ್ವಲ್ಪ ಮುಂದೂ ಹೋಗಿ ನಿಮ್ಮಲ್ಲಿ ದುಡ್ಡಿಲ್ಲವೆಂದು ಪೂರಾ ಹಣವನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರೆ?

The Hon'ble Sri R. CHENNIGA-RAMIAH.—25% will be exclusively reserved for these schemes.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಕರೀ ಮಸ್ತು ಬಾಗಾಯಿತು ಪ್ರದೇಶಗಳು ಹೆಚ್ಚಾಗಿ ಇದ್ದು ಹಣ ಹೆಚ್ಚಾಗಿ ಆಗಿ ಪಂಚಾಯಿತಿಗಳು ಪೂರಾ ಖರ್ಚು ಮಾಡುವುದಿಲ್ಲ ಎಂದು ಹೇಳಿದಿರಿ. ಅವುಗಳಿಗೆ ಪೂರಾ ಹಣ ಖರ್ಚು ಮಾಡಿರೆಂದು ಏಕೆ ಹೇಳಕೂಡದು. ತಮಗೇ ಗೊತ್ತಿರುವಂತೆ ಅನೇಕ ಹಳ್ಳಿಗಳಲ್ಲಿ ಮಲೇರಿಯಾ ನಿವಾರಣೆ ಕೆಲಸ ಮುಂತಾಗಿ ಎಷ್ಟೋ ಮುಖ್ಯ ಕೆಲಸಗಳನ್ನು ಕೈಕೊಳ್ಳಬಹುದಾಗಿರುತ್ತೆ. ಹೆಚ್ಚಾಗಿ ಹಣವಿದ್ದರೆ ಅವುಗಳು ಖರ್ಚುಮಾಡುವಂತೇಕೆ ನೀವು ಬಲಾತ್ಕರಿಸಕೂಡದು! ಅದು ಬಿಟ್ಟು, ಅವರ ಹಣವನ್ನು ಕಿತ್ತುಕೊಳ್ಳುವುದು ಸೂಕ್ತವಲ್ಲ. The Hon'ble Law Minister will agree with me, I hope, that there is scope for interpretation in future Government that it may not be necessary to give 6¼ per cent.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—The Hon'ble Member is on the Select Committee. If, after considering all the aspects it is considered desirable, we shall see. Let us examine it.

Sri L. SIDDAPPA.—Let him raise all these points so that such of those who are not in the Select Committee may give their opinion.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆಮೇಲೆ, 40 (2)ನೆಯ ಸೆಕ್ಷನ್ ವಿಚಾರದಲ್ಲಿ ಒಂದು ಮಾತು. ಅದರಲ್ಲಿ "such tax shall be levied at rates not less than Rs. 6 or more than Rs. 10 per family per annum." ಎಂದಿದೆ. ಇದು ಸ್ವಲ್ಪಮಟ್ಟಿಗೆ ಜಾಸ್ತಿಯೆಂದೇ ಹೇಳಬೇಕು. 5 ರೂಪಾಯಿ ಹಾಕಬಹುದೆಂದು ಹೇಳಿದ್ದರೆ ಸರಿಯಾಗಿತ್ತು.

ಅಧ್ಯಕ್ಷರು.—ಹಳ್ಳಿಗಳಲ್ಲಿ ಗ್ರಾಮಪಂಚಾಯಿತಿ ಕೆಲಸಕ್ಕೆ ಪ್ರತಿಯೊಬ್ಬನೂ ಇಷ್ಟು ದಿವಸ ಬರಬೇಕೆಂದು ಗೊತ್ತುಮಾಡಿರುತ್ತದೆ. ಈ ಕೆಲಸಗಳನ್ನು ಕಾಲ ಕಾಲಕ್ಕೆ ಮಾಡಿದರೆ ಎಷ್ಟು ಖರ್ಚಾಗುತ್ತದೆಂದು ಲೆಕ್ಕ ಹಾಕಿಕೊಂಡು ಇಷ್ಟು ಟ್ಯಾಕ್ಸ್ ಹಾಕಬಹುದೆಂದು ಗೊತ್ತುಮಾಡಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಿಂದೆಯೂ ಇದೇ ರೀತಿ ವಿಲೇಜ್ ಪಂಚಾಯಿತಿ ಕೆಲಸಗಳಿಗೆ ಬಾರದೆ ಹೋದರೆ ಇಷ್ಟು ಹಣ ಕೊಡಬೇಕೆಂದು ಹೇಳಿತ್ತು.

ಅಧ್ಯಕ್ಷರು.—ಹೌದು, ಹೌದು. ಅದನ್ನು ನೋಡಿಯೇ ಈಗ ಮಾಡಿರುವುದು. ಅಲ್ಲಿನ ಕೆಲಸಗಳನ್ನೆಲ್ಲಾ ಲೆಕ್ಕ ಹಾಕಿಕೊಂಡರೆ ಸ್ವಲ್ಪ ಹೆಚ್ಚುಕಡಿಮೆ ಇಷ್ಟು ಆಗಬಹುದೆಂದು ಮಾಡಿದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಆದರೂ 6 ರೂಪಾಯಿಯೆನ್ನುವುದು ಜಾಸ್ತಿ. ಏಕೆಂದರೆ, ಅವರುಗಳು ಬರೀ ಇದನ್ನೇ ಕೊಡುವುದಿಲ್ಲ ಇದಲ್ಲದೆ ಮೊಹತರ್ಫಾ ಮುಂತಾಗಿ ಬೇರೆ ತೆರಿಗೆಗಳನ್ನೂ ಕೊಡಬೇಕಾಗಿರುತ್ತದೆ. ಅವನು ಹಾಗೆ ಪಂಚಾಯಿತಿಗಳಿಗೆ ಕೊಡತಕ್ಕದ್ದೇ ಅತನಿಗೆ ಭಾರವಾಗಿದೆ. But he has to pay. It is not optional for the payee. ಅವನು ಮೊಹತರ್ಫಾ ಕೊಡುತ್ತಿದ್ದಾನೆ.

ಮಾನ್ಯ ಶ್ರೀ ಕೆ. ಟಿ. ಬಾಷ್ಯಂ ರವರು.—ಅದೆಲ್ಲ ತೃಣಮಾತ್ರದ್ದು. ಆತನ ಈ ದಿವಸ ತಿಂಗಳು ತಿಂಗಳಿಗೆ ಅಥವ ದಿವಸಕ್ಕೊಂದು ಕೊಡತಕ್ಕದ್ದನ್ನೆಲ್ಲಾ ಸೇರಿಸಿದರೆ ವರ್ಷಕ್ಕೆ 12 ರೂಪಾಯಿಗಳಾದರೆ ಹೆಚ್ಚಾಯಿತು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅಧಿಕಾರವನ್ನೇನೋ ಕೊಟ್ಟಿದ್ದಾರೆ ಆದರೆ negligence of workಗೆ ಏನು ತೋರಿಸಿದ್ದಾರೆ! ಕೈಗೆ ಸಿಕ್ಕಿರತಕ್ಕ ಲೆಕ್ಕದ ಪುಸ್ತಕ ಮತ್ತು ಹಣ ಇತ್ಯಾದಿಗಳನ್ನೆಲ್ಲಾ ಆತನು ಎತ್ತಿಕೊಂಡು ಹೋದರೆ ಏನು ಮಾಡಬೇಕು! ಹಿಂದೆಲ್ಲ ಬೇಕಾದಷ್ಟು ಹಾಗೆ ನಡೆದಿವೆ. ಡಿಸ್ಟ್ರಿಕ್ಟ್ ಬೋರ್ಡ್ ಆಕ್ಟಿನಲ್ಲಿ for instance, Section 76 of the District Boards Act ನಲ್ಲಿ ಪೀನಲ್ ಕ್ಲಾಸ್ ಇದೆ. ಆ ರೀತಿ ತಾವೂ ಇಲ್ಲಿ ಈ ಬಗ್ಗೆ ಒಂದು ಪೀನಲ್ ಕ್ಲಾಜ್ ಹಾಕತಕ್ಕದ್ದು ಆವಶ್ಯಕವಾಗಿರುತ್ತೆ. ಇನ್ನು ಮುಂದೆ ಈತನ ಕೈಗೆ ಹೆಚ್ಚು ಹಣ ಬರತಕ್ಕ ಅವಕಾಶವಿದೆ ಆದುದರಿಂದ ಹೀಗೆ ಒಂದು ನಿರ್ಬಂಧ ಮತ್ತು ಜವಾಬ್ದಾರಿ ಆತನ ಮೇಲೆ ಹಾಕಲೇಬೇಕೆಂದು ಸೂಚಿಸುತ್ತೇನೆ. ಈ ಸಂಬಂಧವಾಗಿ ನನ್ನ ಕಣ್ಣು ಎದುರಿನಲ್ಲಿ ನಡೆದಿರುವಂಥ ಒಂದು ನಿದರ್ಶನವನ್ನು ತಮಗೆ ತಿಳಿಸಬೇಕಾಗಿದೆ. ಹಿಂದೆ ಒಂದಾವರ್ತಿ ಒಬ್ಬ ಗ್ರಾಮಪಂಚಾಯಿತಿ ಛೇರ್ಮನ್ ದುಡ್ಡನ್ನು ದುರ್ವಿನಿಯೋಗ ಮಾಡಿದ್ದಾನೆಂದು ತಿಳಿದುಬಂತು. ಆಗ ಆತನ ಪಂಚಾಯಿತಿ ಆಫೀಸಿಗೆ ಬೀಗಹಾಕಿ ಮುದ್ರೆ ಎಲ್ಲಾ ಮಾಡಿ ಲೆಕ್ಕ ಪುಸ್ತಕ ಇತ್ಯಾದಿಗಳೆಲ್ಲ ಹೋಗಿದ್ದಾಗ್ಯೂ ಅವರನ್ನು ಕೇಳತಕ್ಕವರೇ ಈ ದಿವಸದವರೆಗೂ ಒಬ್ಬರೂ ಇಲ್ಲ. ಆದರೆ ನಾಳೆ ಇಂಥಾದ್ದಕ್ಕೆಲ್ಲಾ ಅವಕಾಶವಿರಬಾರದೆಂದೇ ನಾನು ಈಗಲೇ ತಮಗೆ ಸೂಚನೆ ಕೊಡುತ್ತಿದ್ದೇನೆ. ಜವಾಬ್ದಾರಿಯುಳ್ಳಂಥ ಪ್ರತಿಯೊಬ್ಬನಿಗೂ ಒಂದಲ್ಲ ಒಂದು ರೀತಿಯ ಭಯವಿದ್ದೇ ತೀರಬೇಕು.

ಇನ್ನು ಜಿಲ್ಲಾ ಬೋರ್ಡುಗಳ ವಿಚಾರದಲ್ಲಿ ಸದಸ್ಯರ ಸಂಖ್ಯೆಯನ್ನು 25 ಸಾವಿರ ಪ್ರಜೆಗಳಿಗೊಬ್ಬರಂತೆ ಇರಬೇಕೆಂದು ಒಂದು ಕಂಡೀಷನ್ ಹಾಕಿದ್ದಾರೆ. ಆದರೆ ನಮ್ಮಲ್ಲಿರತಕ್ಕ ಕೆಲವು ಜಿಲ್ಲೆಗಳ ಜನಸಂಖ್ಯೆ ಸುಮಾರು 4½ ಲಕ್ಷದಿಂದ ಪ್ರಾರಂಭವಾಗಿ 6 ಲಕ್ಷಕ್ಕೆ ಅಷ್ಟರಾಗುವಂಥ ಜಿಲ್ಲೆಗಳೂ ಇವೆ. ಈಗ ಒಂದು ಜಿಲ್ಲೆಯಲ್ಲಿ 5 ಲಕ್ಷ ಪ್ರಜಾಸಂಖ್ಯೆ ಇದೆಯೆಂದು ಭಾವಿಸೋಣ. ಆಗ ತಮ್ಮ ಲೆಕ್ಕದ ಪ್ರಕಾರ ಅಲ್ಲಿ 20 ಜನ ಸದಸ್ಯರು ಮಾತ್ರ ಇರಲು ಅವಕಾಶವಿದೆ. ಹೀಗೆ ಕೇವಲ 15-20 ಜನಗಳಿಗೊಂದು ಜಿಲ್ಲಾ ಬೋರ್ಡ್ ಸಭೆಯಿರಬೇಕೆಂದು ಹೇಳತಕ್ಕದ್ದು ಯಾವ ನ್ಯಾಯ? ಅದೆಷ್ಟು ಆಭಾಸವಾಗಿ ಕಾಣುತ್ತದೆ! ಆದರೆ ಸ್ವಲ್ಪ ಹೆಚ್ಚುಕಡಿಮೆ ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡ್ ಸದಸ್ಯರುಗಳ ಸಂಖ್ಯೆ ಒಂದೇ ಆಗಿರುತ್ತದೆ. ಆದರೆ ಈ ವಿಧಾನ ಅಷ್ಟು ಸುಗಮವಾಗಿದ್ದಂತೆ ಕಾಣುತ್ತಿಲ್ಲ. ಇದನ್ನು ಬೇರೆ ರೀತಿಯಲ್ಲಿ ತಿದ್ದುಪಡಿ ಮಾಡುವುದು ಸೂಕ್ತವೆಂದು ಹೇಳುತ್ತೇನೆ. ಹೇಗೆಂದರೆ ಕನಿಷ್ಠ ಪರಿಮಿತಿಯನ್ನು 30 ಅಥವ 32 ಎಂದು ನಿರ್ಧರಿಸಿ ಮ್ಯಾಗ್ಸಿಮಂನಲ್ಲಿ ನೀವು ಬೇಕಾಗಿದ್ದರೆ ಹೆಚ್ಚು ಪ್ರಜಾಸಂಖ್ಯೆ ದಾವಾಷ

ಪ್ರಕಾರ ಹೆಚ್ಚುಕಮ್ಮಿ ಮಾಡುವಂತೆ ಮಾಡಬಹುದು. ಆದುದರಿಂದ ಈ ಬಗ್ಗೆ ಕೇವಲ ಪ್ರಜಾಸಂಖ್ಯೆ ಒಂದರ ಆಧಾರದ ಮೇಲೆ ಹೋಗಿರತಕ್ಕದ್ದು ಸರಿಯಲ್ಲವೆಂದು ನನ್ನ ಭಾವನೆ.

ಶ್ರೀ ಎಲ್. ಸಿದ್ದಪ್ಪನವರು.—You exclude urban area.

ಅಧ್ಯಕ್ಷರು.—ಅರ್ಬನ್ ಏರಿಯಾವನ್ನು ಕೈಬಿಟ್ಟಲ್ಲಿ ಟೌನ್ ವಿಚಾರಕ್ಕೆ ಆಗ ಏನು ಮಾಡುತ್ತೀರಿ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—It equally applies to all. ಈಗ ಜಿಲ್ಲಾ ಬೋರ್ಡುಗಳ ವಿಚಾರ ತೆಗೆದುಕೊಂಡರೆ ನಮ್ಮ ಸಂಸ್ಥಾನದಲ್ಲಿ ಚಿಕ್ಕ ಮಗಳೂರು ಮತ್ತು ಹಾಸನ ಈ ಜಿಲ್ಲೆಗಳಲ್ಲಿ ಪ್ರಜಾ ಸಂಖ್ಯೆ ಕೇವಲ 5-6 ಲಕ್ಷವಿರಬಹುದು. ಆದರೆ ಇದನ್ನೇ ನಾನು ಪ್ರಾಮುಖ್ಯವಾಗಿ ಗಮನಿಸಿ ಹೇಳುತ್ತಿಲ್ಲ. ಸಾರ್ವತ್ರಿಕವಾಗಿ ಜಿಲ್ಲಾ ಬೋರ್ಡಿಗೆ 30 ಜನಗಳಿಗಾದರೂ ಕಮ್ಮಿ ಇರದಂತೆ ಇರಬೇಕೆಂದು ನಾನು ಸೂಚನೆ ಕೊಡುತ್ತೇನೆ.

ಅಧ್ಯಕ್ಷರು.—ಪಂಚಾಯಿತಿ ಆಕ್ಟಿನಲ್ಲಿ ಥರ್ಡ್ ಮೇಲೆ ಛಾರ್ಜು ಮಾಡುವುದಕ್ಕೆ ಅವಕಾಶವಿಲ್ಲವೆಂದು ಹೇಳುತ್ತೀರಿ. ಅದು ಯಾವ ಬಗ್ಗೆ?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈಗ ಈ ಮಸೂದೆಯಲ್ಲಿ ಹೇಳಿರತಕ್ಕ ಪ್ರಕಾರ ಆತನ ಮೇಲೆ ಒಂದು ಸರ್‌ಛಾರ್ಜು ಮಾಡುವುದಕ್ಕೆ ಅವಕಾಶವೇ ಇಲ್ಲ. ಆದರೆ ಮುಂದೆ ಅಲ್ಲಿ ಅನೇಕ ರೂಪದಲ್ಲಿ ತಾಪತ್ರಯಗಳು ಸಂಭವಿಸಬಹುದು. ಅಂಥಾದ್ದನ್ನೆಲ್ಲಾ ತಡೆಗಟ್ಟತಕ್ಕ ಬಗ್ಗೆ ಮತ್ತು ಆತನ ಮೇಲೆ ಒಂದು ಜವಾಬ್ದಾರಿ ಹೊರೆ ಇರುವಂತೆ ಒಂದು ಸರ್‌ಛಾರ್ಜ್ ಕ್ಲಾಜ್ ಇರತಕ್ಕದ್ದು ಆವಶ್ಯಕ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮುನಿಸಿಪಲ್ ಆಕ್ಟಿನಲ್ಲಿ ಅಂಥಾ ಸರ್‌ಛಾರ್ಜ್ ಕ್ಲಾಜು ಇದ್ದು ಈಗ ಜಾರೀಲಿ ಕೂಡ ಇದೆ.

Sri L. SIDDAPPA.—Even in the Village Panchayets Act which is in force now, there is a provision.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇದೇಕೋ ನನಗೆ ಇಲ್ಲಿ ಕೊಂಚ ಸರಿಯಾಗಿ ಅರ್ಥವಾಗುತ್ತಿಲ್ಲ. ಪುಟ 25ರಲ್ಲಿ ಜಾಯಿಂಟ್ ಸ್ಟಾಕ್ ಕಂಪೆನಿಗಳ ವಿಚಾರ ತಿಳಿಸಿದ್ದಾರೆ. I do not exactly follow why joint stock companies are included. Please see clause (b) (1) of Section 55 of the District Boards Act. ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡು ಆಕ್ಟುಗಳಲ್ಲಿ ಪ್ರಾಪರ್ಟಿ ಕ್ವಾಲಿಫಿಕೇಷನನ್ನೂ ಗೊತ್ತುಮಾಡಿದ್ದಾರೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆರೀತಿ ಡಿಸ್ಟ್ರಿಕ್ಟ್ ಬೋರ್ಡು ಆಕ್ಟಿನಲ್ಲಿಯೇ ಇದೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—"Every person who is not less than 25 years of age and who pays mohatarfa in a Panchayet within the District may also be qualified to be elected as a member . . . etc."

Mr. SPEAKER.—'may also be qualified' ಎಂದು ಹೇಳಿದೆ.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮೊಹತರ್ಫ ಗೊತ್ತುಮಾಡಲಾಗಿದೆ. Either you must be a voter to a Panchayet election or you must be paying mohatarfa ಎಂದು ಹೇಳೇ ಇದೆ.

ಅಧ್ಯಕ್ಷರು.—ಯಾರಾದರೊಬ್ಬ ಮನುಷ್ಯನು ತಾನು ಪಟ್ಟಣಕ್ಕೆ ಬಂದು ಅಲ್ಲಿ ವಾಸಮಾಡುತ್ತಿದ್ದಾಗ, ಅಂದರೆ ಆತನ ಸ್ವಗ್ರಾಮದಲ್ಲೇ ವಾಸಮಾಡದೇ ಇದ್ದಾಗ, ಅಂಥಾ ಮನುಷ್ಯನಿಗೇನಾದರೂ ಸದ್ರಿ ಗ್ರಾಮದಲ್ಲಿ ಜಮೀನು ಇತ್ಯಾದಿಗಳಿದ್ದರೆ, ಅಂಥಾ ಸಂದರ್ಭದಲ್ಲಿ ಆತನನ್ನು disqualify ಮಾಡಬಾರದೆಂದು ಹಾಗೆ ಮಾಡಲಾಗಿದೆ. ಏತಕ್ಕೆಂದರೆ ಆಕ್ಟಿನಲ್ಲಿ ಆತನು ಖಾಯಂ ಆಗಿ ಆ ಗ್ರಾಮದಲ್ಲೇ ವಾಸಮಾಡಬೇಕೆಂದಿರುತ್ತೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಪಟ್ಟಣದಲ್ಲಿರತಕ್ಕವರೇ ಆಗಬೇಕು, ಹಳ್ಳಿಯವರು ಅಧ್ಯಕ್ಷರಾಗಬಾರದೆಂದೇನು?

Sri H. M. CHANNABASAPPA (Mysore District–General).—Shall I take it that it is your idea that those in municipal and Corporation areas should be prohibited from participating in an election to a Village Panchayet?

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಮುನಿಸಿಪಲ್ ಆಕ್ಟಿನಲ್ಲಿಯೂ ಈರೀತಿ ಇಲ್ಲ, ರೆಜಿಸ್ಲೇಟೀವ್ ಕೌನ್ಸಿಲ್ ಆಕ್ಟಿನಲ್ಲಿಯೂ ಈರೀತಿಯಿರುವುದಿಲ್ಲ. ಟೌನಿನಲ್ಲಿದ್ದುಕೊಂಡಿರುವವರೇ ಎಲ್ಲಾ ಸಮಿತಿಗಳಿಗೂ ಸದಸ್ಯರಾಗಲು ಅವಕಾಶ ಇರಲೆಂದು ಇದನ್ನು ಮಾಡಿದ್ದಾರೆ. We are not logical. It does not stand on principle.

Sri H. M. CHANNABASAPPA.—I should like to know your opinion.

Sri H. B. GUNDAPPA GOWDA.—My opinion is that there is no need because I feel that others also should take chance. Why should it be thought that property qualification should be added?

Sri A. BHEEMAPPA NAIK (Chitaldurg District–General).—You agree to exclude a set of people.

Sri H. B. GUNDAPPA GOWDA.—No. Supposing on adult franchise you elect those people......

Sri A. BHEEMAPPA NAIK.—Instead of indirect election?

Sri H. B. GUNDAPPA GOWDA.—Yes. When you allow adult franchise, the basis itself you concede. Whether he has property or not he can stand for election.

The Hon'ble Sri R. CHENNIGARAMIAH.—His fear is whether mohatarfa qualification will enable a man living in a town also to contest election.

Sri H. M. CHANNABASAPPA.—I should like to know the opinion of Sri

(SRI H. M. CHANNABASAPPA.)

Gundappa Gowda regarding the desirability of excluding those in the municipal and Corporation areas from contesting Village Panchayet elections.

Sri H. B. GUNDAPPA GOWDA.—I do not say that they should be excluded but why should there be additional facility? A man who wants to contest the District Board election will adjust himself to certain qualifications.

The Hon'ble Sri R. CHENNIGARAMIAH.—This is an enabling clause.

Sri H. B. GUNDAPPA GOWDA.—I do not want the enabling clause.

The Hon'ble Sri H. C. DASAPPA.—A person can have two residences—one in the rural area and the other in the urban area.

Sri H. B. GUNDAPPA GOWDA.—Yes, that is possible. But on principle I am against that.

Sri L. SIDDAPPA.—That facilitates sending some educated people back to the village.

Sri H. B. GUNDAPPA GOWDA.—It is a healthy principle.

The Hon'ble Sri R. CHENNIGARAMIAH.—So you want Mohatarfa to be removed?

Sri H. B. GUNDAPPA GOWDA.—Yes. Any man with general qualification, must be able to stand for election there.

The Hon'ble Sri R. CHENNIGARAMIAH.—But does not the Hon'ble Member think that this is after all a remote chance?

Sri H. B. GUNDAPPA GOWDA.—If you see the District Boards Presidents' list, you will find that all of them live in towns except some. The Hon'ble Speaker was for some time there.

Sri H. M. CHANNABASAPPA.—Because you are living in town, you are considering that all others are also living in towns.

Sri H. B. GUNDAPPA GOWDA.—I am going away to my place.

ಒಟ್ಟಿನಲ್ಲಿ ಮೊದಲಿದ್ದಹಾಗೆ ಡಿಸ್ಟ್ರಿಕ್ಟ್ ಬೋರ್ಡ್ ಮೇಲೆ ಆಫೀಸರಿಗೆ ಹತೋಟಿಯಿಲ್ಲ.

Sri A. BHEEMAPPA NAIK.—Does the Hon'ble Minister know that in the present Act powers are given to the Deputy Commissioner to inspect, to supervise and to call for any records of the District Board?

Sri H. B. GUNDAPPA GOWDA.—Will the Hon'ble member point out the section? I do not understand my Hon'ble friend. The powers are vested in the Commissioner, and if on account of any reasons, Government find it necessary to authorise any intermediary officer to supervise or do anything, they may authorise the Deputy Commissioner. But it is the Commissioner who has got the full powers now.

Sri A. BHEEMAPPA NAIK.—The Hon'ble Member may please read Sections 150 and 160. The word 'Commissioner' is a mistake.

Sri L. SIDDAPPA.—There appears to be some printer's mistake.

Sri A. BHEEMAPPA NAIK.—Where joint committee is appointed by the District Board of two or more Districts, the Commissioner may exercise a like power in respect of the proceedings of that Committee. That is how the sub-clause (2) of clause 160 reads. That means like powers are given to the Commissioner when two District Boards are joined together. But when there is only one District Board, it is the Deputy Commissioner that will have all these powers.

The Hon'ble Sri K. T. BHASHYAM.—In the case of a District Board, the Commissioner shall have the powers of supervision and even in cases where joint committees are appointed for more than one District Board, he will exercise a like power. It is the Commissioner that is discharging in both the cases the same duties.

Sri A. BHEEMAPPA NAIK.—You will have to change the wordings properly. "Where a joint Committee is appointed by the District Boards of two or more Districts, the Commissioner may...". Only the word 'Commissioner' can come in here in the marginal note because it is a case of two or more districts. The mistake is about the word "Commissioner". I am only suggesting this to be considered in the Select Committee.

The Hon'ble Sri K. T. BHASHYAM.—It is the Commissioner who is empowered to supervise the proceedings of

the District Board. Supposing there are joint committees appointed for more than one District Board. Then what is to happen? The Commissioner will exercise the same powers which he exercises over a District Board. That is why the words "exercise a like power" are put in there.

Sri A. BHEEMAPPA NAIK.—In any case there appears to be a mistake.

Sri H. B. GUNDAPPA GOWDA.—You must read the section. The marginal note is not the law. So many things may be said in the marginal notes. I agree it is a mistake. But my statement still holds good. Deputy Commissioner is eliminated in many respects. I do not understand the difficulty of my Hon'ble friend.

Sri A. BHEEMAPPA NAIK.—We do not want Deputy Commissioner to have any power. Make it clear. That is all we want.

Sri H. B. GUNDAPPA GOWDA.—Excepting 162, where extreme emergencies arise, where even Government cannot step in, the man in authority on the spot is only the District Magistrate. Supposing a bridge is smashed. He must then take immediate action. Whether the District Board President agrees to it or not he may ask the Executive Engineer to go on with the work immediately in the interests of the safety of the people and in the interests of traffic. So, except in clauses 161 and 162, I do not think Deputy Commissioner will comein in other clauses.

The Hon'ble Sri R. CHENNIGARAMIAH.—Even under the existing District Boards Act, you know the Deputy Commissioner has got powers. But he does not exercise them in the day-to-day administration, except in cases of emergency.

In the matter of punishment, in the matter of appointment, I know as District Board President how many influences would be brought to bear. It was not possible for the District Board President to conscientiously discharge his responsibilities in the midst of these influences. I therefore say that this Bill is very practical. It takes note of such things. That is what we have to observe in these days of Responsible Government. Instead of interfering in these trivial matters, that is the best way. It is a very healthy idea. As a District Board President, I know what happens when the question of recruitment or appointment comes up.

ಇದುವರೆಗೆ ನೌಕರಿಗೆ ನೇಮಕ ಮಾಡುವುದಕ್ಕೂ ಶಿಕ್ಷೆಮಾಡುವುದಕ್ಕೂ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರಿಗೆ ಅಧಿಕಾರವಿತ್ತು. ಈ ಕಾನೂನಿನ ಪ್ರಕಾರ ಸೆಕ್ರೆಟರಿಯವರನ್ನು ನೇಮಿಸುತ್ತಾರೆ. ಅವರಿಗೆ ಈ ಅಧಿಕಾರವನ್ನು ಕೊಟ್ಟಿದ್ದಾರೆ.

There is sometimes friction with local officers like the Deputy Commissioner and so on. That is removed and the local bodies are enabled to have more finances.

ಒಟ್ಟಿನಲ್ಲಿ ಈ ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ಗ್ರಾಮ ಪಂಚಾಯಿತಿ ಬಿಲ್ಲನ್ನು ತಂದಿರುವ ಉದ್ದೇಶ ಒಳ್ಳೆಯದು. ಸ್ಥಳೀಯ ಸಂಸ್ಥೆಗಳಿಗೆ ಇದುವರೆಗಿದ್ದ ಒಂದು ದೊಡ್ಡ ತೊಂದರೆಯೆಂದರೆ ಹಣಕಾಸಿನ ತೊಂದರೆ. My observation is that that they are a bit liberal in the case of Panchayets, but not so in the case of District Boards.

As regards finances, I make a general appeal that they should be generous. Otherwise, what is the use of having these local institutions? There was a stage when every District Board President felt that there was no use in continuing as President for want of finances.

The Hon'ble Sri H. C. DASAPPA.—Optional expenditure ಗೆ ಹತ್ತು, ಹದಿನೈದು ಸಾವಿರ ಮಾತ್ರ ಉಳಿಯುತ್ತಿತ್ತು.

Sri H. B. GUNDAPPA GOWDA.—That is one redeeming feature. But let not Government stint in the matter of giving help.

They are mentioning the word 'cesses'. ಜಮೀನಿನ ಮೇಲೆ ಸೆಸ್ ಹಾಕುತ್ತಾರೆ. ಅರ್ಧ ಎಕರೆ, ಮುಕ್ಕಾಲು ಎಕರೆ ಜಮೀನಿರುವವರೆಲ್ಲ ಸೆಸ್ ಕೊಡಬೇಕು, ಐನೂರು, ಸಾವಿರ, ಎರಡು ಸಾವಿರ ಸಂಬಳವಿರುವವರು ಏನೂ ಕೊಡಬೇಕಾಗಿಲ್ಲ, ಇವರ ಮಕ್ಕಳು ಬಿಟ್ಟಿ ಓದುವುದು, ರೈತರು ಸೆಸ್ ಕೊಡುವುದು. ಇದು ಯಾವ ನ್ಯಾಯ !

Sri L. SIDDAPPA.—What is the recommendation he has made in the Land Reforms Committee, Sir?

Sri H. B. GUNDAPPA GOWDA.—That is the very thing I am arguing. Cesses must go. There is no justification, there is no equity to levy cesses on petty landholders and asking them

(SRI H. B. GUNDAPPA GOWDA.)

to contribute to general welfare when he himself is denied facilities many a time. ಇದರಲ್ಲಿ ಸೆಸ್‌ಗಳನ್ನು ವಿಧಿಸುವುದಕ್ಕೆ ಸಂಬಂಧಪಟ್ಟ ವಿಧಿಗಳನ್ನು ಹಾಗೆಯೇ ಉಳಿಸಿರುವುದು ನ್ಯಾಯವಲ್ಲ; ಇನ್ನೂ ಹೆಚ್ಚು ಮಾಡಬಹುದೆಂದು ಮಾಡಿರುವುದರಲ್ಲಿ ಯಾವ ನ್ಯಾಯವೂ ಇಲ್ಲ. ಅದರಲ್ಲೂ ಭೂಕಂದಾಯದ ಮೇಲೆ ಹಾಕಲೇಬಾರದು.

Let not the landholding people be burdened with this inequitous levy. ಬಡವ ಒಂದೆರಡು ಎಕರೆ ಜಮೀನು ಇರುವವನು ಸೆಸ್ ಕೊಡುತ್ತಾನೆ, ಭೂಮಿ ಇಲ್ಲದೆ, ಬೇರೆ ವರಮಾನ ಇರುವವನು ಸುಖ ಪಡುತ್ತಾನೆ.

The Hon'ble Sri R. CHENNIGARAMIAH.—That will come back to the people themselves.

Sri H. B. GUNDAPPA GOWDA.—I do not think that there is any justice to levy cess on a person who holds one acre of land or so.

The Hon'ble Sri K. T. BHASHYAM.—Your objection is only with regard to levy of Education cess, is it not?

ಶ್ರೀ ಎಚ್. ಬಿ. ಗುಂಡಪ್ಪ ಗೌಡರು:—Other cesses also, ಬೇರೆ ಸೆಸ್ ಹಾಕಿ, ಅದಕ್ಕೆ ಇದರಲ್ಲಿ ಅವಕಾಶವಿದೆ.

The Hon'ble Sri K. CHENGALARAYA REDDY.—I quite agree with the Hon'ble Member. He is on the Select Committee and he can press his case there.

Sri H. B. GUNDAPPA GOWDA.—I welcome this Bill.

Sri A. BHEEMAPPA NAIK (Chitaldrug District—General).—Sir, while welcoming this Bill I would like to make certain observations for the information of the Members of the Select Committee. I feel that in these days of democracy, the system of indirect election cuts at the very root of democracy. That is my feeling. While we have given adult franchise to every institution, whether big or small, this body alone to be elected by indirect system of election is not correct. That is what I submit. After all for the population of 75 thousand in a taluk there will be hardly 15 or 20 panchayets and each panchayet may consist of 10 or 15 members. At that rate the number of members is 300 or 400 in all. It is very easy for an unscrupulous person to buy every vote under certain circumstances and conditions. Whether we should give room for such a system in these days is a matter for consideration. Secondly, there is no link between the District Board and the village. The interests of a taluk can well be neglected if the deliberations are to be carried in the District Board alone as at present, because out of 8 or 9 taluks represented in the District Board, if all the other taluks are against one taluk, then the interests of that taluk will suffer. That is a matter for consideration. Therefore I suggest that at taluk level there should be some organisation in an advisory capacity or otherwise. Thirdly, Village Panchayet is an independent institution. Whether the district board can have any power over such an independent institution is the question. The district board also is an independent institution. Whether one could be subordinate to the other is the point.

Mr. SPEAKER.—It is not a subordinate body.

Sri A. BHEEMAPPA NAIK.—If there are two independent bodies both having their own finances like the district board and the village panchayet, and their organisations, whether the District Board can control and guide the Village Panchayet is a matter which we will have to consider seriously. The village panchayet is under dual control, by the Deputy Commissioner for some purpose and by the District Board for some other purpose.

Sri H. M. CHANNABASAPPA.—May I know in what respects it is under the control of the District Board?

Sri A. BHEEMAPPA NAIK.—For example, village panchayet elections are conducted by the Deputy Commissioner. The village panchayets send their representatives to the District Board and draw funds for the improvement of a particular village or a group of villages. So the village panchayets will have to draw their inspiration from the District Boards; they have to get funds from the District Boards; their work will have to be done by the District Boards. To that extent the village panchayets are under the obligation and control of the District Boards.

Sri H. B. GUNDAPPA GOWDA.—May I ask whether there is any village which goes beyond the Village Panchayet Regulation? Every village comes under that and all the villages come under the District Boards.

Sri A. BHEEMAPPA NAIK.—Therefore a District Board comprises of several groups of villages or village panchayets. All the work of the District Boards consists of the work of the villages. In a way the work of the village is carried out and guided by the District Board. I say to that extent the village panchayet is under the control of the District Board. There is therefore a possibility of the work of village panchayet overlapping the work of District Board or *vice versa*.

Sri H. M. CHANNABASAPPA.—I request the Hon'ble Member to give an instance.

Sri A. BHEEMAPPA NAIK.—Suppose a well has to be sunk or a drainage work has to be done. People in the villages feel that it should be done out of the District Board funds and the District Board says that it has to be done out of the village panchayet funds.

Sri H. M. CHANNABASAPPA.—The duties are well defined.

Sri A. BHEEMAPPA NAIK.—Even so, the duties will be overlapping. That is my feeling.

Sri H. M. CHANNABASAPPA.—Wil the Hon'ble Member show where exactly the overlapping is?

Sri A. BHEEMAPPA NAIK.—The Select Committee is there to look into all these details and to see that these duties do not overlap. I can quote clauses to show that the duties overlap.

Sri H. B. GUNDAPPA GOWDA.—Only one clause.

Sri A. BHEEMAPPA NAIK.—Any number of clauses I can quote. When the Bill comes before this House from the Select Committee I shall show that.

Sri L. SIDDAPPA.—No useful purpose will be served after the Select Committee sends up its report. If there are any suggestions they may be made now so that the Select Committee Members may make a note of them.

Sri A. BHEEMAPPA NAIK.—To the Select Committee itself I will send my note.

As regards the land revenue being earmarked, over 12½ per cent is retained by Government. That is not correct. All the 25 per cent must be distributed between the district boards and village panchayets in certain proportion. Otherwise, there will be a possibility of preference being shown to one District Board over another. The ill-developed district must be given much more than the well-developed district. This kind of distributing the bounty is not good and every one should be assured of a definite and known income.

Sri H. M. CHANNABASAPPA.—Is it the opinion of the Hon'ble Member that the 25 per cent should be enhanced?

Sri A. BHEEMAPPA NAIK.—No. Out of 25 per cent, 12½ per cent should be given to District Board and 12½ per cent to the village panchayets.

Sri H. M. CHANNABASAPPA.—I want to know the Hon'ble Member's opinion about the desirability of enhancing it.

Sri A. BHEEMAPPA NAIK.—It is well and good if it is enhanced to 50 per cent, because more functions are devolved upon village panchayets and district boards.

Sri H. M. CHANNABASAPPA.—Is it total apportionment of land revenue?

Sri A. BHEEMAPPA NAIK.—It must be equal.

Sri H. M. CHANNABASAPPA.—What is the percentage of land revenue that would be desirable to be given to local board?

Sri A. BHEEMAPPA NAIK.—I say that fifty per cent of the land revenue must be earmarked for the District Boards of which twenty-five per cent must be given to a group of villages. That would be a very good idea. After all, the land revenue that the Government of Mysore are deriving is not dependent on large sources for other developments.

The Hon'ble Sri K. CHENGALARAYA REDDY—(Chief Minister).—Let us wait till the Budget is presented.

The Hon'ble Sri H. C. DASAPPA.—The Hon'ble Member may give his own views and not be drawn to traps of others.

Sri A. BHEEMAPPA NAIK.—Does the Hon'ble Minister mean to say that I will be trapped by others? It is not a compliment to me. (Laughter).

ಶ್ರೀ ಸುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).—ಸ್ವಾಮಿ, ಗ್ರಾಮಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್‌ಗಳು ಕೆಲಸಮಾಡತಕ್ಕ ವಿಧಾನದಲ್ಲಿ ಜನಗಳಿಗೆ ಹೆಚ್ಚು ಅನುಕೂಲಮಾಡಬೇಕೆಂದು ಈ ಮಸೂದೆಯನ್ನು ತರಲಾಗಿದೆ. ಇದು ಸಂತೋಷಕರವಾದ ವಿಷಯ. ಈಗ ಇರತಕ್ಕ ಪಂಚಾಯಿತಿಗಳಿಗೆ ಒದಗತಕ್ಕ ಹಣ ಕೇವಲ 200–300 ರೂಪಾಯಿ, ಅದರಿಂದ ಕೆಲಸ ಕಾರ್ಯಗಳನ್ನು ಮಾಡಲು ಆಗುವುದಿಲ್ಲ ಎಂಬ ಭಾವನೆಯಿಂದ ಇಂಥಾ ಒಂದು ಮಸೂದೆಯನ್ನು ತಂದಿದ್ದೀರಿ. ಆದರೆ ಈಗ ತಾವು ಗ್ರಾಮಪಂಚಾಯಿತಿ ಸ್ಥಾಪಿಸಲು 2,000 ದಿಂದ 5,000 ರವರೆಗೂ ಪ್ರಜಾಸಂಖ್ಯೆ ಇರಬೇಕೆಂದು ಮಾಡಿರುವುದರಿಂದ ಹೆಚ್ಚು ಹಣ ವಸೂಲಾಗದೆ ತಮ್ಮ ಉದ್ದೇಶ ಫಲಕಾರಿಯಾಗಲಾರದೆಂದು ಭಾವಿಸುತ್ತೇನೆ. ಹಳ್ಳಿಗಳಲ್ಲಿ ವಸೂಲಾಗತಕ್ಕ ಹಣ ಬಹಳ ಕಡಿಮೆಯಾದ್ದರಿಂದ 2,000 ದಿಂದ 5,000 ದವರೆಗೆ ಜನಸಂಖ್ಯೆ ನಿಗದಿ ಮಾಡಿರುವುದು ತೀರ ಕಮ್ಮಿ; 5,000 ದಿಂದ 7,000 ದವರೆಗೂ ಮಾಡಬೇಕು. ಆ ರೀತಿ ಮಾಡಿದರೆ ಹಣ ಹೆಚ್ಚು ವಸೂಲಾಗಿ ಕೆಲಸ ಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಅಧ್ಯಕ್ಷರು.—ಆ ರೀತಿ ಮಾಡಬೇಕಾದರೆ ಮಲೆನಾಡಿನಲ್ಲಿ ಅನೇಕ ಹಳ್ಳಿಗಳನ್ನು ಸೇರಿಸಬೇಕಾಗುತ್ತದೆ. ಅದರಿಂದ ಬಹಳ ಕಷ್ಟವಾಗುತ್ತದೆ.

ಶ್ರೀ ಸುಬ್ಬರಾಯಶೆಟ್ಟರು.—ಹಾಗಾದರೆ ಮೈದಾನ ಪ್ರದೇಶಕ್ಕೆ ಒಂದು ರೀತಿ ಮಲೆನಾಡು ಪ್ರದೇಶಕ್ಕೆ ಒಂದು ರೀತಿ ಮಾಡಬಹುದು.

ಅಧ್ಯಕ್ಷರು.—ಎಲ್ಲ ಕಡೆಗೂ ಸರಿಹೋಗುತ್ತದೆ ಎಂತಲೇ 2,000—5,000 ವರೆಗೆ ನಿಗದಿ ಮಾಡಲಾಗಿದೆ.

ಶ್ರೀ ಸುಬ್ಬರಾಯಶೆಟ್ಟರು.—ಏನೇ ಆಗಲೀ 5,000 ಕ್ಕಿಂತಲೂ ಹೆಚ್ಚು ಮಾಡಬೇಕೆಂಬುದೇ ನನ್ನ ಉದ್ದೇಶ. ಇದುವರೆಗೂ ಪಂಚಾಯಿತಿ ಚೇರ್ಮನ್‌ಗೆ 300 ರೂಪಾಯಿನವರೆಗೂ ಅಂದಾಜು ಮಾಡಿಸಿ ಕೆಲಸ ಮಾಡಿಸುವುದಕ್ಕೆ ಅಧಿಕಾರವಿತ್ತು, ಹೆಚ್ಚು ಕೆಲಸ ನಡೆಯುತ್ತಾ ಇತ್ತು. ವಿಶೇಷ formalities ಇದ್ದರೆ ಕೆಲಸ ನಡೆಯುವುದಿಲ್ಲ. ಈಗ 25 ರೂಪಾಯಿಗಳವರೆಗೆ ಮಾತ್ರ ಖರ್ಚು ಮಾಡುವ ಅಧಿಕಾರ ಕೊಡಲಾಗಿದೆ. ಅದರಿಂದ ಪಂಚಾಯಿತಿಯ ಕೆಲಸ ಕಾರ್ಯಗಳು ನಡೆಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದಕಾರಣ ಮೊದಲು ಇದ್ದ ಹಾಗೇ 300 ರೂಪಾಯಿನವರೆಗೂ ಅಂದಾಜು ಮಾಡಿಸಿ ಕೆಲಸಗಳನ್ನು ಮಾಡಿಸಲು ಅಧಿಕಾರ ಕೊಟ್ಟರೆ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುತ್ತದೆ ಎಂದು ಅಭಿಪ್ರಾಯಪಡುತ್ತೇನೆ.

ಸೆಕ್ರೆಟರಿಗಳನ್ನು ನೇಮಕಮಾಡಿಕೊಳ್ಳುವ ವಿಚಾರದಲ್ಲಿ ಸರ್ಕಾರದವರು ಈ ಅಧಿಕಾರವಿಟ್ಟುಕೊಂಡಿರುವುದರ ಬದಲು ಆಯಾ ಗ್ರಾಮಪಂಚಾಯಿತಿಗಳಿಗೇ ಕೊಡುವುದು ಸೂಕ್ತ. ಏಕೆಂದರೆ ಈ ಅಧಿಕಾರ ಇವರಿಗಿರದಿದ್ದರೆ ಅವರ ಮೇಲೆ ಅಧಿಕಾರವನ್ನು ಚಲಾಯಿಸುವುದಕ್ಕಾಗಲೀ ಅವರನ್ನು ಶಿಕ್ಷಿಸುವುದಕ್ಕಾಗಲೀ ಗ್ರಾಮಪಂಚಾಯಿತಿಯವರಿಗೆ ಅಧಿಕಾರವಿರುವುದಿಲ್ಲ. ಹೀಗಾಗಿ ಪಂಚಾಯ್ತಿಯ ಕೆಲಸ ಕಾರ್ಯಗಳು ಸರಿಯಾಗಿ ನಡೆಯದಿರಬಹುದು. ಎಷ್ಟೋ ಭಿನ್ನಾಭಿಪ್ರಾಯಗಳು ಬರುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಸೆಕ್ರಟರಿಗಳನ್ನು ತಾವೇ ನೇಮಕ ಮಾಡಿಕೊಂಡು ಅವರ ಮೇಲೆ ಜುರ್ಮಾನೆ ವಿಧಿಸುವುದಕ್ಕೂ, ವಜಾ ಮಾಡುವುದಕ್ಕೂ ಪಂಚಾಯ್ತಿಗಳವರಿಗೆ ಅಧಿಕಾರವಿರುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಈಗಿರುವ ಮಸೂದೆಯ ಪ್ರಕಾರ ಪಂಚಾಯ್ತಿಗಳಾದ ಮೇಲೆ ಡಿಸ್ಟ್ರಿಕ್ಟ್ ಬೋರ್ಡುಗಳು ಮಾತ್ರ ಇವೆ. ಮಧ್ಯೆ ಬೇರಾವ ಸಂಸ್ಥೆಯೂ ಇಲ್ಲ. ಸಾಮಾನ್ಯವಾಗಿ ವಿಲೇಜ್ ಪಂಚಾಯ್ತಿಗಳ ಕರ್ತವ್ಯಗಳೂ ಡಿಸ್ಟ್ರಿಕ್ಟ್ ಬೋರ್ಡ್‌ಗಳ ಕರ್ತವ್ಯಗಳೂ ಒಂದೇ ಆಗಿವೆ. ಆದ್ದರಿಂದ ಡಿಸ್ಟ್ರಿಕ್ಟ್ ಬೋರ್ಡುಗಳು ತಮ್ಮ ತಮ್ಮ ಕೆಲಸಗಳನ್ನು ಮಾಡುವುದರ ಜೊತೆಗೆ ತಮ್ಮ ಕೈಕೆಳಗಿರುವ ಎಲ್ಲಾ ಪಂಚಾಯ್ತಿಗಳ ಕೆಲಸಗಳನ್ನೂ ನೋಡಿಕೊಳ್ಳುವುದಕ್ಕೆ ಅವಕಾಶವಿಲ್ಲ. ಒಂದೊಂದು ಡಿಸ್ಟ್ರಿಕ್ಟ್ ಬೋರ್ಡಿನ ಕೈಕೆಳಗೂ 150-200 ಗ್ರಾಮಪಂಚಾಯ್ತಿಗಳಿರುತ್ತವೆ. ಈ ಪಂಚಾಯ್ತಿಗಳ ಚೇರ್ಮನ್ನರುಗಳೆಲ್ಲರನ್ನೂ ಆಗಾಗ್ಗೆ ಸೇರಿಸಿ ಯಾವ ಪಂಚಾಯ್ತಿಗೆ ಹೆಚ್ಚಿಗೆ ಹಣ ಕೊಡಬೇಕು, ಯಾವುದಕ್ಕೆ ಕಡಮೆ ಕೊಡಬೇಕೆಂಬುದನ್ನು ನೋಡಿಕೊಂಡು ಹಂಚಿಕೆ ಮಾಡುವುದಕ್ಕೆ ಮಧ್ಯೆ ತಾಲ್ಲೂಕ್ ಕಮಿಟಿಯೆಂದು ಏರ್ಪಾಡು ಮಾಡಿದರೆ ಅನುಕೂಲವೆಂದು ಹೇಳುತ್ತೇನೆ. ಸರ್ಕಾರದವರು ಗ್ರಾಮಪಂಚಾಯ್ತಿಗಳಿಗೆ ಕೊಡಬೇಕೆಂದು 6¼% ನಷ್ಟು ಯಾವ ಹಣವನ್ನಿಡಬೇಕೆಂದಿದ್ದೀರೋ ಆ ಹಣವನ್ನು ಈ ತಾಲ್ಲೂಕು ಕಮಿಟಿಗಳಿಗೆ ಕೊಟ್ಟು ಆ ಕಮಿಟಿಯವರು ನಾನಾ ಪಂಚಾಯ್ತಿಗಳ ಆದಾಯ ಖರ್ಚುಗಳನ್ನು ನೋಡಿಕೊಂಡು ಯಾವುದಕ್ಕೆ ಹೆಚ್ಚಿಗೆ ಕೊಡಬೇಕು, ಯಾವುದಕ್ಕೆ ಕಮ್ಮಿ ಕೊಡಬೇಕು ಎಂಬುದನ್ನು ಅವರು ನಿರ್ಧರಿಸಿ ಹಂಚಿಗೆ ಮಾಡಲು ಅವಕಾಶ ಮಾಡಬೇಕೆಂದು ನನ್ನ ಸಲಹೆ.

ಮಾನ್ಯ ಸದಸ್ಯರು ಕೆಲವರು ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಚುನಾವಣೆಯನ್ನು ವಯಸ್ಕರ ಮತದಾನ ಪದ್ಧತಿಯೇ ಇರಬೇಕೆಂದು ಅಭಿಪ್ರಾಯಪಟ್ಟರು. ಆದರೆ ಈಗ ನಾವು ಗ್ರಾಮಪಂಚಾಯ್ತಿಗಳಿಗೆ ವಯಸ್ಕರ ಮತದಾನದ ಮೇಲೆಯೇ ಚುನಾವಣೆ ನಡೆಸಲಿರುವುದರಿಂದ ಮತ್ತು ಅವರಿಂದ ಚುನಾಯಿತರಾದ ಸದಸ್ಯರುಗಳೇ ಈ ಡಿಸ್ಟ್ರಿಕ್ಟ್ ಬೋರ್ಡ್ ಚುನಾವಣೆಯಲ್ಲಿ ಓಟು ಮಾಡಬೇಕೆಂದಿರುವುದರಿಂದ, ಇಲ್ಲಿಯೂ ವಯಸ್ಕರ ಮತದಾನ ಪದ್ಧತಿಯೇ ಇರಬೇಕೆನ್ನುವುದು ಅವಶ್ಯಕವಿಲ್ಲ. ಪ್ರತಿಯೊಂದಕ್ಕೂ ದೊಡ್ಡದಾಗಿ ವಯಸ್ಕರ ಮತದಾನ ರೀತಿಯೇ ಆಗಬೇಕೆಂದು ಹೇಳಿದರೆ ಜನರಲ್ಲಿ ಪದೇ ಪದೇ election mentality ಯೆಂಬುದು ಹುಟ್ಟಿಕೊಂಡು ವಿಪರೀತವಾಗಿ ಮೆಂಬರುಗಳು ಹಣ ಕಳೆದುಕೊಳ್ಳುವುದಕ್ಕೆ ಕಾರಣವಾಗುತ್ತದೆ. ಈಗ ಎಷ್ಟೋ ಚುನಾವಣೆಗಳಲ್ಲಿ ಉಮೇದುವಾರರುಗಳು ಚುನಾವಣೆಗಳಿಗಾಗಿ ಎಷ್ಟೊಂದು ರೀತಿ ಹಣ ವ್ಯಯ ಮಾಡಿ ದುಸ್ಥಿತಿಗೆ ಬಂದಿರುತ್ತಾರೆಂಬುದು ಎಲ್ಲರಿಗೂ ಗೊತ್ತೇ ಇದೆ. ಈಗಲೂ ಹೇಳುತ್ತೇನೆ, ನಮ್ಮ ಭಾರತ ದೇಶದಲ್ಲಿ ಈ ಚುನಾವಣಾ ಖರ್ಚುಗಳನ್ನು ಕಮ್ಮಿ ಮಾಡುವುದಕ್ಕೆ ಸರ್ಕಾರದವರು ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡ ಹೊರತು ನೀವು ಚುನಾವಣೆಗಳನ್ನು ನಡೆಸುವ ನಿಜವಾದ ಉದ್ದೇಶ ಈಡೇರುವುದಿಲ್ಲ. ಅಂಥಾ ಚುನಾವಣೆಗಳಿಂದ ಒಳ್ಳೆಯ material ಕೂಡ ತಮಗೆ

ಸಿಕ್ಕುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಜನರಲ್ಲಿರುವ ಈ election mentality ಯನ್ನು ಆದಷ್ಟು ಮಟ್ಟಿಗೆ ತಪ್ಪಿಸಿದ ಹೊರತು ನಮಗೆ ಗತ್ಯಂತರವಿಲ್ಲ. ಈ ಒಂದು ಕಾರಣದಿಂದಲೇ ಅಲ್ಲದೆ, ಈ ಡಿಸ್ಟ್ರಿಕ್ಟ್ ಬೋರ್ಡುಗಳಿಗೆ ಓಟು ಮಾಡತಕ್ಕ ವೋಟರುಗಳೂ ಕೂಡ ತಮ್ಮ ತಮ್ಮ ಹಳ್ಳಿಯ ವಯಸ್ಕರಾದ ಮತದಾರರ ಗುಂಪುಗಳಿಂದಲೇ ಚುನಾಯಿತರಾಗಿ ಬಂದವರಾದುದರಿಂದ ಡಿಸ್ಟ್ರಿಕ್ಟ್ ಬೋರ್ಡ್‌ಗಳಿಗೆ ಈ ರೀತಿ indirect ಚುನಾವಣೆ ಮಾಡುವುದರಿಂದ ಏನೂ ಬಾಧಕವಿಲ್ಲ. ಸರ್ಕಾರದವರು ಈ ಅಂಶಗಳನ್ನೆಲ್ಲಾ ಗಮನಕ್ಕೆ ತೆಗೆದುಕೊಂಡು ಈ ಮಸೂದೆಯನ್ನು ಜಾರಿಗೆ ಕೊಡಬಹುದೆಂದು ನಾನು ಹೇಳುತ್ತೇನೆ.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಸಿಟಿ).—ಮಾನ್ಯ ಅಧ್ಯಕ್ಷರೇ, ಈ ಮಸೂದೆ ನಮ್ಮ ದೇಶಕ್ಕೆ ಬಹಳ ಅಗತ್ಯವಾದುದು. ನ್ಯಾಯವಾಗಿ ಇದು ಇನ್ನೂ ಬಹಳ ಮುಂಚೆಯೇ ಜಾರಿಗೆ ಬರಬೇಕಾಗಿತ್ತು. ಇತರೇ ಸಂಸ್ಥಾನಗಳಲ್ಲಿ ಇದು ಬಹಳ ಮೊದಲೇ ಜಾರಿಗೆ ಬಂದಿದೆ. ಮಧ್ಯಪ್ರಾಂತ್ಯ, ಬೇರಾರ್ ಮುಂತಾದ ಕಡೆಗಳಲ್ಲಿ 1947 ನೆಯ ಇಸವಿಯಲ್ಲೇ ಅವರು ಜಾರಿಗೆ ತಂದಿದ್ದಾರೆ. ಆದ್ದರಿಂದ ಈಗಲಾದರೂ ಇದು ಬಂದುದು ಬಹಳ ಒಳ್ಳೆಯದಾಯಿತು.

ಆದರೆ ಇದರಲ್ಲಿ ಒಂದು ವಿಚಿತ್ರ ಕಾಣುತ್ತಿದೆ. ಹೆಸರನ್ನು ನೋಡಿದರೇನೋ 'ಪಂಚಾಯ್ತಿ' ಎಂದಿದ್ದರೂ ಅದಕ್ಕೆ 'ಪಂಚಾಯ್ತಿ' ಮಾಡತಕ್ಕ ಅಧಿಕಾರವನ್ನೇ ಕೊಟ್ಟಿಲ್ಲವೆಂದು ಕಾಣುತ್ತೆ. ನಮ್ಮ ದೇಶದಲ್ಲಿ ಯಾವ ಗ್ರಾಮಗಳನ್ನು ನೋಡಲಿ ವ್ಯಾಜ್ಯಗಳಿಂದ ತುಂಬ ಕಟ್ಟಾಟಗಳು ನಡೆಯುತ್ತಿರುವುದು ಕಂಡುಬರುತ್ತದೆ. ಅಂಥಾ ವ್ಯಾಜ್ಯಗಳನ್ನು ಮುಖ್ಯವಾಗಿ ನೀವು ಬಗೆಹರಿಸುವುದಾದರೆ ಹಳ್ಳಿಗಳು ಬಹಳಮಟ್ಟಿಗೆ ಮುಂದುವರಿದಂತಾಗುತ್ತವೆಂದು ಹೇಳಬಹುದು. ಹೀಗಿರ ವಲ್ಲಿ ಇಲ್ಲಿ ನೋಡಿದರೆ, ಅಂಥ ವ್ಯಾಜ್ಯಗಳನ್ನು ಬಗೆಹರಿಸುವುದಕ್ಕೆ ಯಾವ ಅಧಿಕಾರವನ್ನೂ ಕೊಟ್ಟಿರುವುದಿಲ್ಲ. ಅದಕ್ಕೆ ಬದಲು ಅದನ್ನೇ ಸಂಪೂರ್ಣವಾಗಿ ತೆಗೆದುಹಾಕಿರುವಂತೆ ಕಾಣುತ್ತದೆ. ಅದೇ ತಾವು ಬೇರಾರ್ ಮತ್ತು ಮಧ್ಯಪ್ರಾಂತದ ಆಕ್ಟನ್ನಾಗಲೀ ನೋಡುವುದಾದರೆ ಪಂಚಾಯ್ತಿಗಳಿಗೆ ಅಲ್ಲಿ ಸಿವಿಲ್ ಅಲ್ಲದೆ ಕ್ರಿಮಿನಲ್ ವಿಚಾರದಲ್ಲಿಯೂ ಅಧಿಕಾರವನ್ನು ವಹಿಸಿಕೊಟ್ಟಿದ್ದಾರೆ. ಸಿವಿಲ್ ಭಾಗದಲ್ಲಿ 100 ರೂಪಾಯಿಯೊಳಗಿರುವ ಎಲ್ಲಾ ದಾವೆಗಳ ವಿಷಯದಲ್ಲಿಯೂ, ಜೊತೆಗೆ suits for damages not exceeding hundred rupees for breach of contract not affecting immovable property–ಇವನ್ನೆಲ್ಲಾ ತೀರ್ಮಾನಿಸುವ ಅಧಿಕಾರ ಆ ಪಂಚಾಯಿತಿಗಳಿಗಿದೆ. ಹಾಗೆಯೇ ಹಳ್ಳಿಯ ವ್ಯಾಜ್ಯಗಳನ್ನು ಬಗೆಹರಿಸುವುದಕ್ಕೂ ಅವಕ್ಕೆ ಅಧಿಕಾರ ಕೊಟ್ಟು 50 ರೂಪಾಯಿಗಳಿಗೆ ಮೇಲ್ಪಡದಂತೆ ದಂಡ ವಿಧಿಸಬಹುದೆಂದು ಹೇಳಿದ್ದಾರೆ. ಇಲ್ಲಿ ಅವೊಂದೂ ಇಲ್ಲ. ಗ್ರಾಮಗಳಲ್ಲಿ ವರ್ಷದಲ್ಲಿ ಕೆಲವು ಕಾಲ ಬಿಟ್ಟು ಬಹಳ ಕಾಲ ಜನಗಳಿಗೆ ಕೆಲಸವಿರುವುದಿಲ್ಲ. ವಿರಾಮ ಹೆಚ್ಚಾಗಿ ಏನಾದರೂ ವ್ಯಾಜ್ಯದಲ್ಲಿ ತೊಡಗಿರುತ್ತಾರೆ. ಹಳ್ಳಿಗಳು ಹಾಳಾಗಿರುವುದೇ ಈ ಪಾರ್ಟಿ ವ್ಯಾಜ್ಯಗಳಿಂದ. ಈ ವ್ಯಾಜ್ಯಗಳನ್ನು ಹೇಗಾದರೂ ಮಾಡಿ ಆ ಹಳ್ಳಿಗಳಲ್ಲೇ ಫೈಸಲು ಮಾಡಿ ಮೇಲಕ್ಕೆ ಕೋರ್ಟುಗಳಿಗೆ ಹೋಗದಂತೆ ಮಾಡಿದರೆ, ಆ ವ್ಯಾಜ್ಯಗಳು ಇಂದಲ್ಲ ನಾಳೆಯಾದರೂ ಪೂರ್ತಿಯಾಗಿ ಪರಿಹಾರವಾದಾವು. ಅವರವರಿಗೇ ಅವುಗಳ ವಿಚಾರವನ್ನು ಬಿಡುವುದು ಒಳ್ಳೆಯದು. ಹಾಗಿಲ್ಲದೆ ಮೇಲಿನ ಕೋರ್ಟುಗಳನ್ನು ಹತ್ತುವುದಕ್ಕೆ ಅವಕಾಶ ಮಾಡಿತೆಂದರೆ ಎಲ್ಲರೂ ಇದ್ದಬದ್ದ ಸಂಪಾದನೆಯನ್ನೆಲ್ಲಾ ಹಾಳು ಮಾಡಿಕೊಳ್ಳುತ್ತಾರೆ. ಇದನ್ನು ತಪ್ಪಿಸಬೇಕು. ನಿಮಗೆ ಮುಖ್ಯವಾಗಿ ಗ್ರಾಮಗಳನ್ನು ಉದ್ಧಾರ ಮಾಡಬೇಕು, ಗ್ರಾಮಪಂಚಾಯಿತಿಗಳು ಸರಿಯಾಗಿ ಕೆಲಸ ಮಾಡಬೇಕು ಎಂಬ ಅಭಿಲಾಷೆಯಿದ್ದರೆ ಈ ಅಧಿಕಾರಗಳನ್ನು ಈ ಗ್ರಾಮಪಂಚಾಯ್ತಿಗಳಿಗೆ ಕೊಡಬೇಕೆಂದು ಹೇಳುತ್ತೇನೆ.

ಅಷ್ಟೇ ಅಲ್ಲದೆ ಮಧ್ಯಪ್ರಾಂತ್ಯ ಮತ್ತು ಬೇರಾರ್ ಪ್ರಾಂತಗಳ ಆಕ್ಟಿನಲ್ಲಿ ಇನ್ನೊಂದು ವಿಶೇಷವಾದ ಅಧಿಕಾರವಿದೆ. ಇದನ್ನು ಹೇಳಿದರೆ ನನ್ನ ಲಾಯರ್ ಮಿತ್ರರು ದಯವಿಟ್ಟು ಸಿಟ್ಟು ಮಾಡಿಕೊಳ್ಳಕೂಡದು. ಅಲ್ಲಿ ಈ ಪಂಚಾಯ್ತಿ ಕೋರ್ಟುಗಳಿಗೆ ಯಾವ ಲಾಯರುಗಳೂ ಬರಕೂಡದೆಂದು ನಿಷೇಧಿಸಿದ್ದಾರೆ. ಲಾಯರುಗಳು ಬರುವುದಕ್ಕೆ ಅವಕಾಶ ಕೊಟ್ಟರೆ ಹಳ್ಳಿಯವರ ದುಡ್ಡೆಲ್ಲಾ ಅವರಿಗಾಗುತ್ತದೆ ಎಂದು. ಆದ್ದರಿಂದ ಇಲ್ಲಿಯೂ ಅದೇ ರೀತಿ ಲಾಯರುಗಳು ಬರದ ಹಾದ ಮಾಡಿ ಗ್ರಾಮಪಂಚಾಯ್ತಿಗಳವರೇ ತಮ್ಮ ತಮ್ಮ ಗ್ರಾಮದಲ್ಲಿ ಉದ್ಭವಿಸುವ ಸಣ್ಣ ಪುಟ್ಟ ವ್ಯಾಜ್ಯಗಳನ್ನು ವಿಚಾರ ಮಾಡಿ ಶಿಕ್ಷೆ ವಿಧಿಸುವ ಅಧಿಕಾರಗಳನ್ನು ಕೊಡುವುದು ಸೂಕ್ತವೆಂದು ಕಾಣುತ್ತದೆ.

ಎರಡನೆಯದಾಗಿ ಆ ಬೇರೆ ಪ್ರಾಂತ್ಯಗಳ ಆಕ್ಟ್‌ಗಳಲ್ಲಿ ಪ್ರೇಕ್ಷಕರು (visitors) ಬಂದು ಪಂಚಾಯ್ತಿಗಳ ಆಡಳಿತವನ್ನು ನೋಡಿಕೊಂಡು ಹೋಗಲು ಒಂದು ಅವಕಾಶ ಮಾಡಿದ್ದಾರೆ. ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರುಗಳು, ನ್ಯಾಯವಿಧಾಯಕ ಸಭೆಯ ಸದಸ್ಯರು ಸರ್ಕಾರದವರು ನೇಮಿಸತಕ್ಕ ಯಾರಾದರೂ ಖಾಸಗೀ ಜನರು ಆಗಾಗ್ಗೆ ಗ್ರಾಮಪಂಚಾಯ್ತಿಗಳಿಗೆ ಭೇಟಿ ಕೊಟ್ಟು ಅವುಗಳ ಆಡಳಿತ ಕಾರ್ಯ ಹೇಗೆ ನಡೆಯುತ್ತಿದೆಯೆಂಬುದನ್ನು ನೋಡಿಕೊಂಡು ಹೋಗಿ ತಿಳಿಸುವುದಕ್ಕೆ ಈ ರೀತಿಯ ಏರ್ಪಾಡು ಮಾಡಿದ್ದಾರೆ. ಅದಕ್ಕೆ ಇಲ್ಲಿಯೂ ಅವಕಾಶ ಮಾಡುವುದು ಉತ್ತಮ.

ಆಮೇಲೆ ಅಲ್ಲಿನ ಆಕ್ಟಿನ ಉದ್ದೇಶದ ವಿವರಣೆಯಲ್ಲಿ 'Promotion of social and moral welfare including prohibition, the removal of untouchability, eradication of corruption and measures to encourage arbitration' ಎಂದೆಲ್ಲಾ ಸೇರಿದೆ. ನಾನಾಗಲೇ ಹೇಳಿದಂತೆ ಇಲ್ಲಿಯೂ ಆರ್ಬಿಟ್ರೇಷನ್ ವಿಚಾರದಲ್ಲಿ ಪಂಚಾಯ್ತಿಗಳಿಗೆ ಅಧಿಕಾರ ಕೊಡಬೇಕಲ್ಲದೆ ಜೊತೆಗೆ ಕಾಂಗ್ರೆಸ್ಸಿನ ಧ್ಯೇಯಕ್ಕನುಗುಣವಾಗಿ ಪಾನನಿರೋಧ ಮತ್ತು ಅಸ್ಪೃಶ್ಯತೆಗಳ ನಿವಾರಣೆಯನ್ನೂ ಇವುಗಳ ಕಾರ್ಯವ್ಯಾಪ್ತಿಯಲ್ಲಿ ಸೇರಿಸಬೇಕೆಂದು ಹೇಳುತ್ತೇನೆ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—Prohibition is a Central subject!

ಶ್ರೀ ವಿ. ಎಸ್. ನಾರಾಯಣರಾಯರು.—ಇರಬಹುದು. ಅದರೂ ನಾವುಗಳೂ ಅದಕ್ಕೆ ಬೇಕಾದ ವಾತಾವರಣವನ್ನು ಇಲ್ಲಿ ಕಲ್ಪಿಸಲಿಕ್ಕೆ ಪ್ರಯತ್ನ ಮಾಡಬೇಕು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅದಕ್ಕೇ moral and social welfare ನ ವಿಷಯ ಹೇಳಿರುವುದು.

ಶ್ರೀ ವಿ. ಎಸ್. ನಾರಾಯಣರಾಯರು.—Starting of rural libraries ಎನ್ನುವುದೂ moral development ಎಂದು ಹೇಳಬಹುದು !!

(ಶ್ರೀ ವಿ. ಎಸ್. ನಾರಾಯಣರಾಯರು.)

ಆಮೇಲೆ ಇನ್ನೊಂದು ವಿಚಾರವೇನೆಂದರೆ ಗ್ರಾಮ ಪಂಚಾಯ್ತಿಗಳಿಗೆ ಹೋಟಲುಗಳನ್ನು ಪ್ರಾರಂಭಿಸುವವರಿಗೆ ಲೈಸೆನ್ಸ್ ಕೊಡುವ ಅಧಿಕಾರ ಕೊಟ್ಟಿದ್ದೀರಿ. ನನ್ನನ್ನು ಕೇಳಿದರೆ, ಹಿಂದೆ ಶ್ರೀಮಾನ್ ಮರಿಯಪ್ಪನವರು ಹೋಟಲುಗಳನ್ನೇ ಮುಚ್ಚಿಬಿಡಬೇಕೆಂದು ಮಾಡಿದಂಥ ಕಾನೂನು ಬಹಳ ಉತ್ತಮವಾದ ಕಾನೂನೆಂದು ಹೇಳುತ್ತೇನೆ.

ಅಧ್ಯಕ್ಷರು.—ಅವರು ಹೋಟಲುಗಳನ್ನು ಮುಚ್ಚಬೇಕೆಂದು ಮಾಡಿರಲಿಲ್ಲ. ಅಮಲ್ದಾರರು ಅವರಿಗೆ ಲೈಸನ್ಸ್ ಕೊಡಬೇಕೆಂದು ಮಾಡಿದ್ದರು.

ಶ್ರೀ ವಿ. ಎಸ್. ನಾರಾಯಣರಾಯರು.—ಅಂಥಾದ್ದನ್ನು ತೆಗೆದು ಈಗ ಗ್ರಾಮಪಂಚಾಯ್ತಿಗಳಿಗೆ ಈ ಅಧಿಕಾರವನ್ನು ಕೊಟ್ಟುಬಿಟ್ಟಿದ್ದೀರಿ. ಅದಕ್ಕೆ ಬದಲು ಹಳ್ಳಿಗಳಲ್ಲಿ ಹೋಟಲುಗಳನ್ನು ಮುಚ್ಚಿಬಿಡಬೇಕೆಂದು ಮಾಡುವುದು ಉತ್ತಮವೆಂದು ಹೇಳುತ್ತೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಎಲ್ಲಿ ಪ್ರಯಾಣಿಕರು ಬಂದು ಹೋಗುವುದು ಹೆಚ್ಚಿಗೆ ಇರುತ್ತದೆಯೋ ಅಂಥಾ ಊರುಗಳಿಗೆ ಅಮಲ್ದಾರರು ನೋಡಿ ಕೊಡಬೇಕೆಂದು ಮಾಡಿತ್ತು.

ಶ್ರೀ ವಿ. ಎಸ್. ನಾರಾಯಣರಾಯರು.—ನಾನೇಕೆ ಹೇಳುತ್ತಿದ್ದೇನೆಂದರೆ, ನನಗೆ ತಿಳಿದಮಟ್ಟಿಗೆ ಹಳ್ಳಿಯಲ್ಲಿ ಒಂದು ಆಕಳು ಕಟ್ಟಿಕೊಂಡು ಅದರ ಹಾಲನ್ನು ಮಾರುವುದಕ್ಕೆ ಹೋದವನು ದುಡ್ಡು ತೆಗೆದುಕೊಂಡು ಮನೆಗೆ ಹಿಂತಿರುಗಿ ಬರುತ್ತಾನೆಂದು ಮನೆಯಾಕೆ ತಿಳಿದುಕೊಂಡಿದ್ದರೆ, ಈತನು ಹಾಲಿನ ದುಡ್ಡನ್ನು ತೆಗೆದುಕೊಂಡು ಅಲ್ಲೇ ದಾರಿಯಲ್ಲಿ ಹೋಟಲಿಗೆ ಹೋಗಿ ದುಡ್ಡೆಲ್ಲಾ ಕೊಟ್ಟು ಬಂದಿರುತ್ತಾನೆ. ಬೆಳಿಗ್ಗೆಯಾಯಿತೆಂದರೆ ದೋಸೆ ತಿನ್ನುವುದು ಮಧ್ಯಾಹ್ನವಾಯಿತೆಂದರೆ ಜೂಜಿನ ಕಟ್ಟೆಗೆ ಹೋಗುವುದು, ಇದೇ ಹಳ್ಳಿಯವರ ಕೆಲಸವಾಗಿದೆ. ಆದ್ದರಿಂದ ಏನೇ ಆದರೂ ಪಂಚಾಯ್ತಿಯವರಿಗೆ ಮಾತ್ರ ಈ ಹೋಟಲ್ ಲೈಸೆನ್ಸ್ ಕೊಡುವಾಗ ಬಹಳ ಜಾಗರೂಕರಾಗಿರಬೇಕೆಂದು ಒತ್ತಾಯದಿಂದ ಹೇಳುತ್ತೇನೆ.

Sri H. M. CHANNABASAPPA.—Do you advocate the same policy for the cities?

ಶ್ರೀ ವಿ. ಎಸ್. ನಾರಾಯಣರಾಯರು.—ಸಿಟಿಗಳಲ್ಲಿ ಹಾಗಲ್ಲ. ಅಲ್ಲಿ ಹೋಗುವ ಬರುವ ಜನರು ಬೇಕಾದಷ್ಟಿರುತ್ತಾರೆ. ಎಷ್ಟೋ ಹುಡುಗರು ಬೆಳಿಗ್ಗೆ ಸ್ಕೂಲಿಗೆ ಬಂದು ಸಾಯಂಕಾಲದವರೆಗೂ ಅಲ್ಲೇ ಇರಬೇಕಾಗಿರುತ್ತದೆ. ಪಟ್ಟಣಗಳಿಗೆ ಬರುವಂತೆ ಹಳ್ಳಿಗಳಿಗೆ ಜನ ಬರುವುದಿಲ್ಲ. ಹಳ್ಳಿಗಳಿಗೆ ಬರುವವರು ಅವರ ಬಂಧುಗಳ ಅಥವಾ ಸ್ನೇಹಿತರ ಮನೆಗಳಲ್ಲಿ ಇಳಿದುಕೊಳ್ಳಬಹುದು. ಪಟ್ಟಣಗಳಲ್ಲಿ ಇದು ಸಾಧ್ಯವಾಗುವುದಿಲ್ಲ.

ಗ್ರಾಮಗಳಲ್ಲಿದ್ದ ನಮ್ಮ ಪೂರ್ವಾಚಾರ ಪದ್ಧತಿ ಏಕೆ ಹೋಗಬೇಕು? ಎಷ್ಟೋ ಗ್ರಾಮಗಳಲ್ಲಿ ಹೀಗಾಗಿ ರೈತರು ಒಬ್ಬರಿಲ್ಲೊಬ್ಬರಿಗಿದ್ದ ಸ್ನೇಹ, ವಿಶ್ವಾಸ, ಬಾಂಧವ್ಯ ಇತ್ಯಾದಿಗಳನ್ನೆಲ್ಲಾ ಕಳೆದುಕೊಂಡು ಅನೈಕಮತ್ಯಕ್ಕೆ ದಾರಿಯಾಗಿರುತ್ತೆ. ಆದುದರಿಂದ ಇಂಥಾದ್ದಕ್ಕೆಲ್ಲ ಅವಕಾಶ ತಪ್ಪಿಹೋಗಿ ಮತ್ತೆ ನಮಗೆ ನಮ್ಮ ಪೂರ್ವಪದ್ಧತಿಯು ಜಾರಿಗೆ ಬಂದರೇನೇ ಹಳ್ಳಿಗಳು ಸರ್ವತೋಮುಖವಾಗಿ ಅಭಿವೃದ್ಧಿಹೊಂದಲು ಅನುಕೂಲವಾಗುತ್ತದೆ. ಈಗಂತೂ ಆ ಅತಿಥಿ ಸತ್ಕಾರದ ಮಾತೇ ಇಲ್ಲವಾಗಿದೆ. ಆದುದರಿಂದ ಸಾಧ್ಯವಾದ ಮಟ್ಟಿಗೂ ಗ್ರಾಮಪಂಚಾಯಿತಿಗಳು ಈ ಹೋಟಲನ್ನಿಡತಕ್ಕ ಅವಕಾಶವನ್ನೇ ತಪ್ಪಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಈಗಾಗಲೇ ಈ ಗ್ರಾಮಪಂಚಾಯಿತಿ ಶಾಸನವಿರತಕ್ಕ ಕಡೆ ಅಲ್ಲಿನ ಪಂಚಾಯಿತಿ ಅಧ್ಯಕ್ಷರಿಗೆ ಒಂದು ನ್ಯಾಯ, ಒಂದು ಪಂಚಾಯಿತಿಯ ಬಗ್ಗೆ ತೀರ್ಮಾನಕೊಡಲು ಅಧಿಕಾರ ಕೊಟ್ಟಿದ್ದಾರೆ. ಅಷ್ಟೇ ಅಲ್ಲ, ಹಾಗೆ ಅವರು ಕೊಡತಕ್ಕ ತೀರ್ಪೇ ಆಖೈರು ತೀರ್ಮಾನವೆಂದೂ ಅದರ ಮೇಲೆ ಅಪೀಲ್ ಕೂಡ ಹೋಗಲಿಕ್ಕೆ ಅವಕಾಶವಿಲ್ಲವೆಂದೂ ಸಹ ಮಾಡಿದ್ದಾರೆ. ಹಾಗೆ ಈ ಪಂಚಾಯಿತಿ ಅಧ್ಯಕ್ಷರಿಗೆ ಹಲವಾರು ಕಡೆ ಅಷ್ಟೊಂದು ಅಧಿಕಾರ ಕೊಟ್ಟಿದ್ದಾಗ್ಯೂ ಇಲ್ಲಿಯು ನಮ್ಮ ಗ್ರಾಮಪಂಚಾಯಿತಿಗಳಿಗೆ ಏನೂ ಅಧಿಕಾರ ಕೊಡದಿದ್ದರೆ ಅಷ್ಟು ಚೆನ್ನಾಗಿ ಕಾಣುವುದಿಲ್ಲ. ಆದುದರಿಂದ ಈ ಪಂಚಾಯಿತಿಗಳಿಗೆ ಕೊಂಚ ಅಧಿಕಾರ ಕೊಡತಕ್ಕದ್ದು ಅವಶ್ಯಕವೆಂದು ಹೇಳುತ್ತೇನೆ.

ಮತ್ತೊಂದು ವಿಚಾರವೇನೆಂದರೆ—ಹಿಂದೆಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ 'ಜೋನರ್ ಸಿಸ್ಟಂ ಆಫ್ ಕಲ್ಟಿವೇಷನ್' ಎಂಬುದಾಗಿ ಒಂದು ಪದ್ಧತಿ ಜಾರಿಯಲ್ಲಿತ್ತು. ಈಗ ಅದು ತಪ್ಪಿಹೋಗಿದೆ. ಅದನ್ನು ಪುನಃ ಜಾರಿಗೆ ತರತಕ್ಕದ್ದು ಅವಶ್ಯಕವೆಂದು ನಾನು ಹೇಳುತ್ತೇನೆ. ಯಾವ ಯಾವ ಪ್ರದೇಶದಲ್ಲಿ ಏನೇನು ಬೆಳೆಗಳನ್ನಿಟ್ಟರೆ ಅನುಕೂಲವಾಗಿರುತ್ತದೆ, ಮತ್ತು ಗ್ರಾಮದ ಆವಶ್ಯಕತೆಗೆ ಯಾವ ಬೆಳೆಗಳು ಅತ್ಯಗತ್ಯ ಎಂಬ ತೀರ್ಮಾನವನ್ನೆಲ್ಲಾ ಈ ಗ್ರಾಮಪಂಚಾಯತಿಗಳಿಗೆ ವಹಿಸುವುದು ಬಹಳ ಸೂಕ್ತವಾದದ್ದೆಂದು ನನ್ನ ಸಲಹೆ. ಹೀಗೊಂದು ಒತ್ತಾಯಪಡಿಸುವ ಅಧಿಕಾರವನ್ನು ಗ್ರಾಮಪಂಚಾಯಿತಿಗಳಿಗೆ ಕೊಡದೆಹೋದರೆ ಗ್ರಾಮಸ್ಥರೆಲ್ಲರೂ ಅವರವರಿಗೆ ಬೇಕಾದ ವಸ್ತುಗಳನ್ನು ಅಂದರೆ ಕೇವಲ ಲಾಭದಾಯಕವಾಗಿರತಕ್ಕಂಥ ಫಸಲನ್ನು ತೆಗೆದು ಜನರ ಜೀವನಕ್ಕೆ ಅತ್ಯಾವಶ್ಯಕವಾಗಿ ಬೇಕಾಗುವಂಥ ಜಿನಸಾತಿ ಬೆಳೆಯನ್ನೇ ಕೈಬಿಟ್ಟುಬಿಡಲು ದಾರಿಯಾಗುತ್ತದೆ. ಆದುದರಿಂದ ಇಂಥಾ ಒಂದು, ಜೋನರ್ ವ್ಯವಸಾಯ ಪದ್ಧತಿಯನ್ನು ಜಾರಿಗೆ ತರುವಂತೆ ಮಾಡಿದರೆ ಅದರಿಂದ ದೇಶಕ್ಕೆ, ಇಂದಿನ ಪರಿಸ್ಥಿತಿಯಲ್ಲಂತೂ, ಇನ್ನೂ ಹೆಚ್ಚಿನ ಪರಿಣಾಮಕಾರಿಯಾದ ಉಪಕಾರವಾಗುತ್ತದೆ. ಇದರಿಂದ ಜನರೆಲ್ಲರೂ ಒಗ್ಗಟ್ಟಿನಿಂದ ಒಂದಾಗಿ ಕೆಲಸಮಾಡಲು ದಾರಿ ತೋರಿಸಿಕೊಟ್ಟಂತೆ ಆಗುತ್ತದೆ.

Sri H. M. CHANNABASAPPA.—Shall I take it that you advocate for giving statutory powers to the Panchayat to determine what crops are to be raised?

ಶ್ರೀ ವಿ. ಎಸ್. ನಾರಾಯಣರಾಯರು.—I do advocate that system. 'Co-operative farming' ಮಾಡಬೇಕೆಂಬುದೇ ನನ್ನ ಸಲಹೆ. ಹಾಗೆ ಮಾಡದಿದ್ದರೆ ಬರೀಲಾಭದಾಯಕ ಬೆಳೆಗಳನ್ನೇ ಬೆಳೆದು ಗ್ರಾಮಕ್ಕೆ ಬೇಕಾದ ಅಗತ್ಯವಾದ ಬೆಳೆಯನ್ನೇ ಯಾರೂ ಬೆಳೆಯುವುದಿಲ್ಲ. ಇಂಥಾ ಒಂದು ಸುಗಮವಾದ ಪದ್ಧತಿಯನ್ನು ನಾವು ಕೈಬಿಟ್ಟದ್ದೇ ಇಂದು ದೇಶದಲ್ಲಿ ಆಹಾರಾಭಾವಕ್ಕೆ ಇಷ್ಟು ಅವಕಾಶವಾಗಲು ಮುಖ್ಯ ಕಾರಣವಾಗಿರುತ್ತೆಂದು ನಾನು ಸೂಚಿಸಲಿಚ್ಛಿಸುತ್ತೇನೆ.

ಇನ್ನು ನಮಗ್ರ ಸೇವಾ ಸಹಕಾರಸಂಘಗಳ ಬಗ್ಗೆ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸತಕ್ಕದ್ದು ಅನುಚಿತವಲ್ಲವೆಂದು ನಾನು ಭಾವಿಸುತ್ತೇನೆ. ಅಂದರೆ ದಯೆಯಿಟ್ಟು ಯಾರೂ ಇದನ್ನು ಅಪಾರ್ಥಮಾಡಿಕೊಳ್ಳಬಾ

ರದು. ಇದರಿಂದ ಗ್ರಾಮಾಭಿವೃದ್ಧಿಗೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರಿಯಾಗಿರುತ್ತದೆ. ಈ ಸಹಕಾರ ಸಂಘಗಳನ್ನು ಸ್ಥಾಪಿಸುವುದು ಆಯಾಯ ಗ್ರಾಮಗಳಲ್ಲಿ ಬೆಳೆಯುವಂಥ ಪ್ರತಿಯೊಂದು ಪದಾರ್ಥಗಳನ್ನೂ ಆ ಸಹಕಾರ ಸಂಘಗಳಿಗೇ ಮಾರಾಟಮಾಡಬೇಕೆಂದೂ, ಮತ್ತು ಗ್ರಾಮಕ್ಕೆ ಅತ್ಯಗತ್ಯವಾಗಿ ಬೇಕಾಗಿರುವಂಥ ವಸ್ತುಗಳನ್ನೆಲ್ಲಾ ಆ ಸಹಕಾರ ಸಂಘಗಳಿಂದಲೇ ರೈತರು ಕೊಂಡುಕೊಳ್ಳಬೇಕೆಂದೂ, ಹೀಗೆ ಈ ಕೊಳ್ಳುವ ಮತ್ತು ಮಾರುವ ಎರಡು ಅವಕಾಶಗಳೂ ಈ ಒಂದಕ್ಕೆ ಕಲ್ಪಿಸಿಕೊಟ್ಟ ಭಾಗದಲ್ಲಿ ಆ ಸಹಕಾರ ಸಂಘಗಳಿಗೆ ಹೆಚ್ಚಿನ ಲಾಭ ಹೊಂದಲು ಒಂದು ಅವಕಾಶ ದೊರೆತು, ತನ್ಮೂಲಕ ಹಾಗೆ ಬರ ವಂಥ ಲಾಭದಲ್ಲಿ ಆಯಾಯ ಗ್ರಾಮಪಂಚಾಯಿತಿಗಳಿಗೆ ಅಗತ್ಯವೆಂದು ಕಂಡುಬರುವ, ರಸ್ತೆ, ಛತ್ರ, ಆಸ್ಪತ್ರೆ, ಚರಂಡಿ, ಮೋರಿ ಇತ್ಯಾದಿಗಳನ್ನು ಕಲ್ಪಿಸಿಕೊಳ್ಳಲು ತುಂಬಾ ಸಹಕಾರಿಯಾಗುತ್ತದೆ. ಈ ಸಹಕಾರ ಸಂಘಗಳಿಗೆ ಈ ಒಂದು ವಿಧವಾದ ಪ್ರೋತ್ಸಾಹನೀಡಲು ಗ್ರಾಮಪಂಚಾಯಿತಿಗಳಿಗೆ ಇದರಲ್ಲಿ ಅವಕಾಶವಿದೆ.

ಇನ್ನೊಂದು ಅಂಶವೇನೆಂದರೆ, ಈಗಾಗಲೇ ಶ್ರೀ ಎಚ್. ಬಿ. ಗುಂಡಪ್ಪಗೌಡರು ತಿಳಿಸಿರುವ ಪ್ರಕಾರ liability for the officers of the Panchayets, ವಿಚಾರದಲ್ಲಿ ಈ ಮಸೂದೆಯಲ್ಲಿ ಏನನ್ನೂ ಸೂಚಿಸಿರುವಂತೆ ಕಂಡುಬರುವುದಿಲ್ಲ. ಭಾರತ ರಾಜ್ಯಾಂಗದಲ್ಲಿ ಕೂಡ ಇಂಥಾದ್ದಕ್ಕೆ ಅವರು ಕಾನೂನಿನಲ್ಲಿ ಒಂದು ಷರತ್ತನ್ನು ಕಾಣಿಸೇ ಇದ್ದಾರೆ. ಗ್ರಾಮಗಳ ಉದ್ಧಾರವನ್ನು ಗ್ರಾಮ ಪಂಚಾಯಿತಿಗಳ ಮುಖಾಂತರ ಮಾಡುವುದು ಕಾಂಗ್ರೆಸ್ಸಿನ ಉದ್ದೇಶ. ಇದು ಭಾರತ ರಾಜ್ಯಾಂಗದಲ್ಲಿ ಅಡಕವಾಗಿದೆ. ಈ ಮಸೂದೆಯಲ್ಲಿ ತಿಳಿಸಿರುವಂತೆ ಗ್ರಾಮ ಪಂಚಾಯಿತಿ ಅಧಿಕಾರದಲ್ಲಿ ಹೆಚ್ಚಿನ ಬೆಲೆ ಬಾಳುವಂಥ ವಸ್ತುಗಳನ್ನೂ ಮತ್ತು ಹಣವನ್ನೂ ಬಿಡತಕ್ಕ ಅವಕಾಶವಿತ್ತಿರುವಾಗ ಅಂಥ ಹಣ ಇತ್ಯಾದಿ ಸಾರ್ವಜನಿಕ ಬಂಡವಾಳವನ್ನು ಅವರು ನಾಶಪಡಿಸಿದ್ದೇ ಆದರೆ ಅಂಥವನ ಅಥವಾ ಅಂಥವರ ಮೇಲೆಲ್ಲಾ ಒಂದು ಕಾರ್ಯಕ್ರಮವನ್ನು ಕೈಗೊಳ್ಳಲಿಕ್ಕೆ ಅವಕಾಶವಿದೆಯೆಂಬುದನ್ನು ಈ ಮಸೂದೆಯಲ್ಲಿ ಅಡಕಮಾಡಬೇಕು. ಈ ಗ್ರಾಮಗಳನ್ನೆಲ್ಲಾ ಅಭಿವೃದ್ಧಿ ಪಡಿಸುವುದಕ್ಕಾಗಿ ಗ್ರಾಮಪಂಚಾಯಿತಿಗಳನ್ನು ಅಭಿವೃದ್ಧಿಗೆ ತರಬೇಕೆಂಬ ಆಸೆ ಆಕಾಂಕ್ಷೆಗಳು ಬಹುಕಾಲದಿಂದಲೂ ನಮ್ಮ ಕಾಂಗ್ರೆಸ್ ಸಂಸ್ಥೆಗೆ ಇದ್ದೇ ಇತ್ತು. ಆದರೆ ಇಂದು ಈ ಮಸೂದೆ ಸಭೆಯ ಮುಂದೆ ಬಂದುದರಿಂದ ಆ ನಮ್ಮೆಲ್ಲರ ಆಸೆ ಈಡೇರಲು ಒಂದು ಅವಕಾಶ ದೊರೆತಿದೆ. ಇದರಲ್ಲಿ ಅಲ್ಪಸ್ವಲ್ಪ ಬದಲಾವಣೆಯಾಗಬೇಕಾಗಿರುವಂಥ ಕೆಲವು ಅಂಶಗಳಿರುತ್ತವೆ. ಅದಕ್ಕಾಗಿಯೇ ಈಗ ಈ ಮಸೂದೆಯನ್ನು ಸೆಲೆಕ್ಟ್ ಸಮಿತಿಯವರ ಪರಿಶೀಲನೆಗಾಗಿ ಒಪ್ಪಿಸಿರತಕ್ಕದ್ದು ಸೂಕ್ತವಾಗಿದೆಯೆಂದು ಹೇಳಿ ನಾನು ಈ ಮಸೂದೆಗೆ ನನ್ನ ಸಂಪೂರ್ಣ ಬೆಂಬಲ ನೀಡಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ನ ಪಂಗಡ).—ಸ್ವಾಮಿ, ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ ಮತ್ತು ಹಾಗೆ ಇದನ್ನು ಸ್ವಾಗತಿಸುವಾಗ ನಾನು ಕೇವಲ ಒಂದೆರಡು ವಿಷಯಗಳನ್ನು ಮಾತ್ರ ಹೇಳಬಯಸುತ್ತೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಗ್ರಾಮಪಂಚಾಯಿತಿಗಳಿಗೆ ಒಳಾಡಳಿತಗಳ ಬಗ್ಗೆ ಸ್ವಾತಂತ್ರ್ಯವಿರಬೇಕೆಂಬ ವಾದ ಹೆಚ್ಚಾಗುತ್ತಿದೆ. ಹಾಗೆ ಈ ಸ್ಥಳೀಯ ಸಂಸ್ಥೆಗಳಿಗೂ ಸ್ವಾತಂತ್ರ್ಯ ಬೇಕೆಂದು ಕೇಳುವವರಲ್ಲಿ ನಾನೂ ಒಬ್ಬ. ಆದರೆ ಇದು ಎಷ್ಟರಮಟ್ಟಿಗೆ ಗ್ರಾಮಾಂತರ ಪ್ರದೇಶಗಳಿಗೆ ಅನ್ವಯಿಸಬೇಕೆಂಬ ಬಗ್ಗೆ ಆಲೋಚಿಸಿ ನೋಡಿ ಈಗಿನ ಕಾಲಕ್ಕೆ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಕೊಡಬಹುದೆಂದು ನಾನು ಅಭಿಪ್ರಾಯಪಡುತ್ತೇನೆ. ಮುಖ್ಯವಾಗಿ ಈ ಬಗ್ಗೆ ಗ್ರಾಮಾಂತರ ಪ್ರದೇಶದವರಿಗಿರಬೇಕಾದುದು ವಿದ್ಯೆ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಅವರು ಅಷ್ಟು ವಿದ್ಯಾವಂತರಾಗದಿರುವುದರಿಂದ, ಇನ್ನೂ ಸಮಾಜ ಬಹಳ ಹಿಂದುಳಿದಿರುವುದರಿಂದ ಯಾವ ಯಾವ ಆಡಳಿತದ ಬಗ್ಗೆ ಅವರಿಗೆ ಎಷ್ಟೆಷ್ಟರಮಟ್ಟಿನ ಸ್ವಾತಂತ್ರ ಕೊಡಬೇಕೆಂಬುದೇ ಈಗಿರತಕ್ಕ ಮುಖ್ಯ ಸಮಸ್ಯೆ. ಇದನ್ನು ಪರ್ಯಾಲೋಚಿಸದೆ ಏಕದಂ ಎಲ್ಲಾ ಅಧಿಕಾರವನ್ನೂ ಅವರಿಗೇ ಮಿತಿಮೀರಿ ಕೊಡುವುದರಿಂದ ಪರಿಣಾಮದಲ್ಲಿ ಅನೇಕರಿಗೆ ತೊಂದರೆಯಾಗಬಹುದೆಂದು ನಾನು ಶಂಕಿಸುತ್ತೇನೆ. ಕಾನೂನನ್ನು ಜಾರಿಗೆ ತರುವಾಗ ಅದರಿಂದ ಸಮಸ್ತ ಗ್ರಾಮಸ್ಥರಿಗೂ ಅನುಕೂಲವಾಗುವುದರ ಜೊತೆಗೆ ಅದರಿಂದ ಗ್ರಾಮದಲ್ಲಿರತಕ್ಕ ಯಾವ ಪ್ರಜೆಗೂ ಯಾವ ರೀತಿಯಲ್ಲೂ ತೊಂದರೆಯಾಗದಂತಿರುವುದು ಬಹು ಮುಖ್ಯವಾದದ್ದು. ಇದೆಲ್ಲಾ ನನ್ನ ಅನುಭವದಿಂದ ಹೇಳತಕ್ಕ ಮಾತಾಗಿದೆ. ಸ್ವಾಮಿ, ತಮಗೂ ಗೊತ್ತಿರುವ ಹಾಗೆ ಈ ಗ್ರಾಮಾಭ್ಯುದಯದ ಬಗ್ಗೆ ಒಂದು ಪಂಚಾಯಿತಿ ಆಕ್ಟು 1926 ನೆಯ ಇಸವಿಯಿಂದಲೇ ಜಾರಿಗೆ ಬಂದು ಅದರಂತೆ ಕೆಲಸ ನಡೆಸಲು ಅವಕಾಶವನ್ನು ಮಾಡಲಾಯಿತು. ಈ ವಿಚಾರ ತಮಗೂ ಮತ್ತು ಈ ಮಾನ್ಯಸಭೆಯ ಇನ್ನೂ ಅನೇಕ ಮಾನ್ಯಸದಸ್ಯರಿಗೂ ಗೊತ್ತಿರತಕ್ಕದ್ದೇ ಆಗಿದೆ. ಆದರೆ ತಹಲ್‌ವರಿಗೂ ಆ ಕಾನೂನುಗಳೆಲ್ಲವೂ ಕೇವಲ 'ಪುಸ್ತಕದಲ್ಲಿರುವ ಕಾನೂನೇ ಆಗಿವೆ. ಕಾನೂನನ್ನು ರಚನೆಮಾಡಿದ್ದೂ ಆಯಿತು, ಅದನ್ನು ಜಾರಿಗೆ ಕೊಟ್ಟದ್ದೂ ಆಯಿತು, ಆದರೆ ಕಾರ್ಯರೂಪದಲ್ಲಿ ಸಮಾಜಕ್ಕೆ ಲಭಿಸಬೇಕಾದ್ದು ಲಭಿಸಲಿಲ್ಲ. ಹಿಂದೆ ಆ ಶಾಸನ ಜಾರಿಗೆ ಬಂದಂಥಾ ಕಾಲದಲ್ಲಿ ಇನ್ನೇನು ಹಳ್ಳಿಗಳ ಜೀವನವು ಬಹುಮಟ್ಟಿಗೆ ಉತ್ತಮಗೊಳ್ಳುತ್ತದೆಂದು ನಾವು ಭಾವಿಸಿದ್ದೆವು. ಆದರೆ ಬರುಬರುತ್ತ ನಾವು ಹಾಗೆ ತಿಳಿದುಕೊಂಡಿದ್ದಷ್ಟು ನಡೆಯಲಿಲ್ಲ. ಹಳ್ಳಿಗಳಿಗೆಲ್ಲಾ ಒಳಾಡಳಿತದ ಬಗ್ಗೆ ನಾವೀಗ ಅಧಿಕಾರ ಕೊಡುವಾಗ, ಅವರಿಗೆ ಈಗ ಯಾವ ಯಾವ ಬಾಬಿನಲ್ಲಿ ಏನೇನು ತೊಂದರೆಗಳಿರುತ್ತವೋ ಅಥವಾ ಅನಾನುಕೂಲಗಳಿರುತ್ತವೆಯೋ ಅಂಥಹವುಗಳನ್ನು ನಿವಾರಣೆಮಾಡುವಷ್ಟು ಮಟ್ಟಿಗೆ ಮಾತ್ರ ಕೊಡಬಹುದೇ ದೂ ಹಾಗಿಲ್ಲದೆ ಎಲ್ಲ ಅಧಿಕಾರಗಳನ್ನೂ ಅವರಿಗೆ ಮಿತಿಮೀರಿ ಕೊಟ್ಟಲ್ಲಿ, ಅದು ಸಮಾಜದ ಹಿತದೃಷ್ಟಿಯಲ್ಲಿ, ಅಥವಾ ಸಮಾಜ ಸಂಘಟನಾದೃಷ್ಟಿಯಲ್ಲಿ ಅಷ್ಟು ಸೂಕ್ತವಲ್ಲವೆಂದು ಕಾಣುತ್ತದೆ.

ಅಧ್ಯಕ್ಷರು.—ಯಾವ ಬಾಬಿನಲ್ಲಿ ಅವರಿಗೆ ಅಷ್ಟು ಹೆಚ್ಚಿನ ಅಧಿಕಾರ ಕೊಡಬಾರದೆಂದು ಹೇಳುತ್ತೀರಿ! ಹಾಗಿದ್ದರೆ ಈಗ ಕೊಡಬೇಕೆಂದಿರುವ ಅಧಿಕಾರ ಕೂಡ ಪಂಚಾಯಿತಿಗಳಿಗೆ ಹೆಚ್ಚಾಯಿತೆಂದು ತಾವು ಹೇಳುತ್ತೀರಾ?

ಶ್ರೀ ಎಂ. ಮಾದಯ್ಯನವರು.—ಶ್ರೀಮಾನ್ ಗುಂಡಪ್ಪಗೌಡರು ಈ ಗ್ರಾಮ ಪಂಚಾಯಿತಿಗಳಿಗೆ ಕ್ರಿಮಿನಲ್ ಅಪರಾಧಗಳ ಮತ್ತು ಸಿವಿಲ್ ಹಕ್ಕುಗಳ ತೀರ್ಮಾನಗಳ ಬಗ್ಗೆ ಅಧಿಕಾರವಿರಬೇಕೆಂದು ತಿಳಿಸಿದಾಗ ಮಾನ್ಯ ಮಂತ್ರಿಗಳು ಆ ಅಭಿಪ್ರಾಯವನ್ನು ಪರಿಶೀಲಿಸುವುದಾಗಿ ಭರವಸೆ ನೀಡಿದರು.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಾನ್ಯ ಸದಸ್ಯರೆಲ್ಲರೂ ಕೊಡುವ ಸಲಹೆಗಳನ್ನು ಪರಿಶೀಲಿಸಲು ಈ ಮಸೂದೆಯಲ್ಲಿ ಅವಕಾಶವಿದೆ.

ಶ್ರೀ ಎಂ. ಮಾದಯ್ಯನವರು.—ಅಂಥಾ ಅಸ್ತ್ರಗಳ ಬಲದಿಂದ, ಅವಿದ್ಯಾವಂತರಿಂದ ಕೂಡಿರತಕ್ಕ ಸಮಾಜ, ಆ ಅಸ್ತ್ರಗಳನ್ನು ಸಮಾಜದ ಕಟ್ಟುಪಾಡುಗಳಿಗೆ ಉಪಯೋಗಿಸಲು ಅವಕಾಶವಾಗಿ ದೇಶದ ಸರ್ವತೋಮುಖವಾದ ಅಭಿವೃದ್ಧಿಗೆ ಸಹಾಯಕವಾಗದೆ, ಎಲ್ಲಿ ಉಪಯೋಗಿಸಬೇಕೋ ಅಲ್ಲಿ ಕೈಬಿಟ್ಟು, ಎಲ್ಲಿ ಉಪಯೋಗಿಸಬಾರದೋ ಅಂಥ ಸಂದರ್ಭಗಳಲ್ಲಿ ಉಪಯೋಗಿಸಿ, ಅಥವಾ ಅವುಗಳನ್ನೇ ತಪ್ಪು ಅಭಿಪ್ರಾಯಕ್ಕೂ ಉಪಯೋಗಿಸಲು ಅವಕಾಶವಾಗತಕ್ಕ ಸಂದರ್ಭಗಳಿರುವುದರಿಂದ ಇಂಥಾದ್ದನ್ನು ತಪ್ಪಿಸಬೇಕೆಂಬುದೇ ನನ್ನ ವಾದದ ಅಭಿಪ್ರಾಯ. ಯಾರಿಗೂ ತೊಂದರೆಯಾಗದ ರೀತಿಯಲ್ಲಿರಬೇಕು. ನಾವು ಹಳ್ಳಿಯಲ್ಲೇ ಹುಟ್ಟಿ ಬೆಳೆಯುತ್ತಿರುವುದರಿಂದ ಅಲ್ಲಿನ ಸ್ಥಿತಿ ನನಗೆ ಚೆನ್ನಾಗಿ ಗೊತ್ತು; ಅಲ್ಲಿ ವಿದ್ಯಾವಂತರು ಕಡಮೆ. ಅಲ್ಲಿ ವ್ಯಾಜ್ಯಗಳನ್ನು ಅಲ್ಲಿಯ ಮುಖಂಡರುಗಳು ಪರಿಹಾರ ಮಾಡುವುದಕ್ಕೆ ಈಗಿರುವಂತೆ ಅವಕಾಶವಿರುವುದು ಒಳ್ಳೆಯದು.

Sri H. M. CHANNABASAPPA.—Shall I take it that such a course of action will curtail the privilege of a person to see that he gets justice in a court of law?

ಶ್ರೀ ಎಂ. ಮಾದಯ್ಯನವರು.—ತಮಗೆ ಗೊತ್ತಿರುವ ಹಾಗೆ ಎಷ್ಟೋ ಕ್ರಿಮಿನಲ್ ಮತ್ತು ಸಿವಿಲ್ ವ್ಯವಹಾರಗಳನ್ನು ನಾಲ್ಕು ಜನ ಪಂಚಾಯಿತಿದಾರರು ಕೂತುಕೊಂಡು ತೀರ್ಮಾನಿಸುತ್ತಿರುವುದು ಅನೂಚಾನವಾದ ಪದ್ಧತಿಯೇ ಆಗಿದೆ. ಆದ್ದರಿಂದ ಅನಾನ ಕಾಲವನ್ನು ನಿವಾರಣೆಮಾಡಿ ಒಗ್ಗಟ್ಟಿನಿಂದ ಕೆಲಸಕಾರ್ಯಮಾಡಲು ಸಹಾಯವಾಗುವ ರೀತಿಯಲ್ಲಿರಬೇಕೇ ಹೊರತು ಯಾರಿಗೂ ತೊಂದರೆಯಾಗುವಂತೆ ಇರಬಾರದು. ಅಂಥ ಅಧಿಕಾರ ಮಾತ್ರ ಇರಬೇಕೆಂಬುದೇ ನನ್ನ ಸಲಹೆ.

Sri H. M. CHANNABASAPPA.—Let us know definitely your opinion in the matter. It is very important.

ಶ್ರೀ ಎಂ. ಮಾದಯ್ಯನವರು.—ಡೆಪ್ಯುಟಿ ಕಮಿಷನರು ವಗೈರೆ ಸರ್ಕಾರಿ ಅಧಿಕಾರಿಗಳಿಗೆ ಅನಾವಶ್ಯಕವಾಗಿ ಗ್ರಾಮಾಭಿವೃದ್ಧಿ ಕಾರ್ಯಗಳಲ್ಲಿ ಪ್ರವೇಶಮಾಡಿ ಅದಕ್ಕೆ ಅಡಚಣೆಮಾಡುವಷ್ಟು ಅಧಿಕಾರ ಕೊಡಬಾರದು. ಈಗ ಪ್ರಜಾಪ್ರಭುತ್ವವಿರುವುದರಿಂದ ಮತ್ತು ಈಗಿನ ಸರ್ಕಾರ ವಿಧಿಸಬಹುದಾದ ನಿಯಮಗಳಿಗನುಸಾರವಾಗಿ ಅಧಿಕಾರಿಗಳು ನಡೆಯಬೇಕಾಗಿರುವುದರಿಂದ ಜನರಿಗೆ ಅಡಚಣೆಮಾಡುವಂಥ ಅಧಿಕಾರಗಳನ್ನು ಕೊಡದೆ ಇದ್ದಾಗ್ಯೂ ಕೆಲವು ಸಂದರ್ಭಗಳಲ್ಲಿ ಹತೋಟಿ ಇರುವುದು ಸಾಕ್ತವಲ್ಲವೆ?

ಆ ಮೇಲೆ ಇಂಡೈರೆಕ್ಟ್ ಮತ್ತು ಡೈರೆಕ್ಟ್ ಚುನಾವಣೆ ವಿಚಾರ. ಪಂಚಾಯಿತಿಗಳಲ್ಲಿ ಇಪ್ಪತ್ತೊಂದು ವರ್ಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ವಯಸ್ಕನೂ ಸಹ ಓಟು ಕೊಟ್ಟು ಪ್ರತಿನಿಧಿಗಳನ್ನು ಕಳುಹಿಸಿದ ಮೇಲೆ ಅದೇರೀತಿ ಇಡೀ ಜಿಲ್ಲೆಯಲ್ಲಿ ಏಕೆ ಮಾಡಬಾರದು ಎಂಬುದು ಮುಖ್ಯವಾದ ಪ್ರಶ್ನೆ. ನಾವು ಪ್ರಜಾಪ್ರಭುತ್ವದ ಆಡಳಿತಕ್ಕೊಳಪಟ್ಟಿರುವುದರಿಂದ ಪಂಚಾಯಿತಿ ಆಡಳಿತವನ್ನು ನಡೆಸುವುದಕ್ಕೆ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳೇ ಇರುವಾಗ ಅದೇ ಜಿಲ್ಲೆ ಆಡಳಿತಕ್ಕೂ ಸಹ ವಯಸ್ಕರ ಮತದಾನ ಪದ್ಧತಿಯಂತೆ ಚುನಾವಣೆಯಾಗಬೇಕೇ ಹೊರತು ಬರೀ ಪಂಚಾಯಿತಿ ಮೆಂಬರುಗಳ ಓಟುಗಳಿಂದ ಚುನಾವಣೆಯಾಗುವುದಕ್ಕೆ ಅವಕಾಶಕೊಡುವುದು ಅಷ್ಟು ಸೂಕ್ತವಲ್ಲ.

ಅಧ್ಯಕ್ಷರು.—ಅಸೆಂಬ್ಲಿಗಳಿಗೂ ಕೂಡ ಜಿಲ್ಲಾ ಬೋರ್ಡಿನಿಂದ ಸದಸ್ಯರುಗಳನ್ನು ಕಳುಹಿಸಿದರೆ ಹೆಚ್ಚು ಸಂಪರ್ಕ ಒಬ್ಬರಿಗೊಬ್ಬರಿಗೆ ಇರುತ್ತದೆ ಎಂದು ಮಹಾತ್ಮಗಾಂಧಿಯವರೂ ಸೂಚನೆ ಕೊಟ್ಟಿದ್ದಾರೆ.

Sri K. PUTTASWAMY (Mysore District—General)).—We differ from Mahatma Gandhi. That is our greatness!

ಶ್ರೀ ಎಂ. ಮಾದಯ್ಯನವರು.—ಮಹಾತ್ಮಾಜೀಯವರು ಹೇಳಿರುವುದನ್ನು ಒಪ್ಪುವುದರಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ಈಗಿನ ಕಾಲದಲ್ಲಿ ಅದನ್ನು ಅನುಸರಿಸಿದರೆ ಈಗ ಹೇಳಿರುವ ಕಾರಣಗಳಿಂದ ಗ್ರಾಮಾಂತರಗಳಲ್ಲಿ ವಿದ್ಯಾಭ್ಯಾಸದ ಮಟ್ಟ ವಗೈರೆ ಸರಿಯಾಗಿ ಇಲ್ಲದೇ ಇರುವುದರಿಂದ........................

ಅಧ್ಯಕ್ಷರು.—ಜಿಲ್ಲಾ ಬೋರ್ಡಿಗೂ ಮತ್ತು ಪಂಚಾಯಿತಿಗೂ ಒಂದು ಸರಿಯಾದ ಸಂಬಂಧ ಕಲ್ಪಿಸಬೇಕೆಂಬುದೇ ಈ ಮಸೂದೆಯ ಮುಖ್ಯ ಉದ್ದೇಶ. ತಾವು ಹೀಗೆ ಹೇಳಿದರೆ ಹೇಗೆ ಸಂಬಂಧವನ್ನು ಕಲ್ಪನೆಮಾಡುವುದು?

ಶ್ರೀ ಎಂ. ಮಾದಯ್ಯನವರು.—ಇದರಿಂದ ಇಡೀ ಜಿಲ್ಲೆಯಲ್ಲಿರುವ ಪ್ರಜೆಗಳ ಪ್ರಾತಿನಿಧ್ಯ ಕೊಟ್ಟ ಹಾಗಾಗುತ್ತದೆಯೇ?

Sri H. M. CHANNABASAPPA.—Do you think that the Presidential election also should take place on adult franchise?

ಶ್ರೀ ಎಂ. ಮಾದಯ್ಯನವರು.—ಅದರೂ ತಪ್ಪೇನಲ್ಲ.

ಅಧ್ಯಕ್ಷರು.—ಆದರೆ ಅದರ ಕಷ್ಟವೇನೆಂದು ನೋಡಬೇಕು.

ಶ್ರೀ ಎಂ. ಮಾದಯ್ಯನವರು.—ಸರ್ಕಾರಕ್ಕೇನೋ ಸ್ವಲ್ಪ ಕಷ್ಟವಾಗುತ್ತದೆ. ಆದರೆ ನಿಜವಾದ ಪ್ರಜೆಗಳ ಪ್ರತಿನಿಧಿಯನ್ನ ಬೇಕಾದರೆ ಆ ರೀತಿ ಆಗಬೇಕು. ಆ ರೀತಿ ಮಾಡುವುದೂ ಅಲ್ಲದೆ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಆಡಳಿತ ನಡೆಸಿದರೇ ಪ್ರಜಾಪ್ರಭುತ್ವವೆನಿಸುತ್ತದೆ; ಹಾಗಿಲ್ಲದಿದ್ದರೆ ಸರ್ಕಾರದವರು ನಾಮಕರಣಮಾಡಿದಂತೆ ಆಗುತ್ತದೆ ಮತ್ತು ಜಿಲ್ಲಾ ಬೋರ್ಡು ನಾಮಕರಣ ಮಾಡಿದ ಹಾಗಾಗುತ್ತದೆ. ಅವೆರಡೂ ಒಂದೇ. ನೇರವಾಗಿ ಪ್ರಜೆಗಳಿಂದ ಚುನಾಯಿಸುವುದು ಬೇಡ, ಪಂಚಾಯಿತಿಯಲ್ಲಿರುವವರಿಂದರೇ ಚುನಾವಣೆಯಾದರೆ ಸಾಕು ಎಂದು ಶ್ರೀ ಸುಬ್ಬರಾಯಶೆಟ್ಟರು ಹೇಳಿದರು. ಹಾಗೆ ಮಾಡಿದರೂ ಒಂದೇ, ಸರ್ಕಾರದವರು ನಾಮಕರಣಮಾಡಿದರೂ ಒಂದೇ. ಆದ್ದರಿಂದ ಅದು ಅಷ್ಟು ಚೆನ್ನಾಗಿಲ್ಲ. ಪಂಚಾಯಿತಿಗಳಲ್ಲಾಗಲೀ ಅಥವಾ ಗ್ರೂಪಿಗೆ ಸೇರಿರುವ ಪಂಚಾಯಿತಿಗಳಲ್ಲಾಗಲೀ ವಯಸ್ಕರು ಓಟುಮಾಡುವುದಕ್ಕೆ ಅವಕಾಶವಿರಬೇಕು. ಇಂಡೈರೆಕ್ಟ್ ಆಗಿ ಚುನಾವಣೆ ಮಾಡುವುದು ಅಷ್ಟು ಸೂಕ್ತವಲ್ಲ.

ಅಧ್ಯಕ್ಷರು.—ಇಂಡೈರೆಕ್ಟ್ ಚುನಾವಣೆಯೆಂದರೆ ನಿಮ್ಮ ಅರ್ಥವೇನು?

ಶ್ರೀ ಎಂ. ಮಾದಯ್ಯನವರು.—ನಿಮ್ನವರ್ಗದವರಿಗೆ ಸ್ಥಾನಗಳನ್ನು ಮೀಸಲಾಗಿಟ್ಟಿರುವ ವಿಚಾರದಲ್ಲಿ ಪ್ರಾತಿನಿಧ್ಯವನ್ನು ಆಗಾಗ್ಗೆ ಸರ್ಕಾರದವರು ಮಾಡುವ

ಕಾನೂನಿಗೆ ಅದು ಒಳಪಟ್ಟಿರಬೇಕೆಂದು ಹೇಳಿದೆ. ಹಾಗೆಮಾಡದೆ ಖಚಿತವಾಗಿ ಒಂದು ಪ್ರಕರಣದಲ್ಲಿ ಕಾನೂನಿನಲ್ಲೇ ಗೊತ್ತುಮಾಡುವುದು ಒಳ್ಳೆಯದು.

ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈ ಆಕ್ಟು ಜಾರಿಗೆ ಬಂದಮೇಲೆ ತಾನೆ ಚುನಾವಣೆ ವಿಚಾರದಲ್ಲಿ ನಿಬಂಧನೆಮಾಡುವುದು.

ಶ್ರೀ ಎಂ. ಮಾದಯ್ಯನವರು.—ಮೀಸಲಾಗಿಡುವ ಸ್ಥಾನಗಳನ್ನು ಹೇಗೆ ಭರ್ತಿಮಾಡುವುದು ಎಂಬ ತಪಶೀಲು ಇದರಲ್ಲಿ ಅಡಕವಾಗಿರುವಂತೆ ಕಾಣಲಿಲ್ಲ.

ಅಧ್ಯಕ್ಷರು.—ಅಸೆಂಬ್ಲಿಗೆ ಹೇಗೆ ಮಾಡಿದೆಯೆಂಬುದು ನಿಮಗೆ ಗೊತ್ತಿಲ್ಲವೆ ?

ಶ್ರೀ ಎಂ. ಮಾದಯ್ಯನವರು.—ನಿಮ್ನವರ್ಗದವರಿಗಾಗಿ ಗೊತ್ತುಮಾಡಿ ಮೀಸಲಾಗಿರುವ ಸ್ಥಾನಗಳಿಗೆ ನಿಮ್ನವರ್ಗದವರಲ್ಲದೇಯಿರುವವರ ಚುನಾವಣೆಯಾದ ಮೇಲೆ ಪಂಚಾಯಿತಿಯಿಂದ ಚುನಾಯಿಸುವಂತೆ ಶಿಫಾರ್ಸಾಗಿದೆಯೆಂದು ಹೇಳಿದೆ.

ಅಧ್ಯಕ್ಷರು.—ರಾಜ್ಯಾಂಗದ ಪ್ರತಿಯನ್ನು ನೋಡಿ ಆ ವಿಚಾರದಲ್ಲಿ ಮಾಡಿರುವ ಅವಕಾಶವನ್ನು ತಿಳಿದು ಹೇಳಬಹುದಲ್ಲವೆ ?

ಶ್ರೀ ಎಂ. ಮಾದಯ್ಯನವರು.—ಇನ್ನು ಸೆಸ್ಸುಗಳನ್ನು ವಿಧಿಸುವ ವಿಚಾರ ನೋಡಿದರೆ, ಬಡವರು ಮತ್ತು ಹೆಸರಿಗೆ ಮಾತ್ರ ಯಾವುದೋ ಒಂದು ಗುಡಿಸಲು ಅಥವಾ ಮನೆ ಇರುವವರ ಮೇಲೂ ವಿದ್ಯಾಭ್ಯಾಸದ ಸೆಸ್ಸನ್ನು ಹಾಕಬೇಕೆಂದು ಕೆಲವರ ಸೂಚನೆ. ಇದೂ ಹಾಗೇ ಇದೆ. ಹಾಗೆ ಮಾಡಿದ್ದೇ ಆದರೆ ಯಾವ ಸರ್ಕಾರದವರೂ ಕೂಡ ಬಡವರ ವಿಶ್ವಾಸಕ್ಕೆ ಪಾತ್ರರಾಗುವುದಿಲ್ಲ ಎಂದು ಹೇಳಬೇಕಾಗಿದೆ. ಅಲ್ಪ ಸ್ವಲ್ಪ ಜಮೀನಿಟ್ಟುಕೊಂಡಿರುವವರ ಮತ್ತು ನಾನಾ ರೀತಿಯಲ್ಲಿ ದೇಶ ಸೇವೆ ಮಾಡುತ್ತಿರುವ ಕೂಲಿ ವ್ಯವಸಾಯ ಮಾಡುತ್ತಿರುವ ಕೇವಲ ಬಡವರಿಗೆ ಅನಾವಶ್ಯಕವಾದ ತೆರಿಗೆಯನ್ನು ವಿಧಿಸುವುದು ಅಷ್ಟು ನ್ಯಾಯವಲ್ಲ.

Sri H. M. CHANNABASAPPA.—I would like to know the opinion of the Hon'ble Member with respect to the number of reservations of seats in village Panchayets and District Boards.

ಶ್ರೀ ಎಂ. ಮಾದಯ್ಯನವರು.—It is stated in the Bill. ನನಗೇನೆನ್ನಿಸುತ್ತದೆಯೆಂದರೆ ನಮ್ಮ ರಾಜ್ಯಾಂಗದಲ್ಲಿ ನಿಮ್ನತರಗತಿಯವರ ಪ್ರಾತಿನಿಧ್ಯಕ್ಕೆ ಯಾವ ಮಾರ್ಗವನ್ನು ತೋರಿಸಿದೆಯೋ ಅದು ಬಿಟ್ಟು ಬೇರೆ ಏನನ್ನೂ ಮಾಡುವುದು ನ್ಯಾಯವಿಲ್ಲ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದೇ ಮಾರ್ಗವನ್ನೇ ಈಗ ಅನುಸರಿಸಿರುವುದು.

ಅಧ್ಯಕ್ಷರು.—ಅದಕ್ಕಿಂತಲೂ ಸ್ವಲ್ಪ liberal ಆಗಿಯೇ ಇದೆ.

ಶ್ರೀ ಎಂ. ಮಾದಯ್ಯನವರು.—ಆ ವಿಷಯದಲ್ಲಿ ನಾನು ತಮಗೆ ಬಹಳ ಋಣಿಯಾಗಿದ್ದೇನೆ. ಆದರೆ......

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ರಾಜ್ಯಾಂಗದಲ್ಲಿ "ಹತ್ತು ವರ್ಷದೊಳಗೆ" ಎಂದು ಒಂದು ಕಾಲಾವಧಿ ಗೊತ್ತು ಮಾಡಿದ್ದಾರೆ. ಇಲ್ಲಿಯೂ ಅದನ್ನೇ ಮಾಡಬೇಕೇ ?

ಅಧ್ಯಕ್ಷರು.—ಇಲ್ಲದಿದ್ದರೆ ರಾಜ್ಯಾಂಗ ಶಾಸನಕ್ಕೆ ವ್ಯತಿರಿಕ್ತವಾಗುತ್ತದೆಂದು ಹೇಳುತ್ತಾರೋ ಏನೋ !

ಶ್ರೀ ಎಂ. ಮಾದಯ್ಯನವರು.—7ನೆಯ ಸೆಕ್ಷನ್ನಿನ (2)ನೆಯ ಉಪವಿಧಿಯಲ್ಲಿ,

"If two-thirds of the number of voters in any village included in a group of villages under the jurisdictions of a village panchayet elect to have a Village panchayet constituted for their village, such village may be constituted as a Village Panchayet under this Act."

ಎಂದಿದೆ. ಅಂದರೆ ಇದರ ಪ್ರಕಾರ 2,000—3,000 ಜನರಿರುವ ಒಂದು ಗ್ರೂಪ್ ಪಂಚಾಯ್ತಿಯಲ್ಲಿ, ಯಾವುದಾದರೂ 1,000 ಪ್ರಜೆಗಳುಳ್ಳ ಒಂದು ಗ್ರಾಮದ ಮೂರನೇ ಎರಡು ಭಾಗದ ಓಟರುಗಳು ತಾವೇ ಒಂದು ಪಂಚಾಯ್ತಿ ಮಾಡಿಕೊಳ್ಳಬೇಕೆಂದು ಅಪೇಕ್ಷೆಪಟ್ಟರೆ, ಅವರಿಗೆ ಮಾಡಿಕೊಡ ವುದಕ್ಕೆ ಸಾಧ್ಯವೇ ?

ಅಧ್ಯಕ್ಷರು.—ಮಿಕ್ಕ ಯಾವ ಸೆಕ್ಷನ್‌ಗಳ ಪ್ರಕಾರವೂ ಪಂಚಾಯ್ತಿ ಮಾಡಿಕೊಳ್ಳುವುದಕ್ಕೆ ಅಡ್ಡಿಯಿಲ್ಲದಿದ್ದರೆ ಈ ಸೆಕ್ಷನ್ ಪ್ರಕಾರ ಮಾಡಬಹುದು ಅಷ್ಟೆ.

ಶ್ರೀ ಎಂ. ಮಾದಯ್ಯನವರು.—ಈ ಕ್ಲಾಜಿನ ಪ್ರಕಾರ ಗ್ರೂಪ್ ಪಂಚಾಯ್ತಿಯೊಳಗಿನ ಯಾವುದಾದರೂ ಗ್ರಾಮದವರು 2/3 ಭಾಗದಷ್ಟು ನಿವಾಸಿಗಳ ಅಭಿಪ್ರಾಯದ ಮೇಲೆ ಪ್ರತ್ಯೇಕವಾಗಿ ಪಂಚಾಯ್ತಿಯೊಂದನ್ನು ಏರ್ಪಡಿಸಿಕೊಳ್ಳಬೇಕೆಂದರೆ ಅದಕ್ಕೆ ಅವಕಾಶವಿದೆಯೆಂದು ಅರ್ಥವಾಗುವುದಿಲ್ಲವೇ ?

ಅಧ್ಯಕ್ಷರು.—ಗ್ರಾಮಪಂಚಾಯ್ತಿಯೊಂದನ್ನು ಮಾಡಿಕೊಳ್ಳಬೇಕಾದರೆ ಇನ್ನೊಂದು condition ಕೂಡ ಇದೆ. ಆ ಊರಿನಲ್ಲಿ 2,000 ಕ್ಕಿಂತ ಕಡಿಮೆ ಜನರಿದ್ದರೆ ಅಲ್ಲಿ ಪ್ರತ್ಯೇಕವಾದ ಒಂದು ಪಂಚಾಯ್ತಿ ಏರ್ಪಡಿಸುವುದಕ್ಕಾಗುವುದಿಲ್ಲ.

ಶ್ರೀ ಎಂ. ಮಾದಯ್ಯನವರು.—ಹಾಗೆ ಹೇಳುವುದಕ್ಕೆ ಇಲ್ಲಿ "Subject to the other provisions" ಎಂದು ಹೇಳಿಲ್ಲವಲ್ಲಾ !

ಅಧ್ಯಕ್ಷರು.—ಒಂದು ಪಂಚಾಯಿತಿ ಏರ್ಪಡಬೇಕಾದರೆ 3 (2)ನೆಯ ಸೆಕ್ಷನ್ ಪ್ರಕಾರ 2,000 ಜನ ಸಂಖ್ಯೆಯಷ್ಟಾದರೂ ಇರಲೇಬೇಕೆಂಬುದು ಅಗತ್ಯ.

Sri H. M. CHANNABASAPPA.—I think the Hon'ble Member is on the Select Committee. He can make all these suggestions when the Bill goes to the Select Committee.

Sri M. MADIAH.—You are speaking with regard to a village having a population exceeding 2,000. But I am referring to a village with lesser population and included in a group.

ಅಧ್ಯಕ್ಷರು.—"Village Panchayet under this Act" ಎನ್ನುವುದು ಯಾವುದು ? ಅದನ್ನು ನೋಡಿ. ಅಂಥ ಗ್ರಾಮದ ಜನ ಸಂಖ್ಯೆ ಎಷ್ಟಿರಬೇಕು ?

Sri H. M. CHANNABASAPPA.—Section 3 (2) requires a certain strength for any village to be constituted as a separate panchayet. It is only such villages that can be constituted as separate panchayets.

ಶ್ರೀ ಎಂ. ಮಾದಯ್ಯನವರು.—ಹೀಗೆಯೇ ಇನ್ನೂ ಅನೇಕ ವಿಚಾರಗಳಿವೆ. ಸೆಲೆಕ್ಟ್ ಸಮಿತಿಯಲ್ಲಿ ಅವನ್ನು ಹೇಳುತ್ತೇನೆ. ಒಟ್ಟಿನಲ್ಲಿ ಈ ಮಸೂದೆ ಸ್ವಾಗತಾರ್ಹವಾಗಿದೆ. ಆದರೂ ಕೊನೆಗೆ ಜಾರಿಗೆ ಕೊಡುವುದನ್ನು

(ಶ್ರೀ ಎಂ. ಮಾದಯ್ಯನವರು)

ಪ್ರತಿಯೊಂದು ಕ್ಲಾಜನ್ನೂ ಮತ್ತೊಮ್ಮೆ ಪರಿಶೀಲನೆ ಮಾಡಿ ಯಾರಿಗೂ ಅನನುಕೂಲವಾಗದಂತೆ ನೋಡಿ ಕೊಳ್ಳಬೇಕೆಂದು ಹೇಳುತ್ತೇನೆ.

Mr. SPEAKER.—The House will now adjourn for lunch and re-assemble at 4-20 P.M.

The Assembly adjourned for lunch at Fifty Minutes past Three of the clock and re-assembled at Twenty Minutes past Four of the Clock, Mr. Speaker (The Hon'ble Sri V. Venkatappa) in the Chair.

(*Quorum was formed at 4-25 p.m.*)

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಮಸೂದೆ ಸೆಲೆಕ್ಟ್ ಸಮಿತಿಗೆ ಹೋಗಿರುವುದರ ದೆಶೆಯಿಂದ ಹೆಚ್ಚು ಭಾಷಣವನ್ನು ಮಾಡದೇ ಆದೆ ಸಮಿತಿಯವರು ಕೆಲವು ವಿಚಾರಗಳನ್ನು ಸ್ವಲ್ಪ ಕೂಲಂಕಷವಾಗಿ ವಿಚಾರಮಾಡಬೇಕೆಂದು ಹೇಳುತ್ತೇನೆ. ಈಗ ಶ್ರೀಮಾನ್ ಮಾದಯ್ಯನವರು ಸೆಕ್ಷನ್ 7 ಅರ್ಥವಾಗುವುದಿಲ್ಲ ಎಂದು ಹೇಳಿದರು. ಸೆಕ್ಷನ್ 7 ಕ್ಲಾಸ್ (1), (2) ರಲ್ಲಿ ಎರಡು ವಿಧವಾಗಿ ಒಂದು ಗ್ರಾಮ ಬೇರೆ ಒಂದು ಗ್ರಾಮ ಪಂಚಾಯಿತಿಗೆ ಸೇರಲು ಅವಕಾಶ ಕೊಟ್ಟಿದೆ. ಇದರಲ್ಲಿ ಯಾವ ಅನುಮಾನಕ್ಕೂ ಆಸ್ಪದವಿಲ್ಲ.

ಅಧ್ಯಕ್ಷರು.—ಅವರು ಈಗ ಸಭೆಯಲ್ಲಿ ಇಲ್ಲ. ಅವರು ಹೇಳಿದ್ದಕ್ಕೆ ಏಕೆ ಉತ್ತರ ಕೊಡುವುದಕ್ಕೆ ಹೋಗುತ್ತೀರಿ!

ಶ್ರೀ ಎಸ್. ರಂಗರಾಮಯ್ಯನವರು.—ಸೆಕ್ಷನ್ 7 (1) (2)ರಲ್ಲಿ ಯಾವ ರೀತಿ ಗ್ರಾಮಗಳವರು ಒಂದು ಪಂಚಾಯಿತಿಯಿಂದ ಇನ್ನೊಂದು ಪಂಚಾಯಿತಿಗೆ ಜ್ಯೂರಿಸ್‌ಡಿಕ್ಷನ್ ಬದಲಾಯಿಸಿಕೊಳ್ಳಬಹುದು ಎಂಬುದನ್ನು ನಮೂದಿಸಿದೆ. ಅದರಲ್ಲೇನೂ ಅಷ್ಟು ಕಷ್ಟವಿಲ್ಲ. ಸೆಕ್ಷನ್ 8 ರಲ್ಲಿ ಓಟರುಗಳು ಯಾರು ಆಗಬಹುದು ಎಂಬುದನ್ನು ಹೇಳಿದ್ದಾರೆ; ಅದರ ಪ್ರಕಾರ ಗ್ರಾಮದಲ್ಲಿ ವಾಸವಾಗಿದ್ದು 21 ವರ್ಷಕ್ಕೆ ಮೇಲ್ಪಟ್ಟ ವಯಸ್ಸಾಗಿರತಕ್ಕವರು ಓಟರು ಆಗಬಹುದೆಂದು ಇದೆ. ಇದರಲ್ಲಿ ನಾನು ಅರಿಕೆ ಮಾಡಿಕೊಳ್ಳುವುದೇನೆಂದರೆ :

ಇದರಲ್ಲಿ,

> "Every person who is a resident of a village "and has completed twenty-one years of age, shall, unless disqualified be entitled to vote at an election of members of the Panchayet of that village."

ಎಂದು ಇದೆ. ಇದರಲ್ಲಿ ಸ್ವಲ್ಪ ಅಪಾರ್ಥಕ್ಕೆ ಕಾರಣ ಇದೆ. ಹೇಗೆಂದರೆ 8-10 ಜನ ಇರುವ ಒಂದು ಸಂಸಾರದಲ್ಲಿ ಒಬ್ಬನಿಗೆ 3-4 ಜನ ಮಕ್ಕಳಿದ್ದು, ಅವರು ವಿದ್ಯಾಭ್ಯಾಸಕ್ಕೆ ಹಳ್ಳಿ ಬಿಟ್ಟು ಹೊರಗೆ ಹೋಗಿ 10 ತಿಂಗಳು ಇರತಕ್ಕರೆ; ಎರಡು ತಿಂಗಳು ಮಾತ್ರ ಹಳ್ಳಿಯಲ್ಲಿ ಇರುತ್ತಾರೆ; 21 ವರ್ಷ ವಯಸ್ಸಾಗಿರುತ್ತದೆ; ಅಂಥವರು ಓಟರಾಗುವುದಕ್ಕೆ ಆ ಹಳ್ಳಿಯಲ್ಲಿ ವಾಸಮಾಡತಕ್ಕವರಲ್ಲ ಎಂದು ಹೇಳಬಹುದು. "Permanent resident" ಎಂದು ಅರ್ಥ ಮಾಡಿಕೊಂಡರೆ ಓಟರು ಆಗುವುದಕ್ಕೆ ಅವಕಾಶವಿದೆ. ಆದ್ದರಿಂದ ordinarily resident ಎಂದು ಅರ್ಥ ಮಾಡಿದರೆ ಈ ಗೊಂದಲಕ್ಕೆ ಅವಕಾಶವಿಲ್ಲದಾಗಾಗುತ್ತದೆ. ಇದನ್ನು ಸದಸ್ಯರು ಸೆಲೆಕ್ಟ್ ಸಮಿತಿಯಲ್ಲಿ ವಿಚಾರ ಮಾಡಬಹುದು. ಏನಾದರೂ ಕಾರಣಾಂತರಗಳಿಂದ ಪರಸ್ಥಳಕ್ಕೆ ಹೋಗಿದ್ದರೆ ಅಂಥವನನ್ನು ಆ ಸ್ಥಳದಲ್ಲಿ ವಾಸಮಾಡುತ್ತಿರಲಿಲ್ಲ ವಾದುದರಿಂದ ಓಟಿನ ಹಕ್ಕಿಲ್ಲವೆಂದು ಹೇಳಿಬಿಟ್ಟರೆ ಬಹಳ ತೊಂದರೆಯಾಗುತ್ತದೆ. ಅಲ್ಲದೆ ಓಟರುಗಳ ಪಟ್ಟಿಯನ್ನು scrutiny ಮಾಡುವವರು ಯಾರು? ಯಾರ ಹೆಸರಾದರೂ ಕೈಬಿಟ್ಟು ಹೋಗಿದ್ದರೆ ಅಥವ ಪಟ್ಟಿಯಲ್ಲಿ ಯಾರಾದರೂ ಅನರ್ಹರನ್ನು ಸೇರಿಸಿದ್ದರೆ ಅದನ್ನು ತೀರ್ಮಾನ ಮಾಡುವವರಾರು, ವಿಧಾನವೇನು ಎಂಬ ವಿಚಾರವನ್ನೇನೂ ಈ ಮಸೂದೆಯಲ್ಲಿ ನಮೂದಿಸಿಲ್ಲವಾದ ಕಾರಣ ಇದನ್ನೆಲ್ಲಾ ನಿಬಂಧನೆಗಳಲ್ಲಿ ಖಚಿತವಾಗಿ ಮಾಡಬೇಕಾಗುತ್ತದೆ.

11ನೆಯ ಸೆಕ್ಷನಿನಲ್ಲಿ Removal of members of Panchayet ಎಂಬುದರಲ್ಲಿ

> "The Commissioner may, on the recommendation of a Panchayet, remove any member elected under this Act."

ಎಂದು ಇದೆ. ಅಂದರೆ ಬಹುಮತ ಅಭಿಪ್ರಾಯದ ಮೇಲೆ ಎಂದರ್ಥವಾಗುತ್ತದೆ. ಹಳ್ಳಿಗಳಲ್ಲಿ ವಿಷಘಳಿಗೆ ಗಳೇ ಹೆಚ್ಚು. ಅಮೃತಘಳಿಗೆಗಳು ಬಹಳ ಅಪರೂಪ. ಏನಾದರೂ ಮನಸ್ತಾಪ ಅಥವ ವ್ಯಾಜ್ಯಗಳಿಂದ simple majority ಯಿಂದ ಒಬ್ಬನನ್ನು ತೆಗೆದುಹಾಕ ಬೇಕೆಂದು ಅಭಿಪ್ರಾಯಕೊಟ್ಟರೆ ಅವನನ್ನು ತೆಗೆದು ಹಾಕಲೇ ಬೇಕಾಗುತ್ತದೆ. ಇದರಿಂದ ಅಭಾಸಕ್ಕೆ ಕಾರಣವಾಗ ಹುದು. ಆದುದರಿಂದ ಮೂರನೆಯ ಎರಡುಭಾಗ ಸದಸ್ಯರ ಬಹುಮತಬೇಕೆಂದು ಮಾಡಿ ಇದನ್ನು ನಿರ್ದಿಷ್ಟವಾಗಿ ಹೇಳಿದರೆ ಒಳ್ಳೆಯದು.

ಅಧ್ಯಕ್ಷರು.—ಹಾಗೇನಾದರೂ ಆದರೆ ಆ ಮೇಲೆ ಪರಿಶೀಲನೆ ನಡೆಸುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಒಂದು ಪಂಚಾಯಿತಿಯಲ್ಲಿ 15 ಜನರಿದ್ದು ಅದರಲ್ಲಿ ಎಂಟು ಜನರು ತೆಗೆದುಹಾಕಬೇಕೆಂದು ಶಿಫಾರಸು ಮಾಡಿದರೆ ಇನ್ನೇಳು ಜನ ಆ ರೀತಿ ಅಭಿಪ್ರಾಯ ಪಡದೇಯಿದ್ದರೂ ಬಹುಮತದಂತೆ ಕ್ರಮತೆಗೆದು ಕೊಳ್ಳಲು ಅವಕಾಶವಾಗುತ್ತದೆ. ಅದಕಾರಣ ಮುಕ್ಕಾಲುಭಾಗ ಒಂದಭಿಪ್ರಾಯ ಕೊಡಬೇಕೆಂದು ಮಾಡಿದರೆ ಒಳ್ಳೆಯದು. ಏಕೆಂದರೆ, ಹಳ್ಳಿಯಲ್ಲಿ ಒಬ್ಬ ಬಲಿಷ್ಠನಾದ, ಗಣ್ಯನಾದ ಮನುಷ್ಯನಿಗೆ ಅವಮಾನವೇನಾದರೂ ಆದರೆ ಅದರಿಂದ ಏನು ಪರಿಣಾಮವಾಗುತ್ತದೆ ಎಂಬುದನ್ನು ಊಹಿಸಬಹುದೇ ಹೊರತು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಇದನ್ನು ಸ್ವಲ್ಪ ಬದಲಾವಣೆ ಮಾಡಬೇಕು.

ಇನ್ನು ಓಟರುಗಳ ಅರ್ಹತೆ ವಿಷಯದಲ್ಲಿ 'Every person who is a resident of a village ಎಂದಿದೆ. ಇದನ್ನು 'who is ordinarily residing' ಎಂದು ಮಾಡಿದರೆ ಉತ್ತಮವೆಂದು ಕಾಣುತ್ತದೆ.

Sri H. M. CHANNABASAPPA.—I would like to know what 'Ordinarily residing' means. ಓಟು ನಡೆಯುವುದಕ್ಕೆ ಎಷ್ಟು ತಿಂಗಳ ಮುಂಚೆಯಿಂದ ಅಲ್ಲಿ ವಾಸಮಾಡಬೇಕು ?

ಶ್ರೀ ಎಸ್. ರಂಗರಾಮಯ್ಯನವರು.—ಉದಾಹರಣೆಗೆ ನಮ್ಮ ಸ್ನೇಹಿತರಾದ ಶ್ರೀಮಾನ್ ಚನ್ನಬಸಪ್ಪನವರು

ಒಂದು ಹಳ್ಳಿಯವರು. ಆದರೆ ಅ..ರು ಸೇವೆ ಮಾಡು ತ್ತಿರುವುದು ಮೈಸೂರಿನಲ್ಲಿ...........

ಅಧ್ಯಕ್ಷರು. ಶ್ರೀಮಾನ್ ಗುಂಡಪ್ಪಗೌಡರು ಹೇಳಿದ ಹಾಗೆ ಆ ಹಳ್ಳಿಯಲ್ಲಿ ಕಂದಾಯಕೊಟ್ಟರೆ ಸಾಕು.

ಶ್ರೀ ಎಸ್. ರಂಗರಾಮಯ್ಯನವರು.—ಅದು ಡಿಸ್ಟ್ರಿಕ್ಟು ಬೋರ್ಡಿಗೆ. ನಾನು ಹೇಳುತ್ತಿರುವುದು ಗ್ರಾಮ ಪಂಚಾಯಿತಿಗೆ.

20 (1)ನೆಯ ಸೆಕ್ಷನಿನಲ್ಲಿ,

"Subject to such rules as may be made by Government in this behalf, every Panchayet shall employ such officers and servants and shall assign to them such pay, allowances etc.. etc."

ಎಂದಿದೆ. ಸೆಕ್ರೆಟರಿಯ ಅಧಿಕಾರ ಕರ್ತವ್ಯಗಳನ್ನು ಹೇಳುವಾಗ 22 (10)ನೆಯ ಸೆಕ್ಷನಿನಲ್ಲಿ,

"Subject to general control by the Chairman power to appoint officers and servants of the Panchayet and to fine, reduce, suspend or dismiss any of them."

ಈ ಎರಡಕ್ಕೂ ಸ್ವಲ್ಪ ಸಮನ್ವಯ ಮಾಡಿಕೊಳ್ಳಬೇಕಾಗಿದೆ. ನೌಕರರನ್ನು ನೇಮಕ ಮಾಡುವುದರಲ್ಲಿ the opinion of the Panchayet also has to be taken ಎಂದು ಮಾಡಬೇಕು. ಬರಿಯ ಚೇರ್ಮನ್ ಮತ್ತು ಸೆಕ್ರೆಟರಿ ಇಬ್ಬರೇ ಮಾಡುವುದಕ್ಕಿಂತ ಪಂಚಾಯಿತಿಯವರ ಅಭಿಪ್ರಾಯವನ್ನು ತೆಗೆದುಕೊಂಡು ಮಾಡುವುದು ಒಳ್ಳೆಯದು.

ಅಧ್ಯಕ್ಷರು.—ಹಾಗೆ ಮಾಡಿದರೆ ಪಂಚಾಯಿತಿಗೇ ಇಟ್ಟುಕೊಳ್ಳುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಇಬ್ಬರೇ ಹೀಗೆ ಮಾಡಿದರೆ ಪಂಚಾಯಿತಿಗಿಟ್ಟುಕೊಳ್ಳುತ್ತದೆಂದು ನಾನು ಹೇಳುವುದು.

22 (13) ರಲ್ಲಿ ಸೆಕ್ರೆಟರಿಗೆ,

"Power to file complaints on behalf of the Panchayets and to conduct proceedings on its behalf"

ಎಂದು ಈ ಅಧಿಕಾರ ಕೊಟ್ಟಿರುವುದೇನೋ ಸರಿ. ಆದರೆ ಇಂತಹ ಸಂದರ್ಭಗಳಲ್ಲಿ sanctioning authority ಯಾರು ಎಂಬುದನ್ನು ಸರಿಯಾಗಿ ಸ್ಪಷ್ಟಪಡಿಸಬೇಕು.

Sri H. M. CHANNABASAPPA.—The rules will provide under what circumstances the Secretary will have these powers.

ಶ್ರೀ ಎಸ್. ರಂಗರಾಮಯ್ಯನವರು.—ಈಗ filing of complaint, prosecute ಮಾಡುವುದು ಇದಕ್ಕೆಲ್ಲ who is the authority to vest that power? ಮೈಸೂರಿನಲ್ಲಿ ಈ ಅಧಿಕಾರವನ್ನು ಚೀಫ್ ಎಗ್ಸಿಕ್ಯೂಟಿವ್ ಆಫೀಸರಿಗೆ ಕೊಟ್ಟಿದ್ದಾರೆ.

Sri H. M CHANNABASAPPA.—He is the Chief Executive officer in the Panchayet.

ಶ್ರೀ ಎಸ್. ರಂಗರಾಮಯ್ಯನವರು.—ಈ ಕಾನೂನಿನಲ್ಲಿ ಇದನ್ನು ಕೊಟ್ಟಿಲ್ಲ. ಮುನಿಸಿಪಾಲಿಟಿಗಳಲ್ಲಿ ಚೀಫ್ ಎಗ್ಸಿಕ್ಯೂಟಿವ್ ಅಧಿಕಾರಿಗೆ ಕೊಟ್ಟಿರುವಂತೆ ಇಲ್ಲಿ ಸೆಕ್ರೆಟರಿ ಅಥವ ಚೇರ್ಮನ್‌ರಿಗೆ ಈ ಅಧಿಕಾರವಿರುವುದೆಂದು ಮಾಡಬೇಕು.

The hon'ble Sri R. CHENNIGA RAMIAH.—Without the consent of the panchayet he cannot do it.

Sri L. SIDDAPPA.—I think it means like that, because the power to file complaints on behalf of the Panchayet and conduct proceedings on its behalf means, unless the Panchayet sanctions, the Secretary cannot do it.

ಶ್ರೀ ಎಸ್. ರಂಗರಾಮಯ್ಯನವರು.—ಒಂದುವೇಳೆ withdraw ಮಾಡಬೇಕಾದರೆ ಯಾರು ಅನುಮತಿ ಕೊಡಬೇಕು? ಯಾರೋ ಒಬ್ಬ ಸೆಕ್ರೆಟರಿ ತನಗೆ ಇಷ್ಟಬಂದವರ ಮೇಲೆ ಈ ಕೂಡು ಕೇಸ್ನು ಹಾಕುವುದು ನಾಳೆ withdraw ಮಾಡುವುದು, ಹಾಗೆಲ್ಲಾ ಮಾಡಿ ತನ್ನ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳಲು ಅವಕಾಶವಾಗುತ್ತದೆ. ಆದಕಾರಣ ಇದನ್ನು ನಿರ್ದಿಷ್ಟ ಮಾಡಬೇಕಾಗಿದೆ.

ಇನ್ನು 23ನೆಯ ಸೆಕ್ಷನ್‌ನಲ್ಲಿ Obligatory functions of Panchayets ಇವೆ, 24 ನೆಯ ಸೆಕ್ಷನ್‌ನಲ್ಲಿ discretionary functions of Panchayet ಇವೆ. Obligatory functions ಎಂದರೆ, ಕೆಲವು ಕಾರ್ಯಗಳನ್ನು ಮಾಡಲೇಬೇಕು, ತಮ್ಮ ವಿವೇಚನೆಯನ್ನು ಪಯೋಗಿಸುವ ಹಾಗಿಲ್ಲ...... ....

The hon'ble Sri K. T. BHASHYAM.—You are in the Select Committee; you can tell all that there. There are four more Bills for to-day...........

ಶ್ರೀ ಎಸ್. ರಂಗರಾಮಯ್ಯನವರು.—ಯಾವುದು ಯಾವುದು discretionary ಎಂಬುದನ್ನು ಪಂಚಾಯಿತಿ ಮೆಂಬರುಗಳು ಕೂಲಂಕಷವಾಗಿ ಪರಿಶೀಲಿಸುವುದಕ್ಕೆ ಅಧಿಕಾರ ಕೊಡುವುದು ಒಳ್ಳೆಯದು. ಉದಾಹರಣೆಗೆ ಅಕ್ಸಿಸಿಷನ್. ಶಿಫಾರಸ್ಸು ಮಾಡುವುದು obligatory ಎಂದು ನಿರಕಮಾಡಬೇಕು.

ಇನ್ನು 39 (3)ನೆಯ ಸೆಕ್ಷನ್‌ನಲ್ಲಿ

"It shall be competent to the Secretary to make provision for exemptions in favour of individuals or a class of individuals subject to such rules as may be prescribed in this behalf"

ಎಂದು ಇದೆ. ಈ ರೀತಿಯ ಒಂದು ವಿನಾಯಿತಿ ಅಥವ ರಿಯಾಯಿತಿ ಕೊಡುವುದಕ್ಕೆ ಕೂಡ ಪಂಚಾಯಿತಿಯ ಅನುಮತಿಯಿಲ್ಲದೆ ಕೊಡಲು ಸೆಕ್ರೆಟರಿಗೆ ಅಧಿಕಾರವಿರಬಾರದು.

ಇನ್ನು 42ನೆಯ ಸೆಕ್ಷನ್‌ನಲ್ಲಿ pilgrim tax ಹಾಕುವ ಅಧಿಕಾರವಿದೆ. ಇದಕ್ಕೆ ನಾನು ಒಪ್ಪುವುದಿಲ್ಲ. ಹಳ್ಳಿಗಳಲ್ಲಿ ಇಂತಹ ತೆರಿಗೆಯನ್ನು ಹಾಕಬಾರದು. ಒಂದು ಹಳ್ಳಿಗೆ ಎಲ್ಲಿ ನಿಂದಲೋ ನಾನಾ ಭಾಗಗಳಿಂದ ಜನರು ಬಂದು ಮಾರಮ್ಮ, ಈಶ್ವರ, ನಾರಾಯಣ ಮುಂತಾದ ದೇವರುಗಳ ಪೂಜೆಗೆಂದು ಬರಬಹುದು. ಇಂತಹ ಸಂದರ್ಭಗಳಲ್ಲಿ ಹೀಗೆ ತೆರಿಗೆ ಹಾಕಿದರೆ ಅವರ ಭಕ್ತಿಯನ್ನು ಹಾಳುಮಾಡಿದ ಹಾಗಾಗುತ್ತದೆ. ಬಾಕಿ ಜಾತ್ರೆಗಳಿಗೆ, ಸಂತೆಗಳಿಗೆ ಹಾಕಬಹುದು, ಇದಕ್ಕೆ ಮಾತ್ರ ಹಾಕಬಾರದು.

The Hon'ble Sri R. CHENNIGARAMIAH.—It is again a discretionary power.

ಶ್ರೀ ಎಸ್. ರಂಗರಾಮಯ್ಯನವರು.—ಇದನ್ನೂ ತೆಗೆದು ಹಾಕಬೇಕು. ಹೀಗೊಂದು ಯಾತ್ರಾರ್ಥಿಗಳ ಮೇಲೆ ತೆರಿಗೆ ಹಾಕತಕ್ಕದ್ದು ಸಾಧುವಾದದ್ದಲ್ಲವೆಂದು ನಾನು ಸೂಚಿಸುತ್ತೇನೆ.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮೂರು ಕಾಸು ಕೊಡಬೇಕೆಂದರೆ ಏನನ್ನೇ ಬಿಟ್ಟು ಬಿಡುತ್ತಾರೆಯೇ ?

ಶ್ರೀ ಎಸ್. ರಂಗರಾಮಯ್ಯನವರು.—6ನೇ ಸೆಕ್ಷನ್ನಲ್ಲಿ ನಿಮ್ಮ ವರ್ಗದ ಸದಸ್ಯರು not less than 3 and not more than 5 ಎಂದು ಮಾಡಿದೆ. ಇದು ಹೆಚ್ಚು.

ಕೆಲವು ಕಡೆ ಹರಿಜನರ ಜನ ಸಾಂದ್ರತೆ ಹೆಚ್ಚಾಗಿರಬಹುದು ಅಥವಾ ಕೆಲವು ಕಡೆ ಕಮ್ಮಿಯಾಗಿರಬಹುದು. ಹಾಗೆ ಒಂದು ಕಡೆ ಎಲ್ಲಿ ಅವರ ಜನ ಸಾಂದ್ರತೆ ಕೇವಲ ಕಮ್ಮಿಯಾಗಿರುತ್ತದೋ ಅಂಥಾ ಪ್ರದೇಶದಲ್ಲಿ ಅವರಿಗೆ ಈ ಸೆಕ್ಷನ್ ರೀತ್ಯಾ, ಅಲ್ಲಿನ ಒಟ್ಟು ಸದಸ್ಯರ ಸಂಖ್ಯೆಯೇ ಕೇವಲ 11–15 ಇದ್ದಾಗ, ಈ ಹರಿಜನ ಪ್ರತಿನಿಧಿಗಳಿಗೇಕೆ 2 ಕ್ಕೆ ಕಮ್ಮಿಯಾಗಿರದೆ 5ಕ್ಕೆ ಹೆಚ್ಚಾಗಿರದೆ ಸ್ಥಾನಗಳನ್ನು ವಿಂಗಡಿಸಲಾಗಿಡಬೇಕೆಂದು ಹೇಳಿದರೆ ಅದು ಅಷ್ಟು ಸರಿಯಾಗಿದೆಯೆಂದು ಹೇಳುವುದಕ್ಕಾಗುವುದಿಲ್ಲ. ಇಷ್ಟೇ ಅಲ್ಲದೆ ಅವರಿಗೆ ಸಾಮಾನ್ಯ ಕ್ಷೇತ್ರಕ ಚುನಾವಣೆಗಳಲ್ಲಿ ನಿಂತು ಚುನಾಯಿತರಾಗಿ ಬರಲಿಕ್ಕೂ ಅವಕಾಶ ಕಲ್ಪಿಸಲಾಗಿದೆ. ಹೀಗಿರಲ್ಲಾ ಇರುವುದರಿಂದ ಇದನ್ನು ಮಿನಿಮಂ ಆಗಿ 2ಕ್ಕೆ ನಿಲ್ಲಿಸಿದರೆ ಸಾಕೆಂದೂ ಅದಕ್ಕೆ ಜಾಸ್ತಿ ಕೊಡುವುದಕ್ಕಾಗುವುದಿಲ್ಲವೆಂದೂ ನನ್ನ ಅಭಿಪ್ರಾಯ.

ಇನ್ನು ಜಿಲ್ಲಾ ಬೋರ್ಡುಗಳ ವಿಚಾರದಲ್ಲಿ 25 ಸಾವಿರಕ್ಕೆ ಒಬ್ಬ ಪ್ರತಿನಿಧಿ ಇರಬೇಕೆಂದು ತಿಳಿಸಲಾಗಿದೆ.

ಶ್ರೀ ಎಂ. ಮಾದಯ್ಯನವರು.—ಆಯಾಯ ಗ್ರಾಮದಲ್ಲಿರತಕ್ಕ ಹರಿಜನರ ಸಂಖ್ಯಾಗುಣಕ್ಕನುಸಾರವಾಗಿ ಕೊಡಿ. ಅದರಿಂದ ನಿಮಗೇನು ಬಾಧಕ ?

ಶ್ರೀ ಎಸ್. ರಂಗರಾಮಯ್ಯನವರು.—ಹಾಗೆ ಕೊಟ್ಟೇ ಕೊಡಬೇಕೆಂದು ಹೇಳುವುದರಲ್ಲಿ ಹಳ್ಳಿಗಳಲ್ಲಿರತಕ್ಕವರಲ್ಲಿ ಇರುವಂಥ ಒಂದು ಸೌಜನ್ಯ ಹೊರಟುಹೋಗುತ್ತದೆ. 5 ಜನರಲ್ಲಿದ್ದರೆ 8 ಜನ ಬೇಕಾದರೂ ಚುನಾವಣೆ ಆಗಬಹುದು. ಅದಕ್ಕೂ ಸುಮ್ಮನಿದ್ದೇವು. ಆದರೆ ' ಬೇಕೇ ಬೇಕು ' ಎಂದು ಕೇಳುವುದರಲ್ಲಿ ಅಷ್ಟು ಸೌಜನ್ಯ ವಿರುವುದಿಲ್ಲ.

ಇನ್ನು ಈ ಜಿಲ್ಲಾಬೋರ್ಡುಗಳ ಬಗ್ಗೆ ತಾವು 25 ಸಾವಿರಕ್ಕೆ ಒಬ್ಬ ಸದಸ್ಯರಿರಬೇಕೆಂದು ಹೇಳಿರುವುದು ಬಹಳ ಹೆಚ್ಚಾಯಿತೆಂಬು ನನ್ನ ಅಭಿಪ್ರಾಯ. ಕೆಲವು ಜಿಲ್ಲಾ ಬೋರ್ಡುಗಳಲ್ಲಿ ಈಗಾಗಲೇ ತೀರ್ಮಾನಮಾಡಿದ್ದಾರೆ. ಮೈಸೂರು ಜಿಲ್ಲಾಬೋರ್ಡಿನಲ್ಲಿ 4 ಜನ ಹರಿಜನ ಪ್ರತಿನಿಧಿಗಳಿದ್ದರೆ ಸಾಕೆಂದು ಹೇಳಿದ್ದಾರೆ. ಹೀಗೆ ಅವರಿಗೆ ಮೀಸಲಾಗಿಟ್ಟಿರುವುದರ ಜೊತೆಗೆ ಚುನಾವಣೆಗೆ ನಿಂತು ಬರಲಿಕ್ಕೂ ಅವಕಾಶ ಕಲ್ಪಿಸಲಾಗಿದೆ. ಈ ಎಲ್ಲಾ ಕಾರಣಗಳಿಂದ ಇವರಿಗೆ ಪಂಚಾಯಿತಿಗಳಲ್ಲಿ 2 ಸ್ಥಾನಗಳನ್ನು ಬೋರ್ಡಿನಲ್ಲಿ 4 ಸ್ಥಾನಗಳನ್ನೂ ಮೀಸಲಾಗಿಟ್ಟರೆ ಸಾಕೆಂದು ನಾನು ತಿಳಿಸುತ್ತೇನೆ.

ಶ್ರೀ ಎಂ. ಮಾದಯ್ಯನವರು.—ತತ್ವದ ದೃಷ್ಟಿಯಲ್ಲಿ ಹಿಂದುಳಿದ ಜನಾಂಗಕ್ಕೆ ಇನ್ನೂ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡಬೇಕೆಂದಿರುವಾಗ ನನ್ನ ಮಾನ್ಯ ಮಿತ್ರರು ಕಮ್ಮಿ ಇರತಕ್ಕದ್ದನ್ನೂ ಇನ್ನೂ ಕಮ್ಮಿ ಮಾಡಬೇಕೆಂದು ಹೇಳುವುದು ಯಾವನ್ಯಾಯ ?

ಶ್ರೀ ಎಸ್. ರಂಗರಾಮಯ್ಯನವರು.—ಅದು ತಮ್ಮ ಅಭಿಪ್ರಾಯ ವಿರಬಹುದು. ಏನೇ ಆಗಲಿ 4 ಜನರ ಮೇಲೆ ಇರತಕ್ಕದ್ದು ಅಷ್ಟು ಸೂಕ್ತವಲ್ಲ.

ಇನ್ನು ಆಯಾಯ ಗ್ರಾಮಪಂಚಾಯಿತಿಯ ಕಂದಾಯದಲ್ಲಿ ಸೇಕಡ $6\frac{1}{4}$ ರಂತೆ ಆಯಾಯ ಗ್ರಾಮಪಂಚಾಯಿತಿಗಳಿಗೂ ಮತ್ತು ಅದರಲ್ಲೇ 100ಕ್ಕೆ $6\frac{1}{4}$ ರ ಪ್ರಕಾರ ಆಯಾಯ ಜಿಲ್ಲಾ ಬೋರ್ಡುಗಳಿಗೆ ಒದಗಿಸಿ ಸೇಕಡ $12\frac{1}{2}$ ಯಷ್ಟನ್ನು ಸರ್ಕಾರದ ವಶ ಇಟ್ಟಿರಬೇಕೆಂದು ಈ ಮಸೂದೆಯಲ್ಲಿ ತಿಳಿಸಲಾಗಿದೆ. ಆದರೆ ಈಗಾಗಲೇ ಭೂಕಂದಾಯ ಪರಿಶೀಲನಾ ಸಮಿತಿಯೊಂದನ್ನು ಏರ್ಪಡಿಸಿ ಮಾಡಲಾಗಿತ್ತು. ಮತ್ತು ಆ ಸಮಿತಿಯವರ ಶಿಫಾರಸಿನಲ್ಲಿ ಈ ಜಮೀನು ಕಂದಾಯವನ್ನು ತೆಗೆದುಹಾಕಬೇಕೆಂದು ಸೂಚಿಸಿರತಕ್ಕ ಸಂದರ್ಭಗಳಿರುವಾಗ, ಮುಂದೆ ಅದು ತೀರ್ಮಾನ ಇನ್ನೂ ಹೇಗಾಗುತ್ತದೋ ಅದುಗೊತ್ತಿಲ್ಲ. ಆದರೆ ಆದಾಯಕ್ಕೆ ತಕ್ಕಹಾಗೇ ಖರ್ಚು ಇರಬೇಕಾದರೆ ಅದು ಸಾಧ್ಯವಾಗಲಾರದು. ಹೀಗೆ ತಾವು ಈ ಸಂಸ್ಥೆಗಳಿಗಾಗಿ ಜುಂಲಾ ಒಟ್ಟು ಅಂದರೆ ಉತ್ಪತ್ತಿಯ ಸೇಕಡ 25 ರಷ್ಟನ್ನು ಖರ್ಚುಗಳ ಬಗ್ಗೆ ಒದಗಿಸಿರತಕ್ಕದ್ದು ಸಾಕಾಗಲಾರದೆಂದು ಸೂಚಿಸುತ್ತೇನೆ. ಇದನ್ನು ಇನ್ನೂ ಹೆಚ್ಚು ಮಾಡಿ ಶೇಕಡಾ $12\frac{1}{2}$ ಯಷ್ಟನ್ನು ಸರ್ಕಾರದವರ ವಶದಲ್ಲಿಟ್ಟಿರಬೇಕೆಂಬುದನ್ನು ತೆಗೆದುಹಾಕಬೇಕೆಂದು ತಿಳಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri M. V. KRISHNAPPA (Kolar District—General).—Sir, I move for closure.

Mr. SPEAKER.—The question is.

"That the question be now put."

The motion was adopted.

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮಾನ್ಯ ಅಧ್ಯಕ್ಷರೇ, ಈ ಮಸೂದೆಯ ಮೇಲೆ ಭಾಷಣ ಮಾಡುತ್ತ ಮಾನ್ಯ ಸದಸ್ಯರುಗಳು ಬಹಳ ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಮೊದಲನೆಯದಾಗಿ ಶ್ರೀ ಲಿಂಗಾರೆಡ್ಡಿಯವರು ಒಂದಂಶವನ್ನು ತಿಳಿಸಿದ್ದಾರೆ ಜಿಲ್ಲಾ ಬೋರ್ಡುಗಳಿಗೂ ಮತ್ತು ಗ್ರಾಮ ಪಂಚಾಯಿತಿಗಳಿಗೂ ಈಗ ಒಂದು ಪ್ರತ್ಯೇಕವಾದ ಇಂಜನಿಯರಿಂಗ್ ಸಿಬ್ಬಂದಿಯಿಲ್ಲದೆ ಇರುವುದರಿಂದ ಅವರು ತಮ್ಮ ಕೆಲಸಕಾರ್ಯಗಳನ್ನು ಸೂಕ್ತವಾಗಿ ನೆರವೇರಿಸಲು ಸಾಧ್ಯವಾಗುತ್ತಿಲ್ಲ ಎಂದು. ಅವರು ತಿಳಿಸಿರತಕ್ಕ ಅಂಶ ನ್ಯಾಯವಾದದ್ದಾಗಿಯೇ ಇದೆ. ಇರತಕ್ಕದ್ದನ್ನು ಅವರು ತಿಳಿಸಿದ್ದಾರೆ. ಈ ಅಂಶವನ್ನೂ ಈ ಮಸೂದೆ ಸೆಲೆಕ್ಟ್ ಸಮಿತಿಯವರ ಮುಂದೆ ಹೋದಾಗ ಪರಿಶೀಲನೆ ಮಾಡಲಾಗುತ್ತೆ.

ಇನ್ನು ಶ್ರೀ ಎಚ್. ಬಿ. ಗುಂಡಪ್ಪಗೌಡರು ಕೆಲವು ಅಂಶಗಳನ್ನು ತಿಳಿಸುತ್ತ, ಈ ಗ್ರಾಮಪಂಚಾಯಿತಿಗಳಿಗೆ ಸಿವಿಲ್ ಮತ್ತು ಕ್ರಿಮಿನಲ್, ಬಗ್ಗೆ ಕೊಂಚ ಅಧಿಕಾರ ಕೊಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಆದರೆ ಅದರ ಬಗ್ಗೆ ಈ ಗಾಗಲೆ ಮಾನ್ಯ ಲಾ ಸಚಿವರು ಉತ್ತರವನ್ನು ಕೊಟ್ಟುಬಿಟ್ಟಿದ್ದಾರೆ. ಆದರೆ ಈಗ ಈ ಮಸೂದೆಯು ಸೆಲೆಕ್ಟ್ ಸಮಿತಿಯವರ ಪರಿಶೀಲನೆಗೆ ಹೋಗತಕ್ಕದ್ದಾಗಿರುವುದರಿಂದ ನಾನು ಇದರ ಬಗ್ಗೆ ಅಷ್ಟೇನು ಹೆಚ್ಚು ಹೇಳಲಿಕ್ಕೆ ಇಷ್ಟಪಡುವುದಿಲ್ಲ.

ಇನ್ನು ಹಣದ ವಿಚಾರದಲ್ಲಿ ಪ್ರಸ್ತಾಪಮಾಡುತ್ತ ಅನೇಕ ಮಾನ್ಯ ಸದಸ್ಯರು ಇದನ್ನು ಉಪಯೋಗಿಸತಕ್ಕ ಅಧಿಕಾರ ಉಳ್ಳವರು ಮತ್ತು ಹಾಗೆ ಉಪಯೋಗಿಸತಕ್ಕ ಹಣದ ಬಗ್ಗೆ ಕ್ಯಾಟರ್ ಸ್ಟೇಜ್ ಇತ್ಯಾದಿ ಮಾಡತಕ್ಕವರ ಬಗ್ಗೆ ಏನೇನು ನಿರ್ಬಂಧಗಳನ್ನು ವಿಧಿಸಬೇಕಾಗಿರುತ್ತೆಂಬುದನ್ನು ಸೂಚಿಸಿದ್ದಾರೆ. ಈ ಬಗ್ಗೆ ಸೆಲೆಕ್ಟ್ ಸಮಿತಿಯವರು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡುವಂತೆ ಸಮಿತಿಗೆ ಸೂಚನೆ ಮಾಡಲಾಗುತ್ತದೆ. ಅಲ್ಲದೆ ಇನ್ನೂ ಕೆಲವು ಮಾನ್ಯ ಸದಸ್ಯರು ಅನೇಕ ಅಂಶಗಳನ್ನು ತಿಳಿಸಿದ್ದಾರೆ.

ಆ ಪೈಕಿ ಗ್ರಾಮಪಂಚಾಯಿತಿಗಳಲ್ಲಿ ಹುಟ್ಟುವಳಿಯಾಗತಕ್ಕ ಕಂದಾಯದ ಹಣದಲ್ಲಿ ಸೇಕಡ 25 ರಷ್ಟನ್ನು ತೆಗೆದಿಟ್ಟು, ಆದರಲ್ಲಿ $6\frac{1}{4}$ ಭಾಗವನ್ನು ಜಿಲ್ಲಾ ಬೋರ್ಡುಗಳ ಉಪಯೋಗಕ್ಕೂ, $6\frac{1}{4}$ ಭಾಗವನ್ನು ಆಯಾಯ ಗ್ರಾಮಪಂಚಾಯಿತಿಗಳ ಉಪಯೋಗಕ್ಕೂ ಕೊಟ್ಟು ಉಳಿಯತಕ್ಕ $12\frac{1}{2}$ ಭಾಗವನ್ನು ಸರ್ಕಾರದವರು ತಮ್ಮ ವಶದಲ್ಲಿಟ್ಟುಕೊಂಡಿರಬೇಕೆಂದು ಈ ಮಸೂದೆಯಲ್ಲಿ ತಿಳಿಸಿದೆ. ಆದರೆ ಈ $12\frac{1}{2}$ ಭಾಗದ ಹಣವನ್ನೂ ಹಂಚಿಕೊಟ್ಟು ಬಿಡಬೇಕು ಎಂದು ತಿಳಿಸಿದ್ದಾರೆ. ಆದರೆ ಇದರ ಉದ್ದೇಶ್ಯ ಹೀಗಿದೆ—ಕೆಲವು ಪಂಚಾಯಿತಿಗಳಲ್ಲಿ ಹೆಚ್ಚು ಉತ್ಪತ್ತಿ ಬರಬಹುದು; ಇನ್ನು ಕೆಲವಕ್ಕೆ ಕಮ್ಮಿ ಉತ್ಪತ್ತಿ ಬರಬಹುದು. ಆದರೆ ಆ ತಾರತಮ್ಯವನ್ನು ಗಣನೆಗೆ ತೆಗೆದುಕೊಳ್ಳದೆ ಎರಡಕ್ಕೂ ಒಂದೇ ಸಮಾನ ದೃಷ್ಟಿಯಿಂದ ಅನುಕೂಲತೆಗಳನ್ನು ಕಲ್ಪಿಸತಕ್ಕದ್ದು ನ್ಯಾಯ. ಸರ್ಕಾರದವರು ತಮ್ಮ ವಶದಲ್ಲಿರಬೇಕೆಂದ ಮಾತ್ರಕ್ಕೇ, ಅದರ ಮೇಲೆ ತಮ್ಮ ಅಧಿಕಾರವಿರಬಾರದೆಂದು ಹೇಳತಕ್ಕದ್ದು ಅಷ್ಟು ಸರಿಯಾಗಿ ಕಾಣುತ್ತಿಲ್ಲ. ಆದರೆ ಈ ಅಂಶವನ್ನು ಸರ್ಕಾರದವರು ಬಹಳ ದೀರ್ಘಾಲೋಚನೆ ಮಾಡಿದ ನಂತರವೇ ಅದನ್ನು ಈ ಮಸೂದೆಯಲ್ಲಿ ಅಡಕ ಮಾಡಲಾಯಿತು. ಹೀಗೆ ಹಣವನ್ನು ಆಯಾಯ ಸಂಸ್ಥೆಗಳಿಗೆ ಎಷ್ಟೆಷ್ಟು ಕೊಡಬೇಕೆಂಬ ಅಂಶವನ್ನು ಪರಿಶೀಲನೆ ಮಾಡಿದ ಕಾಲದಲ್ಲಿ ಇಡೀ ಮೈಸೂರು ಸಂಸ್ಥಾನದಲ್ಲಿರತಕ್ಕ ಪ್ರತಿಯೊಂದು ಸಂಸ್ಥೆಯ ಹಿತದೃಷ್ಟಿಯನ್ನೂ ಮತ್ತೂ ಅದರ ಏಳಿಗೆಯನ್ನೂ ಗಮನದಲ್ಲಿಟ್ಟುಕೊಂಡು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಲು ಅವಕಾಶ ಕಲ್ಪಿಸಬೇಕೆಂಬ ಉದ್ದೇಶದಿಂದಲೇ ಇದನ್ನು ಅಡಕ ಮಾಡಿಸ್ಸಾಗಿದೆಯೇ ಶಿವಾಯಿ ಮತ್ಯಾವ ಕೆಟ್ಟ ಭಾವನೆಯಿಂದಲೂ ಮಾಡಿಲ್ಲ. ಕೆಲವು ಭಾಗದಲ್ಲಿ ಹೆಚ್ಚು ಹಣ ವಸೂಲಾಗಬಹುದು ಕೆಲವು ಭಾಗದಲ್ಲಿ ಕಮ್ಮಿ ಹಣ ವಸೂಲಾಗಬಹುದು. ಆದರೆ ಅದೇ ಪ್ರಮಾಣದಲ್ಲಿ ಅವರಿಗೆ ದೊರೆಯಬೇಕಾಗಿರುವ ಸೌಲಭ್ಯಗಳನ್ನೂ ಹೆಚ್ಚು ಕಮ್ಮಿ ಮಾಡುವುದಕ್ಕಾಗುವುದಿಲ್ಲ. ಪ್ರತಿಯೊಂದು ಭಾಗದಲ್ಲಿರತಕ್ಕವರಿಗೂ, ಮೈದಾನ, ಮಲೆನಾಡು ಎಂಬ ತಾರತಮ್ಯ ವಿರದೆ ಪ್ರತಿಯೊಬ್ಬರಿಗೂ ಅಗತ್ಯವಾಗಿ ಬೇಕಾಗಿರುವಂಥ ಸೌಕರ್ಯಗಳನ್ನು ಅಂದರೆ, ನಲ್ಲಿ ನೀರು, ಲೈಟ್, ಡ್ರೈನೇಜ್ ಇತ್ಯಾದಿಗಳನ್ನೆಲ್ಲಾ ಒದಗಿಸಬೇಕು. ಈ ಉದ್ದೇಶ ಸಾಧನೆಗಾಗಿಯೇ ಗ್ರಾಮ ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡ್ ಸಂಸ್ಥೆಗಳಿಗೆ ಪ್ರತಿಯೊಂದಕ್ಕೂ ಸೇಕಡ $6\frac{1}{4}$ ರಂತೆ ಆಯಾಯ ಗ್ರಾಮ ಪಂಚಾಯಿತಿಯ ಉತ್ಪತ್ತಿಯಲ್ಲಿ ಕೊಡಬೇಕೆಂದೂ, ಹಾಗೆ ಕೊಟ್ಟ ನಂತರ ಕೆಲ ಕೆಲವು ದೊಡ್ಡ ದೊಡ್ಡ ಯೋಜನೆಗಳನ್ನು ನಡೆಸಬೇಕಾಗಿ ಬಂದ ಸಂದರ್ಭದಲ್ಲಿ ಜಿಲ್ಲಾ ಬೋರ್ಡುಗಳಿಂದ ದೊರೆಯುವ ದ್ರವ್ಯಸಹಾಯ ಸಾಕಾಗುವುದಿಲ್ಲವೆಂಬ ಕಂಡುಬರುವ ಕಡೆ, ಅಂಥಾ ಕಡೆಗಳಲ್ಲಿ ಅಧಿಕ ಖರ್ಚನ್ನು ವಹಿಸತಕ್ಕ ಬಗ್ಗೆ ಈ $12\frac{1}{2}$ ಭಾಗ ಸರ್ಕಾರದವರ ಅಧಿಕಾರದಲ್ಲಿರಬೇಕೆಂದು ನಾವು ಸೂಚಿಸಿದ್ದೇವೆ. ಅಷ್ಟು ವಿನಃ ಮತ್ತೆ ಯಾವ ಉದ್ದೇಶದಿಂದಲೂ ಈ ಹಣವನ್ನು ನಮ್ಮ ಕೈಲಿಟ್ಟುಕೊಂಡಿರುವುದಿಲ್ಲ. ಸೇಕಡ 25 ರಷ್ಟು ಮೀಸಲಾಗಿಟ್ಟಿರತಕ್ಕ ಹಣವನ್ನೂ ಪೂರ್ತಿಯಾಗಿ ಖರ್ಚು ಮಾಡೇಮಾಡುತ್ತೇವೆ. ಈ ಜಿಲ್ಲಾ ಬೋರ್ಡುಗಳಿಗೆ ಈಗ ನಾವು ಒದಗಿಸಿರುವುದರ ಜೊತೆಗೆ ಅದಕ್ಕೆ ಸೆಸ್ ರೂಪದಲ್ಲಿ ಬೇರೆ ಹಣ ಉತ್ಪತ್ತಿಯಾಗುವ ಅವಕಾಶವಿದೆ. ಆದರೆ ಅರ್ಥಿಕ ಮುಗ್ಗಟ್ಟು ಎಲ್ಲಿ ಜಾಸ್ತಿಯಾಗಿ, ಹಣದ ಅಭಾವ ಅಥವ ಕೊರತೆಯೆಂದು ಬರುತ್ತದೋ, ಅಗ ಅಂಥ ಕಡೆ ಕೈಕೊಂಡಿರತಕ್ಕ ಕೆಲಸ ಕಾರ್ಯಗಳನ್ನು ಯಶಸ್ವಿಯಾಗಿ ನೆರವೇರುವಂತೆ ಮಾಡಲು ಈ $12\frac{1}{2}$ ಭಾಗದ ಹಣವನ್ನು ವಿನಿಯೋಗಿಸಲಾಗುತ್ತದೆ. ಈ ಬಗ್ಗೆ ನಾನು ತಮಗೆಲ್ಲಾ ಭರವಸೆ ನೀಡಬಲ್ಲೆ.

ಶ್ರೀ ಭೀಮಪ್ಪನಾಯಕರು ಭಾಷಣ ಮಾಡುತ್ತಾ ಕೆಲವು ಜಿಲ್ಲಾ ಬೋರ್ಡುಗಳಿಗೆ ಈಗ ತೊಂದರೆಯಾಗುತ್ತದೆ. ಪಂಚಾಯಿತಿಗಳಿಗೂ ಮತ್ತು ಜಿಲ್ಲಾ ಬೋರ್ಡುಗಳಿಗೂ ಬಹಳ ಓವರ್‌ಲ್ಯಾಪಿಂಗ್ ಅಧಿಕಾರವಿದೆ, ಅದರಿಂದ ಸುಸೂತ್ರವಾಗಿ ಆಡಳಿತ ನಡೆಯುವುದಕ್ಕೆ ಅನುಕೂಲವಾಗುವುದಿಲ್ಲ ಎಂದು ಹೇಳಿದರು. ಅದಕ್ಕೆ ಶ್ರೀ ಗುಂಡಪ್ಪಗೌಡರು ಉತ್ತರ ಹೇಳಿದ್ದಾರೆ. ಅಂಥ ಅವಕಾಶ ಇಲ್ಲ. ಈ ಸಭೆಯ ಮಾನ್ಯ ಅಧ್ಯಕ್ಷರೇ ಆ ಸಮಿತಿಗೂ ಅಧ್ಯಕ್ಷರಾಗಿದ್ದರು. ಅಲ್ಲದೆ ಜಿಲ್ಲಾಬೋರ್ಡ್ ಪ್ರೆಸಿಡೆಂಟರಾಗಿ ಬಹಳ ವರ್ಷದಿಂದ ಅನುಭವ ಪಡೆದಿದ್ದುದರಿಂದ ಅವರು ಪರಿಶೀಲಿಸಿ ಈ ವರದಿಯನ್ನು ಕೊಟ್ಟಿದ್ದಾರೆ. ಓವರ್ ಲ್ಯಾಂಪಿಂಗ್ ಇರುವುದನ್ನು ನಿಲ್ಲಿಸಬೇಕೆಂದು ಸಮಿತಿ ಮಾಡಿ ಅಲ್ಲಿ ಪರಿಶೀಲನೆಯಾದ ಮೇಲೆ ಈ ಮಸೂದೆಯನ್ನು ತಂದಿದೆ ಅದ್ದರಿಂದ ಅಂಥ ತೊಂದರೆಗೆ ಅವಕಾಶವಿಲ್ಲ. ಒಂದು ವೇಳೆ ಅಂಥ ಅನಾನುಕೂಲವೇನಾದರೂ ಇದ್ದರೆ ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲಿಸಿ ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡೋಣ.

ಆ ಮೇಲೆ ಇನ್‌ಡೈರೆಕ್ಟ್ ಚುನಾವಣೆ ವಿಚಾರವಾಗಿ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಆ ವಿಚಾರದಲ್ಲೂ ಆ ಸಮಿತಿಯಲ್ಲಿ ಸದಸ್ಯರು ಬಹಳ ದೀರ್ಘವಾಗಿಯೋಚನೆ ಮಾಡಿ ಅನೇಕ ಅನಾನುಕೂಲಗಳನ್ನು ಪರಿಶೀಲಿಸಿದ್ದಾರೆ. ಜಿಲ್ಲಾ ಬೋರ್ಡು ಮತ್ತು ಪಂಚಾಯಿತಿಗಳೆರಡಕ್ಕೂ ಎರಡು ಬೇರೆ ಬೇರೆ ಎಲೆಕ್ಷನ್ ಇದ್ದರೆ ಅವೆರಡಕ್ಕೂ ಯಾವ ತರಹ ಸಂಬಂಧವೂ ಇರುವುದಿಲ್ಲ. ಡಿಸ್ಟ್ರಿಕ್ಟ್ ಬೋರ್ಡು ಅಧಿಕಾರ ಚಲಾಯಿಸಿ ಪಂಚಾಯಿತಿಗೆ ಸಹಾಯ ಮಾಡುವಂತಿರುವುದಿಲ್ಲ. ಪಂಚಾಯಿತಿಗೆ ಇರುವ ಕುಂದುಕೊರತೆಗಳನ್ನು ಜಿಲ್ಲಾ ಬೋರ್ಡಿಗೆ ತಿಳಿಸಿ ಒಂದುವೇಳೆ ಹಣದ ಮುಗ್ಗಟ್ಟಿದ್ದರೆ ತಿಳಿಸಿ ಜಿಲ್ಲಾ ಬೋರ್ಡಿನಿಂದ ಸ್ವಲ್ಪ ಭಾಗ ಹಣವನ್ನು ಪಂಚಾಯಿತಿಯವರು ಕೇಳುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಸಂಬಂಧ ಕಲ್ಪನೆಯಾಗುತ್ತದೆ. ಆ ಉದ್ದೇಶದಿಂದ ಇನ್‌ಡೈರೆಕ್ಟ್ ಎಲೆಕ್ಷನ್ ಸಮಿತಿಯು ಶಿಫಾರಸು ಮಾಡಿದೆ. ಎರಡನೆಯದಾಗಿ, ಪಂಚಾಯಿತಿಗೆ ಮಾಡುವ ಹಾಗೆ ಜಿಲ್ಲಾ ಬೋರ್ಡಿಗೆ ಡೈರೆಕ್ಟ್ ಎಲೆಕ್ಷನ್ ಮಾಡುವುದು ಸ್ವಲ್ಪ ಕಷ್ಟ. ಪಂಚಾಯಿತಿಯಲ್ಲಿ ಮೊದಲಿನ ಹಾಗೆ ಪ್ರತಿಯೊಬ್ಬರೂ ಹಳ್ಳಿಗಳಲ್ಲಿರುವುದಿಲ್ಲ. ಅದರಿಂದ ಓಟರುಗಳು ಕಡಿಮೆಯಾಗಬಹುದು. ಚುನಾವಣೆಯು ಚೆನ್ನಾಗಿ ಆಗುವುದಿಲ್ಲ. ಆದ್ದರಿಂದ ಡೈರೆಕ್ಟ್ ಎಲೆಕ್ಷನ್ ಆಗಬೇಕೆಂದು ಅಭಿಪ್ರಾಯಪಟ್ಟಿದೆ. ಹಾಗೆ ಮಾಡುವುದರಿಂದ ಅಷ್ಟೇನೂ ಅನಾನುಕೂಲವಾಗಲಾರದು. ಅದು ಸರಿಯಾಗಿದೆಯೆಂದು ಅಧ್ಯಕ್ಷರೂ ಹೇಳಿದ್ದಾರೆ ಮತ್ತು ಸರ್ಕಾರದ ಅಭಿಪ್ರಾಯವೂ ಅದೇ ಆಗಿದೆ. ಒಂದು ವೇಳೆ ಸೆಲೆಕ್ಟ್ ಸಮಿತಿಯಲ್ಲಿ ಸದಸ್ಯರು ಅದು ಸರಿಯಿಲ್ಲವೆಂದು ಎಲ್ಲ ಅಂಶಗಳನ್ನೂ ಪರಿಶೀಲಿಸಿ ಅಭಿಪ್ರಾಯವನ್ನು ಬದಲಾವಣೆ ಮಾಡುವ ಪರಿಸ್ಥಿತಿ ಬಂದರೆ ಯೋಚನೆ ಮಾಡಲಾಗುತ್ತೆ.

ಶ್ರೀ ಸುಬ್ಬರಾಯ ಶೆಟ್ಟರು ಪಂಚಾಯಿತಿಗಿರುವ ಒಂದು ಸಮಿತಿಯನ್ನು ಪ್ರಸ್ತಾಪಿಸಿ ಎರಡು ಸಾವಿರದಿಂದ ಐದು ಸಾವಿರದವರೆಗೆ ಜನಸಂಖ್ಯೆಯಿದ್ದರೆ ಅವಕಾಶವಿಲ್ಲದಂತೆ ಮಾಡಬೇಕೆಂದು ಹೇಳಿದರು. ಇನ್ನು ಕೆಲವು ಕಡೆ 5 ಸಾವಿರದಿಂದ 7 ಸಾವಿರದವರೆಗೆ ಇರುವಂತೆ ಮಾಡ

(ಶ್ರೀ ಸುಬ್ಬರಾಯಶೆಟ್ಟರು.)

ಬೇಕೆಂದು ಹೇಳಿದರು. ಆದರೆ ಅದರಿಂದ ಅನೇಕ ಕಡೆ ತೊಂದರೆ. ಎರಡು ವಿಧವಾದ ಕಾನೂನು ಮಾಡಬೇಕೆಂದು ಅವರು ಹೇಳುತ್ತಾರೆ. ಮಲೆನಾಡು ಪ್ರಾಂತ್ಯಗಳಲ್ಲಿ ಕಡಮೆ ಜನಸಂಖ್ಯೆಯಿರುವ ಹಳ್ಳಿಗಳಿವೆ. ಅಂಥಾದ್ದಕ್ಕೇ ಒಂದು ರೀತಿಯ ಕಾನೂನು ಮೈದಾನ ಪ್ರಾಂತಗಳಲ್ಲಿ ಹೆಚ್ಚು ಜನಸಂಖ್ಯೆಯಿರುವ ಕಡೆಗೇ ಬೇರೆ ಕಾನೂನು ಮಾಡಿದರೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ಆದರೆ ಇದೆಲ್ಲವನ್ನೂ ಯೋಚನೆ ಮಾಡಿ ಎರಡಕ್ಕೂ ಅನ್ವಯಿಸುವ ರೀತ್ಯಾ 2 ಸಾವಿರ, 5 ಸಾವಿರ ಮಿತಿಯಿಟ್ಟು ಕಾನೂನು ಮಾಡಿದೆ. ಮೈದಾನಕ್ಕೆ 5 ಸಾವಿರ, ಮಲೆನಾಡಿಗೆ 2 ಸಾವಿರ ಮಾಡಬಹುದು. ಜನರಿಗೂ ಸುಲಭ. ಸ್ವಲ್ಪ ಕಡಮೆ ಜನಸಂಖ್ಯೆಯಿದ್ದರೂ ಒಂದು ಪಂಚಾಯಿತಿ ಮಾಡಿ ಎಲ್ಲಾ ಅನುಕೂಲಗಳನ್ನು ಒದಗಿಸುವುದಕ್ಕಾಗಿಯೇ ಈ ರೀತಿ ಮಾಡಿರುವುದು. ಆದ್ದರಿಂದ 5 ಸಾವಿರದಿಂದ 7 ಸಾವಿರದ ವರೆಗೆಂದು ಮಾಡುವುದು ಸೂಕ್ತವಲ್ಲವೆಂದು ಕಾಣುತ್ತದೆ.

ಶ್ರೀ ಎಂ. ಮಾದಯ್ಯನವರು ಕೆಲವು ಅಂಶ ಹೇಳಿದರು. ಇನ್‌ಡೈರೆಕ್ಟ್ ಎಲೆಕ್ಷನ್ ವಿಚಾರದಲ್ಲಿ ಅವರು ಪ್ರತಿಭಟಿಸಿದರು. ಅದು ಚೆನ್ನಾಗಿಲ್ಲ, ಡೈರೆಕ್ಟ್ ಎಲೆಕ್ಷನ್ ಮಾಡಬೇಕೆಂದು ವಾದಿಸಿದರು. ಆದರೆ ಎಲ್ಲರಿಗಿಂತಲೂ ಹೆಚ್ಚಾಗಿ ಶ್ರೀ ಮಾದಯ್ಯನವರು ಆ ರೀತಿ ಹೇಳಿರುವುದು ಆಶ್ಚರ್ಯಕರವಾಗಿದೆ. ಡೈರೆಕ್ಟ್ ಎಲೆಕ್ಷನ್ ಜಿಲ್ಲಾ ಬೋರ್ಡು ಮತ್ತು ಪಂಚಾಯಿತಿಗಳಿಗೆ ಮಾಡಿದರೆ ನಿಮ್ಮ ವರ್ಗದವರಿಗೇ ಹೆಚ್ಚು ಅನಾನುಕೂಲ. ಸಾಮಾನ್ಯವಾಗಿ ಸ್ವಲ್ಪ ಅನುಕೂಲಸ್ಥರಿಗೆ ಮಾತ್ರ ಅದು ಅನುಕೂಲ. ಅವರು ಡೈರೆಕ್ಟ್ ಎಲೆಕ್ಷನ್ ಮೂಲಕ 2 ಅಥವ 3 ಸಾರಿ ಚುನಾಯಿತರಾಗಿ ಬರಬಹುದು. ಆದ್ದರಿಂದ ನಿಮ್ಮ ವರ್ಗದವರ ದೃಷ್ಟಿಯಿಂದ ನೋಡಿದರೆ ಈ ರೀತಿ ಇನ್‌ಡೈರೆಕ್ಟ್ ಎಲೆಕ್ಷನ್ ಇರುವುದೇ ಅನುಕೂಲ. ಆದ್ದರಿಂದ ನಾನಾ ಕಾರಣಗಳಿಂದ ಈ ಸಂದರ್ಭದಲ್ಲಿ ಇನ್‌ಡೈರೆಕ್ಟ್ ಎಲೆಕ್ಷನ್ ಇರುವುದೇ ಅನುಕೂಲವೆಂಬ ಅಭಿಪ್ರಾಯವಿದೆ. ಅಲ್ಲದೆ ನಿಮ್ಮ ವರ್ಗದವರಿಗೆ ಇದರಿಂದ ಯಾವ ತರಹ ತೊಂದರೆಯೂ ಇಲ್ಲ ಎಂದು ಭರವಸೆ ಕೊಡಬಹುದು. ನಿಮ್ಮ ವರ್ಗದವರಿಗೆ ಸ್ಥಾನಗಳನ್ನು ಮೀಸಲಾಗಿಡುವ ವಿಚಾರದಲ್ಲಿ ಅನುಮಾನಪಟ್ಟಿದ್ದಾರೆ. ಆದರೆ ಸರ್ಕಾರದವರು ಅದನ್ನೆಲ್ಲಾ ನೋಡಿ ರಾಜ್ಯಾಂಗದ ಪ್ರಕಾರ ಶೇಕಡ ಇಷ್ಟು ಪ್ರಾತಿನಿಧ್ಯ ಕೊಡಬೇಕೆಂದು ಉದಾರವಾಗಿ ಕೊಡುವುದರಲ್ಲಿ ಯಾವ ಸಂದೇಹವೂ ಇಲ್ಲ. ಆ ವಿಚಾರವಲ್ಲಿ ಯಾವ ತೊಂದರೆಯೂ ಆಗುವುದಿಲ್ಲ ಮತ್ತು ಪ್ರಾತಿನಿಧ್ಯವೂ ಕಡಮೆಯಾಗುವುದಿಲ್ಲ ಎಂದು ಭರವಸೆ ಕೊಡಬಲ್ಲೆ.

ಶ್ರೀ ರಂಗರಾಮಯ್ಯನವರು ರೆಸಿಡೆನ್‌ಷಿಯಲ್ ಕ್ವಾಲಿಫಿಕೇಷನ್ ವಿಚಾರದಲ್ಲಿ ಒಂದು ಅಂಶ ಹೇಳಿದ್ದಾರೆ. ಯಾರಾದರೂ ಒಬ್ಬ ವಿದ್ಯಾರ್ಥಿಯು ಪರಸ್ಥಳದಲ್ಲಿ ವ್ಯಾಸಂಗ ಮಾಡುತ್ತಿದ್ದರೆ ಆತನು ಓಟರುಗಳ ಪಟ್ಟಿಯಲ್ಲಿ ಸೇರುವುದಿಲ್ಲ, ರಜಾ ಕಾಲದಲ್ಲಿ ಊರಿಗೆ ಹೋಗುವುದರಿಂದ ಅವನಿಗೆ ಎಲ್ಲೂ ಅವಕಾಶವಿರುವುದಿಲ್ಲ ಎಂದು ಸೂಚಿಸಿದ್ದಾರೆ. ಆದರೆ ಸಮಿತಿಯವರು ಬಹುಮಟ್ಟಿಗೆ ಎಲ್ಲವನ್ನೂ ತಿಳಿದು ಪರೀಕ್ಷೆ ಮಾಡಿ ಓಟರಾಗಬೇಕಾದರೆ ಸದಾ ಕಾಲದಲ್ಲೂ ಕಷ್ಟಸುಖಗಳಲ್ಲಿ ಭಾಗಿಯಾಗಿ ತೊಂದರೆಯನ್ನು ಅರಿತು ನುರಿತು ಹಳ್ಳಿಯಲ್ಲಿ ವಾಸವಾಗಿರುವವರೇ ಓಟರಾಗಿರಬೇಕೆಂಬ ದೃಷ್ಟಿಯಿಂದ ಹೀಗೆ ಮಾಡಿರಬೇಕು. ಅಂಥ ಸಂದರ್ಭಗಳು ಶೇಕಡ ಒಂದರಂತೆ ಬರಬಹುದು. ಆದ್ದರಿಂದ ಈಗಿರುವುದನ್ನು ಬದಲಾಯಿಸಿದರೆ ಅನುಕೂಲವೂ ಸ್ವಲ್ಪ ಆಗಬಹುದು ಮತ್ತು ಕೆಲವು ತೊಂದರೆಗಳೂ ಆಗಬಹುದು.

ಆ ಅಂಶವನ್ನು ಬೇಕಾದರೆ ಅವರೇ ಸೆಲೆಕ್ಟ್ ಸಮಿತಿಯಲ್ಲಿರುವುದರಿಂದ ಪರಿಶೀಲಿಸುವುದಕ್ಕೆ ಅವಕಾಶವಿದೆ.

ಇನ್ನು ಸದಸ್ಯರನ್ನು ತೆಗೆದುಹಾಕುವ ವಿಚಾರವನ್ನು 11ನೆಯ ಸೆಕ್ಷನ್‌ನಲ್ಲಿ ಹೇಳಿದ್ದಾರೆ. ಆ ಅಂಶವನ್ನೂ ಸೆಲೆಕ್ಟ್ ಸಮಿತಿಯಲ್ಲಿ ಯೋಚಿಸಬಹುದು. ಪಂಚಾಯಿತಿಯು ಶಿಫಾರಸು ಮಾಡಿದರೆ ಮಾಡಬಹುದೆಂದು ಕಮಿಷನರಿಗೆ ಅಧಿಕಾರವಿದೆ. ಹೆಚ್ಚು ಮಂದಿ ನಿರ್ಣಯವನ್ನು ಮಾಡಬೇಕೆಂದು ಹೇಳಿದೆ. ಅದಕ್ಕೆ ಯೋಚನೆ ಮಾಡಿ ಎಷ್ಟು ಮಂದಿ ನಿರ್ಣಯ ಮಾಡಬೇಕೆಂಬುದಕ್ಕೆ ಸಲಹೆ ಕೊಡುವುದಕ್ಕೆ ಅವಕಾಶವಿದೆ.

ಈ ರೀತಿಯಾಗಿ ಅನೇಕ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ. ಮುಖ್ಯವಾಗಿ ಈ ಮಸೂದೆಯ ವಿಚಾರದಲ್ಲಿ ಭಾಷಣ ಮಾಡಿರುವ ಎಲ್ಲಾ ಸದಸ್ಯರೂ ಬಹಳ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಇದೆಲ್ಲಾ ಸೆಲೆಕ್ಟ್ ಸಮಿತಿಯಲ್ಲಿ ಪರಿಶೀಲನೆಗೆ ಬರುತ್ತದೆ. ಅಲ್ಲಿ ತೀರ್ಮಾನವಾಗಿ ಮುಂದಿನ ಬಡ್ಜೆಟ್ ಅಧಿವೇಶನದ ವೇಳೆಗೆ ಮರಳಿ ಬರಬೇಕೆಂದು ನಿನ್ನೆ ನಾನು ಮಸೂದೆಯನ್ನು ಮಂಡಿಸಿದಾಗ ಹೇಳಲಿಲ್ಲವೆಂದು ಕಾಣುತ್ತದೆ. ಆ ಸಮಿತಿಯ ಸದಸ್ಯರು ಆದಷ್ಟು ಬೇಗ ವರದಿಯನ್ನು ಕಳುಹಿಸಬೇಕು, ಮುಂದಿನ ಅಧಿವೇಶನದ ವೇಳೆಗೆ ಅದು ಬರಬೇಕು ಎಂಬ ಇಷ್ಟವಿದೆ.

ಇನ್ನು ಕೆಲವು ಸದಸ್ಯರು ಗ್ರಾಮಪಂಚಾಯಿತಿ ಮತ್ತು ಡಿಸ್ಟ್ರಿಕ್ಟ್ ಬೋರ್ಡ್‌ಗಳ ಮಸೂದೆಯನ್ನು ಪರಿಶೀಲಿಸತಕ್ಕ ಸೆಲೆಕ್ಟ್ ಕಮಿಟಿಗೆ ಇನ್ನಿಬ್ಬರು ಸದಸ್ಯರನ್ನು ಸೇರಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಅದರಂತೆ ಮಾನ್ಯ ಅಧ್ಯಕ್ಷರ ಅನುಮತಿ ಪಡೆದು ಇಬ್ಬರು ಸದಸ್ಯರ ಹೆಸರನ್ನು ಹೇಳುತ್ತೇನೆ. ಈಗಿರುವ ಹೆಸರುಗಳ ಜೊತೆಗೆ ಶ್ರೀಯುತರಾದ ಕೆ. ಆರ್. ಮಾಧವರಾಯರು ಮತ್ತು ಸುಬ್ಬರಾಯಶೆಟ್ಟರ ಹೆಸರುಗಳನ್ನೂ ಸೇರಿಸಿಕೊಳ್ಳತಕ್ಕದ್ದು.

ಇದೇ ಸಂದರ್ಭದಲ್ಲಿ ಮಾನ್ಯ ಅಧ್ಯಕ್ಷರ ಅನುಮತಿ ಪಡೆದು ಮತ್ತೊಂದು ವಿಚಾರವನ್ನು ಹೇಳುತ್ತೇನೆ. ನೆನ್ನೆಯ ದಿನ ಟೌನ್ ಮುನಿಸಿಪಾಲಿಟಿಗಳ ಮಸೂದೆಯನ್ನು ಮಂಡಿಸುವಾಗ ಅದನ್ನು ಸೆಲೆಕ್ಟ್ ಕಮಿಟಿ ಪರಿಶೀಲನೆಗೆ ವಹಿಸಿದಾಗ, ಅದನ್ನು ಮುಂದಿನ ಅಧಿವೇಶನದಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಗುವುದೆಂಬ ವಿಷಯವನ್ನು ಹೇಳಲಿಲ್ಲವೆಂದು ಕೆಲವರು ಹೇಳಿದರು. ಅದನ್ನು ಈಗ ಖಚಿತವಾಗಿ ಹೇಳುತ್ತೇನೆ. ಆ ಮಸೂದೆಯನ್ನು ಈ ಸಭೆಯ ಮುಂದಿನ ಅಧಿವೇಶನದಲ್ಲಿ ತರುತ್ತೇವೆ.

Mr. SPEAKER.—The question is :

"That the Mysore Village Panchayets and District Boards Bill, 1951, be referred to a Select Committee consisting of :

Rajamantrapravina H. B Gundappa Gowda
Sri H. M. Channabasappa,
Sri H. K. Veeranna Gowda,
Sri S. Rangaramiah,
Sri H. C. Linga Reddy,
Sri M. Govinda Reddy,
Sri M. Madiah,
Lokasevanirotha M. Hanumanthaiya,
Sri Mudduramiah,
Sri B. Hutche Gowda,
Sri B. N. Boranna Gowda,
Sri Channabyre Gowda,
Sri Mali Mariyappa,
Sri K. R. Madhava Rao,
Sri Subbaraya Setty, instructions to with report to the Budget Session of the Assembly."

The motion was adopted

The Mysore Debt Conciliation (Amendment) Bill, 1951.

Motion to consider.

The Hon'ble Sri K. T. BHASHYAM.—(Minister for Law and Labour).—Sir, I beg to move:

> "That the Mysore Debt Conciliation (Amendment) Bill, 1951, as reported by the Select Committee be taken into consideration."

In so doing I request you, Sir, that you may be pleased to suspend S. O. 37 and permit the report to be taken into consideration.

Sir, the recommendations under this Report may be divided into six parts. The first is: Hon'ble Members will find that according to the Amending Bill as placed originally before this House we had suggested that the defendant in order to get the benefit of the stay in the civil suit should file his application before the court within one month of the date of the service of summons. But the Select Committee felt that one month may be too short a period and it should be extended. So the first part of the recommendation is that the defendant in any suit may within three months of the date of the service of summons file an application before the court and get the benefit of the stay in the suit. That is the first part.

The second part is, we have said 'three months after the date of the service of summons'. Supposing in a pending suit the service of summons has been effected on the defendant and more than three months have lapsed and the suit is pending. What should be done? So we say in the second part "within three months from the date of commencement of the Mysore Debt Conciliation Amendment Act, 1951" *i.e.*, after this Act is passed any defendant in a suit to whom the service of summons has been effected before three months prior to the passing of this Act may within three months after the passing of this Act, apply to the court and get stay of the suit.

And then, it may so happen that a suit may be filed later than three months after the passing of the Act and what should the defendant do? So the wording is within 'three months after the passing of the Act' or 'within three months after the date of service of summons whichever is later'. That is the third part of our recommendations.

Fourth, we must take note of suits in which execution proceedings are yet to commence. We have got to provide for such cases. So we say, that such judgment debtors may within three months after the commencement of this Act file an application before the court, and get execution stayed and get conciliation effected. That also is provided for and that is the fourth part of the recommendation.

Then another question arises, Sir. After the service of summons, a man may remain *ex-parte* and may know nothing about the suit against whom there may be an *ex-parte* decree and he files an application against the *ex-parte* decree. What is the position of such a man? We have provided for that contingency. You will therefore find an explanation 'A defendant shall be deemed to have been served with summons on the date on which he files an application to set aside an *ex-parte* decree.' That is the fifth part of the recommendation.

Again, it may so happen that in a suit, attachment before judgment has been ordered and notice of such an order is served upon the defendant and the defendant appears in the suit and either contests it or submits to it. Such a contingency is provided for in explanation (2) (ii) 'on the date on which he takes notice of suit and enters appearance'.

So, Sir, all aspects of the situation have been considered and provided for. This report is unanimous except for Janab Mohamed Imam who was absent at the meeting. The rest of the Members have all agreed unanimously to these recommendations. I commend this Bill for the consideration and acceptance of this House.

Mr. SPEAKER.—Motion moved:

> "That the Mysore Debt Conciliation (Amendment) Bill, 1951, as reported by the Select Committee, be taken into consideration."

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು—ಜಿಲ್ಲೆ).—ಸ್ವಾಮಿ, ನಾನೇನೂ ಇದರ ವಿಚಾರದಲ್ಲಿ ದೀರ್ಘಭಾಷಣ ಮಾಡುವುದಿಲ್ಲ. ಈ ಡೆಟ್ ಕನ್ಸಿಲ

(ಶ್ರೀ ಎಸ್. ರಂಗರಾಮಯ್ಯನವರು.)

ಯೋಪರ್ಜ ಮಸೂದೆ ಮತ್ತು ಕೋರ್ಟ್ ಫೀ ಮಸೂದೆಗಳ ವಿಚಾರದಲ್ಲಿ ಸೆಲೆಕ್ಟ್ ಕಮಿಟಿಯವರು ತಿಳಿಸಿದ ವಿಚಾರಗಳನ್ನೆಲ್ಲಾ ಸೆಲೆಕ್ಟ್ ಕಮಿಟಿಯ ಅಧ್ಯಕ್ಷರು ಸಾವಧಾನದಿಂದ ಪರಿಶೀಲಿಸಿ ಎಲ್ಲರಿಗೂ ಅನುಕೂಲವಾಗುವಹಾಗೆ ಅಂಗೀಕಾರ ಮಾಡಿದ್ದಕ್ಕಾಗಿ ಅವರಿಗೆ ವಂದನೆಗಳನ್ನು ಸಲ್ಲಿಸಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

Mr. SPEAKER.—The question is :

"That the Mysore Debt Conciliation (Amendment) Bill, 1951, as reported by the Select Committee, be taken into consideration."

The motion was adopted.

Mr. SPEAKER.—The clauses of the Bill will now be submitted to the House. Clause 2. The question is :

"That clause 2 stand part of the Bill."

The motion was adopted.

Clause 2 was added to the Bill.

Mr. SPEAKER.—Clause 1. The question is.

"That clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is.

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri K. T. BHASHYAM.—Sir, I beg to move :

"That the Mysore Debt Conciliation (Amendment) Bill, 1951, as reported by the Select Committee be passed."

Mr. SPEAKER.—The question is :

"That the Mysore Debt Conciliation (Amendment) Bill, 1951, as reported by the Select Committee be passed."

The motion was adopted.

Mysore Payment of Salaries and Allowances to Members of the Legislative Assembly Bill, 1951.

Motion to consider.

The Hon'ble Sri K. T. BHASHYAM (Minister for Law and Labour).—Sir, I beg to move :

"That the Payment of Salaries and Allowances to Members of the Legislative Assembly, Bill, 1951, be taken into consideration."

In so doing, I beg to invite the attention of Hon'ble Members of this House to article 195 of the Constitution Act.

"195. The Members of the Legislative Assembly and the Legislative Council of a State shall be entitled to receive such salaries and allowances as may from time to time be determined by the Legislature of the State by law."

We propose under this Bill to fix the salary of the Legislative Assembly Members at Rs. 100 per month and Daily Allowance at Rs. 15 per day of sitting and travelling allowance as mentioned in this Bill at double first-class fare and so on.

Sir, I beg to bring to the attention of the Hon'ble Members a comparative statement so that we may know the figures elsewhere.

		Rs.
Bihar	...	200
Uttar Pradesh	...	200
West Bengal	...	200
Assam	...	150
Orissa	...	150
Bombay	...	150
Madhya Pradesh	...	150
Punjab	...	300
Travancore	..	120
Madras	...	150

So, Hon'ble Members will find that after all, we have erred on the side of absolute moderation in fixing the salary at Rs. 100 per month. As regards Daily Allowance you will find that in West Bengal they pay Rs. 15 per day. In Bihar, U.P. Orissa and Bombay, they pay Rs. 10. In the Punjab they pay Rs. 20 and Members are allowed to draw either salary or Daily Allowance. In Travancore-Cochin they draw Rs. 15 by way of daily allowance but members have the option to accept the daily allowance of Rs. 15 or consolidated allowance of Rs. 120 per mensem. In Madras the daily allowance fixed is Rs. 15 and Rs. 20 in the case of

members who have relinquished their salaries. So in this matter of Rs. 15 as daily allowance we are in company with some of the States in India and just a little in advance of some other States. So far as travelling allowance is concerned we have fixed at double first class fare. In Bihar they give $1\frac{1}{2}$ first class fare and in most other States $1\frac{1}{2}$ first class fare. In Madhya Pradesh 1 3/4 first class fare is given and so also in Madras 1 3/4 first class fare is given to members who receive actual daily allowance and who do not receive salaries. I learn that in Parliament they allow one and three-fifth's fare to the members. Our salaries and allowances compare favourably with those of other States and if anything, we are on the side of moderation. We should have brought forward this Bill much earlier. For obvious reasons we could not do so.

Sri S. RANGARAMIAH (Mysore District-General).—ಅಲ್ಲೆಲ್ಲಾ ಯಾವ ಕಾಲದಿಂದ ಜಾರಿಯಲ್ಲಿದೆ.

The Hon'ble Sri K. T. BHASHYAM.—From 26th January 1950. We wanted to bring it much earlier but owing to circumstances beyond our control we could not do so. Now we have brought this and I hope the Hon'ble Members will give their acceptance to it. I move that this Bill be taken into consideration.

Mr. SPEAKER.—Motion moved:

"That the Mysore Payment of Salaries and Allowances to Members of the Legislative Assembly Bill, 1951, be taken into consideration.

ಶ್ರೀ ಎಲ್. ಸಿದ್ಧಪ್ಪನವರು (ಶಿವಮೊಗ್ಗಾ ಜಿಲ್ಲೆ).—ಅಧ್ಯಕ್ಷರೇ, ಸ್ವಾಮಿ, ಈಗ ಸಭೆಯ ಮುಂದೆ ನ್ಯಾಯಾಂಗ ಸಚಿವರು ಮಂಡಿಸಿರತಕ್ಕ ಈ ಮಸೂದಾ ಕಾನೂನನ್ನು ನಾನು ವಿರೋಧಿಸಬೇಕಾಗಿದೆ. ಸ್ವಾಮಿ, ಈ ಮಸೂದಾ ಕಾನೂನನ್ನು ಈ ಸಭೆಯ ಮುಂದೆ ಇಡುವಾಗ ಇಂಡಿಯನ್ ಕಾನ್‌ಸ್ಟಿಟ್ಯೂಷನ್ ಆರ್ಟಿಕಲ್ 195 ರ ಪ್ರಕಾರ ಈ ರೀತಿ ಮಾಡಲೇಬೇಕಾಗಿದೆ, ಆದ್ದರಿಂದ ಇಂಥಾ ಒಂದು ಮಸೂದೆಯನ್ನು ತರಲಾಯಿತು ಎಂದು ಮಾನ್ಯ ಸಚಿವರು ಹೇಳಿದರು. ಈ ಅಧಿವೇಶನದಲ್ಲೇ ಹಿಂದೆ ಒಂದು ಸಾರಿ ಇಂಥಾ ಒಂದು ವಿಷಯ ಬಂದಾಗ ಇಂಡಿಯನ್ ಕಾನ್‌ಸ್ಟಿಟ್ಯೂಷನ್‌ನಲ್ಲಿ ಇನ್ನೂ ಎಷ್ಟೋ ಕೆಲಸಗಳನ್ನು ವಿಧಾಯಕವಾಡಿದ್ದಾರೆ, ಈ ಸರ್ಕಾರದವರು ಅಂಥಾ ಕೆಲಸಗಳನ್ನು ಮಾಡಿಯೇ ಇಲ್ಲವೆಂದು ಹೇಳಿದ್ದೆ. ಉದಾಹರಣೆಗೆ ತೆಗೆದುಕೊಳ್ಳುವುದಾದರೆ, ಪಬ್ಲಿಕ್ ಸರ್ವೀಸ್ ಕಮೀಷನ್ ನೇಮಕ ಮಾಡಬೇಕಾಗಿತ್ತು........

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಸಚಿವರು).—ಒಂದೊಂದಾಗಿ ಮಾಡಬೇಕು.

ಶ್ರೀ ಎಲ್. ಸಿದ್ಧಪ್ಪನವರು.—ಆ ವಿಷಯ ಮೂರು ಸಾರಿ ಈ ಸಭೆಯಲ್ಲಿ ಚರ್ಚೆಗೆ ಬಂದಿತ್ತು. ಅದರ ಮೇಲೆ ಮಾನ್ಯ ಮುಖ್ಯ ಮಂತ್ರಿಗಳೂ ಮತ್ತು ಅದರ ಪೋರ್ಟ್‌ಫೋಲಿಯೋ ಮಂತ್ರಿಗಳಾದ ಮಾನ್ಯ ರೆವಿನ್ಯೂ ಸಚಿವರೂ ಎಷ್ಟೋ ಹೇಳಿಕೆಗಳನ್ನು ಪ್ರೆಸ್‌ನಲ್ಲಿ ಕೊಟ್ಟಿದ್ದಾರೆ. ಇಷ್ಟು ದಿನದೊಳಗೆ ನೇಮಕ ಮಾಡುತ್ತೇವೆ ಎಂತಲೂ ಸಹ ಹೇಳಿದ್ದಾರೆ. ಒಂದು ಸಾರಿ ದೆಹಲಿಯಿಂದ ವಾಪಸು ಬಂದ ಕೂಡಲೇ ಒಂದು ಹೇಳಿಕೆ ಕೊಟ್ಟರು. ಅವರು ಆ ರೀತಿ ಹೇಳದೇ ಇದ್ದರೂ ಹಾಗೆ ಅರ್ಥ ಬರುವಂತೆ ಪ್ರೆಸ್ ಸ್ಟೇಟ್‌ಮೆಂಟ್‌ನಲ್ಲಿ ಬಂದಿದ್ದರೆ ಅಂಥ ಹೇಳಿಕೆ ಕೊಟ್ಟಿಲ್ಲ ಪ್ರೆಸ್‌ನಲ್ಲಿ ಬಂದಿರುವುದು ಸರಿಯಲ್ಲ ಎಂದು ಹೇಳುವುದಕ್ಕೆ ಅವರಿಗೆ ಅವಕಾಶವಿತ್ತು. ಆದರೆ ಪ್ರೆಸ್‌ನಲ್ಲಿ ಅವರೇ ಕೊಟ್ಟಿರುವ ಹೇಳಿಕೆ ಬಂದಿದೆ. ಕೂಡಲೇ ಮಾಡಬೇಕಾದ ಇಂಥಾ ಮುಖ್ಯ ವಿಷಯಗಳು ಕಾನ್‌ಸ್ಟಿಟ್ಯೂಷನ್‌ನಲ್ಲಿ ಇರುವಾಗ ಅವನ್ನು ಹಿಂಬದಿಗಿಟ್ಟು ಈ ಸಂಬಳದ ವಿಚಾರವಾಗಿ ಮಸೂದೆಯನ್ನು ತಂದಿದ್ದಾರೆ. ಇದಕ್ಕೆ ಅಷ್ಟು ಜರೂರು ಇರಲಿಲ್ಲ. ಇದನ್ನು ಇಂಡಿಯನ್ ಕಾನ್‌ಸ್ಟಿಟ್ಯೂಷನ್‌ನಲ್ಲಿ ವಿಧಾಯಕ ಮಾಡಿದ್ದಾರೆ, ನಿಜ. ಆದರೆ ಈಗ ನಮ್ಮ ಸಂಸ್ಥಾನದ ಹಣಕಾಸಿನ ಸ್ಥಿತಿಯಲ್ಲಿ ಇಂಥಾ ಮಸೂದೆಯನ್ನು ತರದೆ ಇನ್ನೂ ಮುಂದುವರಿಸಿದ್ದರೂ ಬಾಧಕವಿರಲಿಲ್ಲ. ಇನ್ನೊಂದು ವಿಷಯ ಹೇಳಬೇಕಾಗಿದೆ. ಪದೇ ಪದೇ ಇಂಥಾ ಸಂದರ್ಭಗಳು ಬಂದಾಗ ಸರ್ಕಾರದ ಪರವಾಗಿ ಮಂತ್ರಿಗಳು ಹೇಳುವುದನ್ನು ಕೇಳಿದ್ದೇನೆ. ಅದೇನೆಂದರೆ, ಹಿಂದೆ ಈ 'ಲೆಜಿಸ್ಲೇಚರ್' ಬಾಬಿನಲ್ಲಿ ಎಷ್ಟೋ ಚಾರ್ಜಾಗುತ್ತಾ ಇತ್ತು, ಆಗ ಪ್ರಜಾಪ್ರತಿನಿಧಿ ಸಭೆಯಲ್ಲಿ 300 ಜನ, ನ್ಯಾಯವಿಧಾಯಕ ಸಭೆಯಲ್ಲಿ 64 ಜನ ಇರುತ್ತಿದ್ದರು, ಈಗ 76 ಜನ ಮಾತ್ರ ಇರುತ್ತಾರೆ. ಆ ಬಾಬಿನಲ್ಲಿ ಖರ್ಚು ಕಡಿಮೆಯಾಗುತ್ತಾ ಇದೆ, ಆದ್ದರಿಂದ ಇದನ್ನು ಹೆಚ್ಚು ಎಂದು ಭಾವಿಸಬಾರದು ಎಂಬ ಅರ್ಥದಲ್ಲಿ ವಾದ ಮಾಡುವುದು ಕೇಳಿಬರುತ್ತಿದೆ. ಅಲ್ಲದೆ ಇಂಥಾ ಸಣ್ಣ ಸಣ್ಣ ಬಾಬುಗಳಲ್ಲಿ ದುಡ್ಡು ಉಳಿತಾಯ ಮಾಡುವುದರಿಂದ ಆಗುವುದಾದರೂ ಏನು ಎಂದು ಅರ್ಥ ಬರುವ ರೀತಿಯ ವಾದವೂ ಇದೆ. ಹಣಕಾಸಿನ ಸ್ಥಿತಿಯನ್ನು ಉತ್ತಮಪಡಿಸುವುದಕ್ಕೆ ಎಷ್ಟೇ ಸಣ್ಣ ಬಾಬು ಆದರೂ ಕೂಡ ಅದರಲ್ಲಿ ಉಳಿತಾಯ ಮಾಡಬೇಕು. ನಮ್ಮಲ್ಲಿ ಒಂದು ನಾಣ್ನುಡಿ "ಹನಿಕೂಡಿದರೆ ಹಳ್ಳ, ತೆನೆ ಕೂಡಿದರೆ ಬತ್ತ" ಎಂದು ಇದೆ. ಆ ರೀತಿ ಉಳಿತಾಯ ಮಾಡುತ್ತಾ ಬಂದರೆ ಹಣಕಾಸಿನ ಸ್ಥಿತಿಯನ್ನು ಸರಿಪಡಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆಯೇ ಹೊರತು ಇಲ್ಲದೆ ಇದ್ದರೆ ಸಾಧ್ಯವಾಗುವುದಿಲ್ಲ. ಈ ರೀತಿ ಪ್ರತಿಯೊಂದು ಬಾಬಿನಲ್ಲೂ ಕಾನ್‌ಸ್ಟಿಟ್ಯೂಷನ್‌ನಲ್ಲಿ ಅವಕಾಶವಿದೆ ಎಂದಾಗಲೀ, ಅಥವಾ ಸರ್ಕಾರಿ ಆರ್ಡರ್‌ನಲ್ಲಿ ಅವಕಾಶವಿದೆ ಎಂದಾಗಲೀ ಮಾಡುತ್ತಾ ಹೋದರೆ ಅಭಿವೃದ್ಧಿ ಕಾರ್ಯಗಳಿಗೆ ಬೇಕಾಗಬಹುದಾದ ಮೊಬಲಗು ಇಲ್ಲದೆ ಹಾಗಾಗುತ್ತದೆ. ಆ ದೃಷ್ಟಿಯಿಂದ ನಾನು ಹೇಳುವುದೇನೆಂದರೆ ಈಗ ಇಂಥಾ ಒಂದು ಮಸೂದಾ ಕಾನೂನನ್ನು ಈ ಸಭೆಯ ಮುಂದೆ ಮಂಡಿಸಬೇಕಾದ ಪ್ರಕೃತ ಇರಲಿಲ್ಲ. ಹಿಂದೆ ನಾವು ಸಂಬಳ ಇಲ್ಲದೆ ಕೆಲಸ ಮಾಡುತ್ತಿದ್ದೆವು. ಮಂತ್ರಿಗಳು 2,000 ರೂಪಾಯಿ ಸಂಬಳ ತೆಗೆದುಕೊಳ್ಳುತ್ತಿದ್ದರು, ಅದಕ್ಕೆ ಬದಲಾಗಿ ನಾವು 500 ರೂಪಾಯಿ ತೆಗೆದುಕೊಂಡು ಅದೇ ಕೆಲಸವನ್ನು ಮಾಡಲು ಸಿದ್ಧರಿದ್ದೇವೆ ಎಂದು ಹೇಳುವ ಕಾಲ ಹೊರಟು ಹೋಗಿ, ಶಾಸನವಿಧಾಯಕ ಸಭೆಯ ಸದಸ್ಯ

(ಶ್ರೀ ಎಲ್. ಸಿದ್ದಪ್ಪನವರು.)

ರಿಗೂ ಕೂಡ ಸಂಬಳ ವಿಧಾಯಕ ಮಾಡುವ ಸಂದರ್ಭ ಬಂದಿದೆ ಎಂದು ಹೇಳುವಂತಾಗಿದೆ. ಆ ರೀತಿ ವಿಧಾಯಕ ಮಾಡುವ ತತ್ವ ತಪ್ಪೆಂದು ಹೇಳುವುದಿಲ್ಲ. ಆ ತತ್ವ ನ್ಯಾಯವಾಗಿದೆ. ಏಕೆಂದರೆ ಹೊರಗಡೆಯೂ ಕೂಡ ಈ ಪದ್ಧತಿ ಜಾರಿಯಲ್ಲಿದೆ. ಆದರೆ ಈಗಿನ ಹಣಕಾಸಿನ ಸ್ಥಿತಿಯನ್ನು ನೆನಪಿಗೆ ತಂದುಕೊಂಡು ಈ ಸಂದರ್ಭದಲ್ಲಿ ಇದನ್ನು ಜಾರಿಗೆ ತರುವುದಕ್ಕಿಂತ ತರದೇ ಇದ್ದಿದ್ದರೆ ಬಹಳ ಚೆನ್ನಾಗಿತ್ತು. ತರದೇ ಇರುವುದು ನ್ಯಾಯ ಎಂದು ಹೇಳುತ್ತೇನೆ.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಮುಖ್ಯ ಸಚಿವರು).—ತಂದಿರುವಾಗ ತರಕೂಡದು ಎಂದರೆ ಯಾವಾಗ ತರಬಹುದು?

ಶ್ರೀ ಎಲ್. ಸಿದ್ದಪ್ಪನವರು.—ಹಣಕಾಸಿನ ಪರಿಸ್ಥಿತಿ ಉತ್ತಮವಾಗುವವರೆಗೂ ತರದೇ ಇರುವುದು ಒಳ್ಳೆಯದು.

ಶ್ರೀ ಎಸ್. ರಂಗರಾಮಯ್ಯನವರು.—ಇದುವರೆಗೂ ಪಬ್ಲಿಕ್ ಸರ್ವಿಸ್ ಕಮಿಷನ್ ರಚನೆ ಮಾಡದೇ ಇದ್ದುದರಿಂದ ಅದಕ್ಕೆ ಆಗುತ್ತಿದ್ದ ಖರ್ಚು ಉಳಿತಾಯವಾಯಿತಲ್ಲವೇ!

ಶ್ರೀ ಎಲ್. ಸಿದ್ದಪ್ಪನವರು.—ಇಬ್ಬರು ಚೀಫ್ ಇಂಜನಿಯರಿಗೆ ಬದಲಾಗಿ ಒಬ್ಬರನ್ನು ಮಾಡಿದೆವು, ಅದರಿಂದ ಉಳಿತಾಯವಾಯಿತು ಎಂದೂ ಹೇಳುತ್ತಾರೆ. ಇದೆಲ್ಲಾ....................

The Hon'ble Sri K. CHENGALARAYA REDDY.—Everything on merits.

Sri L. SIDDAPPA.—If we take into consideration the merits, from the point of view of the finances of the State, I submit that there is absolutely no justification for such a measure as this.

ಆಮೇಲೆ ಇನ್ನೊಂದು ದೃಷ್ಟಿಯಿಂದ ನೋಡಿದರೂ ಕೂಡ ಈಗ ಸದಸ್ಯರಿಗೆ ಕೊಡುತ್ತಾ ಇರುವ ಟಿ. ಎ. ಮತ್ತು ಡಿ. ಎ. ಕಡಿಮೆ ಅಲ್ಲ, ತೃಪ್ತಿಕರವಾಗಿದೆ. ಯಾವ ಯಾವ ಪ್ರದೇಶದಲ್ಲಿ ಹೇಗೆ ಹೇಗೆ ಇದೆ ಎಂಬುದನ್ನು ಮಾನ್ಯ ಸಚಿವರು ಅವರ ಭಾಷಣದಲ್ಲಿ ಹೇಳಿದರು. ಅವುಗಳಿಗೆ ಹೋಲಿಸಿದರೆ ನಮಗೆ ಕೊಡುವ ಅಲೋಯೆನ್ಸು ಮತ್ತು ಟಿ. ಎ. ಕಡಿಮೆ ಏನೂ ಅಲ್ಲ. ಈ ಎಲ್ಲಾ ದೃಷ್ಟಿಯಿಂದ ಈ ಮಸೂದಾ ಕಾನೂನನ್ನು ವಿರೋಧಿಸುತ್ತೇನೆ.

The Hon'ble Sri K. T. BHASHYAM.—I will refer to one point which the Hon'ble Member has said. He said that merely because we have not constituted a Public Service Commission why should we be in a hurry to bring in this Bill for payment of salaries and allowances to members. One does not depend on the other. Merely because we have not been able to constitute a Public Service Commission, it does not mean that we should not bring in this Bill. He will find that after all there is no lacuna in not constituting a Public Service Commission because Article 378 (2) of the Constitution says:

> "The members of a Public Service Commission of a Province or of a Public Service Commission serving the needs of a group of Provinces holding office immediately before the commencement of this Constitution shall, unless they have elected otherwise, become on such commencement the members of the Public Service Commission for the corresponding State........"

There is a Public Service Commissioner in the State who under Article 378 (2) will continue as Public Service Commissioner until we appoint a Public Service Commission as contemplated by the Hon'ble Member. Nothing is lost. The work is being done.

Sri L. SIDDAPPA.—Is it under the Constitution?

The Hon'ble Sri K. T. BHASHYAM.—It is under the Constitution Article 378 (2) of the Constitution which I read says that until you constitute a Public Service Commission, the Public Service Commissioner who is performing the function on the 26th January will continue. So there is no harm done. Nothing is lost. On the other hand we have gained one lakh of rupees. Work is being done. Efficiency has not suffered and I do not see why anybody should shed any tears over it. Therefore, Sir, the argument that really because......

Sri L. SIDDAPPA.—I will take some other appropriate occasion to reply to this.

The Hon'ble Sri K. T. BHASHYAM.—I wish you had thought of it a little earlier (laughter). So, Sir, I consider that the Bill is very timely as I said. My Hon'ble friend is rich. But there are many poor Members who have got to earn their living. Now the work has become very heavy and our sittings are longer. There is great strain on the energy and resources of the Hon'ble Members. This is a very small comfort that we are providing. It is a small salary just by way of pocket expenses. The Hon'ble Member heard me say that all the Provinces give more than a hundred rupees. There is not a single Province where a legislator is paid less than a hundred rupees by way of salary. Therefore, Sir, I consider that even the Hon'ble Member will agree that we have erred on the

side of moderation as I said, and will welcome this Bill. If the time and energy spent here by the Hon'ble Members had been spent outside, they could have made mint of money. But they are doing this in the service of the country. Therefore, this Bill has not only been brought in time, but there is also every justification for it. I commend it for the consideration and acceptance of this House.

Mr. SPEAKER.—The question is :

"That the Mysore Payment of Salaries and Allowances to Members of the Legislative Assembly Bill, 1951, be taken into consideration."

The motion was adopted.

Mr. SPEAKER.—The clauses of the Bill will now be submitted to the Assembly. Clauses 2 to 5, both inclusive.

The question is :

"That clauses 2 to 5, both inclusive, stand part of the Bill."

The motion was adopted.

Clauses 2 to 5, both inclusive, wer added to the Bill.

Mr. SPEAKER.—Clause 1. The question is :

"That Clause 1 stand part of the Bill."

The motion was adopted.

Clause 1 was added to the Bill.

Mr. SPEAKER.—Title and Preamble. The question is :

"That the Title and the Preamble stand part of the Bill."

The motion was adopted.

The Title and the Preamble were added to the Bill.

Motion to pass.

The Hon'ble Sri K. T. BHASHYAM.—Sir, I beg to move :

"That the Mysore Payment of Salaries and Allowances to Members of the Legislative Assembly Bill, 1951, be passed."

The SPEAKER.—The question is :

"That the Mysore Payment of Salaries and Allowances to Members of the Legislative Assembly Bill, 1951, be passed."

The motion was adopted.

The Mysore Cultivation of Fallow Lands Bill, 1951.

Motion to con ider.

The Hon'ble Sri T. MARIAPPA (Home Minister).—Sir, I beg to move :

"That the Mysore Cultivation of Fallow Lands Bill, 1951, be taken into consideration."

ಮಾನ್ಯ ಅಧ್ಯಕ್ಷರೇ, ಸಂಸ್ಥಾನದಲ್ಲಿ ಹಿಡುವಳಿಯಲ್ಲಿದ್ದು ವ್ಯವಸಾಯ ಮಾಡದೆ ಬಂಜರಿನಲ್ಲಿರುವ ಜಮೀನುಗಳನ್ನು ಎಲ್ಲೆಲ್ಲಿ ವ್ಯವಸಾಯಮಾಡಲು ಅನುಕೂಲಗಳಿವೆಯೋ ಅಂಥ ಪ್ರದೇಶದಲ್ಲಿಯಾದರೂ ವ್ಯವಸಾಯ ಮಾಡಿ ಆಹಾರ ಪದಾರ್ಥಗಳನ್ನು ಬೆಳೆಸತಕ್ಕದ್ದು ಯುಕ್ತ; ಒಂದು ವೇಳೆ ಆಹಾರ ಪದಾರ್ಥಗಳನ್ನಲ್ಲದಿದ್ದರೆ ಇನ್ನಾವುದಾದರೂಬೆಳೆಯನ್ನು ಬೆಳೆಸಲೆಂಬ ಒಂದು ಸದುದ್ದೇಶದಿಂದ ಈ ಮಸೂದೆಯನ್ನು ಈ ಸಭೆಯ ಮುಂದಿಡಲಾಗಿದೆ. ಮೈಸೂರು ದೇಶದಲ್ಲಿ ಈಗ ಸುಮಾರು 17 ಲಕ್ಷ ಎಕರೆಗಳಷ್ಟು ಜಮೀನು ಪಾಳು ಬಿದ್ದಿದೆ. ಈ ಪಾಳಿನ ವಿಸ್ತೀರ್ಣವನ್ನು ಆದಷ್ಟು ಕಡಿಮೆ ಮಾಡಬೇಕು, ದಿನೇ ದಿನೇ ಏರುತ್ತಿರತಕ್ಕ ಈ ಜನಸಂಖ್ಯೆಗನುಗುಣವಾಗಿ ದೇಶದಲ್ಲಿ ಆಹಾರದ ಉತ್ಪತ್ತಿಯನ್ನೂ ಜಾಸ್ತಿಮಾಡಬೇಕಾಗಿದೆ.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲೆ).—17ಲಕ್ಷ ಎಕರೆಯನ್ನುವುದು current fallow ಪ್ರದೇಶವೇ ?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ಇಲ್ಲ. ಅದು ಸುಮಾರು ಎರಡು ಲಕ್ಷ ಎಕರೆಗಳಿದೆ.

ಈ ಉದ್ದೇಶವನ್ನು ಮುಟ್ಟುವುದಕ್ಕೆ ನಾನಾ ಮಾರ್ಗಗಳಿವೆ. ಒಂದನೆಯದಾಗಿ ಪ್ರಚಾರದಿಂದ ಮಾಡಬಹುದು; ಇಲ್ಲವೇ, ಜನರಿಗೆ ಹೆಚ್ಚಿನ ಅನುಕೂಲಗಳನ್ನು ಕಲ್ಪಿಸಿಕೊಟ್ಟು ತನ್ಮೂಲಕ ಜಮೀನು ಸಾಗುವಳಿಗೆ ಏರ್ಪಾಡು ಮಾಡಬಹುದು. ಹೇಗೆಂದರೆ, ಆ ಪ್ರದೇಶದ ಆರೋಗ್ಯಸ್ಥಿತಿಯನ್ನು ಸುಧಾರಿಸಿ ಜನರು ಅದನ್ನು ಸಾಗುವಳಿ ಮಾಡುವಂತೆ ಮಾಡಬಹುದು. ಇದರ ಜೊತೆಗೆ ಈಗ ಕೆಲವೆಡೆ ಜಮೀನು ಮಾಲೀಕರು ತಮ್ಮ ಕಸೂರಿಯಿಂದ ವ್ಯವಸಾಯ ಮಾಡಿಸದೆ ಉದ್ದೇಶಪೂರ್ವಕವಾಗಿ ಪಾಳು ಬಿಟ್ಟುಕೊಂಡಿರುವಂಥ ಸಂಧರ್ಭಗಳಿವೆ. ಅಂಥ ಸಂದರ್ಭಗಳಲ್ಲಿ ಮೊದಲು ಅವರನ್ನು ವ್ಯವಸಾಯಮಾಡಿ ಎಂದು ಕೇಳಿಕೊಂಡು, ಅಲ್ಲಿಗೂ ಅವರು ವ್ಯವಸಾಯ ಮಾಡದೇ ಹೋದರೆ ಸಮಯ ಸಂದರ್ಭ ಸನ್ನಿವೇಶ ನೋಡಿಕೊಂಡು ತಾಲ್ಲೂಕಿನ ಅಮಲ್ದಾರರು ವಿಚಾರಣೆ ಕೂಡ ನಡೆಸಿ ಅನಂತರ ವ್ಯವಸಾಯ ಮಾಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಕೈಕೊಳ್ಳಬೇಕೆಂದು ಮಾಡಿದೆ.

ಈ ವಿಷಯ ಇಷ್ಟು ಪ್ರಾಮುಖ್ಯವಾಗಿ ಬರುವುದಕ್ಕೆ ಕಾರಣಗಳನ್ನು ನಾನು ಸಂಕ್ಷೇಪವಾಗಿ ಒಂದೆರಡು ಮಾತುಗಳಲ್ಲಿ ತಿಳಿಸುತ್ತೇನೆ. 1943 ನೆಯ ಇಸವಿಯಿಂದೀಚೆಗೆ ದೇಶದಲ್ಲಿ ಆಹಾರಾಭಾವ ಎಷ್ಟರಮಟ್ಟಿಗಿದೆಯೆಂಬುದು ಜನಗಳಿಗೆ ಮನದಟ್ಟಾಗಿದೆ. ಅದಕ್ಕೆ ಮೊದಲೂ ಕೂಡ ಆಹಾರದ ಕೊರತೆಯಿದ್ದರೂ, ಪರದೇಶಗಳಿಂದ ಬೇಕಾದಷ್ಟು ದವಸ ಬರುತ್ತಿತ್ತು. ಆದ್ದರಿಂದ ಅದರ ಬಿಸಿ ಅಷ್ಟೊಂದು ನಮಗೆ ತಟ್ಟಿರಲಿಲ್ಲ. ಆದರೆ 1943 ನೆಯ ಇಸವಿಯಿಂದೀಚೆಗೆ ಆಹಾರಾಭಾವವು ಇಡೀ ಭಾರತವನ್ನೇ ಆವರಿಸಿಕೊಂಡಿದೆ. ಅದ

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ರಲ್ಲೂ ಭಾರತವು ವಿಭಾಗವಾದ ಮೇಲಂತೂ ಇದರ ಕಷ್ಟ ಇಮ್ಮಡಿಯಾಗಿದೆ. ಆ ಬಿಸಿ ಮೈಸೂರು ದೇಶಕ್ಕೂ ತಟ್ಟದೆ ಇಲ್ಲ.

ಈಗ ನಾವು ನಮ್ಮ ಸಂಸ್ಥಾನಕ್ಕೆಲ್ಲಾ ಪಟ್ಟಣಗಳಲ್ಲಿ 12 ಔನ್ಸ್ ನಂತೆಯೂ ಹಳ್ಳಿಗಾಡಿನಲ್ಲಿ 16 ಔನ್ಸ್ ಗಳಂತೆಯೂ ಆಹಾರ ಒದಗಿಸಬೇಕಾದರೆ ನಮಗೆ 2 ಲಕ್ಷದ 16,000 ಟನ್ ನಷ್ಟು ಕೊರತೆ ಬೀಳುತ್ತದೆ. ಈಗಿನ ರೇಷನ್ ಪ್ರಮಾಣದ ಪ್ರಕಾರ ಕೊಡುವುದಾದರೂ ಈ ವರ್ಷಕ್ಕೆ 1½ ಲಕ್ಷ ಟನ್ ನಷ್ಟು ಕಡಿಮೆಯಾಗುತ್ತದೆ. ಆದ್ದರಿಂದ ಈ ಮಸೂದಾ ಕಾನೂನಿನಿಂದ ಸ್ವಲ್ಪ ಭಾಗವಾದರೂ ಜಮೀನು ವ್ಯವಸಾಯಕ್ಕೆ ಬಂದರೆ ಎಷ್ಟೋ ಉತ್ತಮ. ಆದರೆ, ಒಂದು ಅಂಶವನ್ನು ಮಾತ್ರ ನಾನು ಒಪ್ಪುತ್ತೇನೆ. ಈ ಮಸೂದೆಯಲ್ಲಿರುವ ಅನೇಕ ಅಂಶಗಳನ್ನು ಜನಗಳು ಸಾರ್ವಜನಿಕ ಹಿತದೃಷ್ಟಿಯಿಂದ ಸುಧಾರಿಸಿಕೊಳ್ಳಬೇಕಾಗಿದೆ. ಅವಶ್ಯಕವಿದ್ದರೆ ಬೇಕಾದ ಸುಧಾರಣೆಗಳನ್ನು ಸೆಲೆಕ್ಟ್ ಸಮಿತಿಯಲ್ಲಿ ಮಾಡಿಕೊಳ್ಳಬಹುದು. ಮಾನ್ಯ ರಂಗರಾಮಯ್ಯನವರು ಒಂದು ತಿದ್ದುಪಡಿಯನ್ನು ಸೂಚಿಸಿದ್ದಾರೆ. ಅದನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸೋಣ. ಮಾತ್ರ ದಯವಿಟ್ಟು ಈ ಮಸೂದೆಯ ಬಗ್ಗೆ ಯಾರ ಉದ್ದೇಶವನ್ನೂ ತಪ್ಪು ತಿಳಿದುಕೊಳ್ಳಬಾರದೆಂದು ಬೇಡಿಕೊಳ್ಳುತ್ತೇನೆ. ಉದ್ದೇಶ ಒಂದಾದರೂ ಅದನ್ನು ಸಾಧಿಸುವ ಮಾರ್ಗಗಳು ಎಷ್ಟೋ ಇರುತ್ತವೆ. ಅವುಗಳಲ್ಲಿ ಆದಷ್ಟು ಕಡಿಮೆ ತೊಂದರೆ ಇರುವಂತೆ ತಕ್ಕ ರಕ್ಷಣೆಗಳನ್ನು ಏರ್ಪಡಿಸಿಕೊಳ್ಳುವುದಕ್ಕೆ ಸೆಲೆಕ್ಟ್ ಸಮಿತಿಯಲ್ಲಿ ಅವಕಾಶವಿದೆ. ಮುಖ್ಯವಾಗಿ ದೇಶದಲ್ಲಿರುವ ಈಗಿನ ಆಹಾರಾಭಾವವನ್ನು ಸುಧಾರಿಸಿಕೊಳ್ಳುವುದಕ್ಕೆ ಇದೂ ಒಂದು ಮಾರ್ಗವೆಂಬ ದೃಷ್ಟಿಯಿಂದ ಮಾತ್ರ ಇದನ್ನು ತಂದಿದ್ದೇವೆ. ಸಾಮಾನ್ಯವಾಗಿ ನೋಡುವುದಾದರೆ ನಮ್ಮ ಮೈಸೂರು ದೇಶದಲ್ಲಿ ಸಣ್ಣ ಸಣ್ಣ ಹಿಡುವಳಿದಾರರೇ ಬಹಳ ಮಂದಿ ಇದ್ದಾರೆ. ಅಂಥ ಬಡವರ ತಂಟೆಗೆ ಹೋಗದೆ 15 ಎಕರೆಗಳಿಗಿಂತ ಹೆಚ್ಚಿಗೆ ಖುಷ್ಕಿ ಅಥವಾ 10 ಎಕರೆಗಳಿಗೆ ಹೆಚ್ಚಿಗೆ ತರೀ ಜಮೀನಿರುವ ಜಮೀನ್ದಾರರುಗಳಿಗೆ ಮಾತ್ರ ಇದನ್ನು ಅನ್ವಯಿಸಬೇಕೆಂದಿದೆ. ಅಲ್ಲದೆ ಸ್ಥಳದಲ್ಲೇ ವಿಚಾರಣೆ ಮಾಡತಕ್ಕ ಅವಕಾಶವನ್ನು ಸಹ ಇಲ್ಲಿ ಕಲ್ಪಿಸಲಾಗಿದೆ. ದನಗಳ ಸಂಖ್ಯೆ ಹೆಚ್ಚಿಗೆ ಇದ್ದರೆ ಅವಕ್ಕಾಗಿ ಹಾಳುಬಿಟ್ಟುಕೊಳ್ಳುವುದಕ್ಕೂ ಅವಕಾಶವಿದೆ. ಆದ್ದರಿಂದ ಈ ವಿಚಾರದಲ್ಲಿ ಹೆಚ್ಚಿಗೆ ಚರ್ಚೆಗೆ ಅವಕಾಶ ಕೊಡದೆ ಕೇವಲ ರಚನಾತ್ಮಕ ಸಲಹೆಗಳನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದವರು ಈ ವಿಷಯದಲ್ಲಿ ಬಹಳ ಆಸಕ್ತಿಯನ್ನು ವಹಿಸುತ್ತಿದ್ದಾರೆಂಬವನ್ನು ತಮ್ಮಗಳಿಗೆ ತಿಳಿಸಬಯಸುತ್ತೇನೆ. ಮೊನ್ನೆ ಆಹಾರ ಮಂತ್ರಿಗಳ ಸಮ್ಮೇಳನಕ್ಕೆ ಹೋಗಿದ್ದಾಗ ಈ ವಿಚಾರವೂ ಚರ್ಚೆಗೆ ಬಂದಿತ್ತು. ನಮಗೂ ಅವರು ಅಧಿಕ ಆಹಾರೋತ್ಪತ್ತಿ ಯೋಜನೆಗಾಗಿ ಹಣ ಕೊಡುತ್ತಿದ್ದಾರೆ. ಆದಕಾರಣ ನಮ್ಮನ್ನು ಈ ಬಗ್ಗೆ ನೇರವಾಗಿ ಪ್ರಶ್ನೆ ಹಾಕಲು ಹೊರಟಿದ್ದಾರೆ. ಮೈಸೂರು ದೇಶದಲ್ಲಿ current fallow lands 2 ಲಕ್ಷ ಎಕರೆಗಳಷ್ಟಿದೆ. ಇಧರಲ್ಲಿ ಸ್ವಲ್ಪ ಭಾಗವಾದರೂ ಏಕೆ ಸಾಗುವಳಿಗೆ ತರುವ ಪ್ರಯತ್ನ ಮಾಡಕೂಡದೆಂದು ಕೇಳುತ್ತಿರುವುದಲ್ಲದೆ ಇದಕ್ಕೆ ಅವಶ್ಯಕವಾದ ಯಾವ ಅಧಿಕಾರವನ್ನಾದರೂ ತೆಗೆಧುಕೊಳ್ಳಿ ಎಂದು ಒತ್ತಾಯಪಡಿಸುತ್ತಿದ್ದಾರೆ.

ಬರೀ ಬಾಯಿ ಮಾತುಗಳಿಂದ ಒಂದೂ ಪ್ರಯೋಜನವಾಗುವುದಿಲ್ಲ. ಈ ಬಗ್ಗೆ ನಾನು ತಮ್ಮಗೊಂದು ನಿದರ್ಶನ ಕೊಡುತ್ತೇನೆ. ಈಗ ಯಾವ ಯಾವ ಧಾನ್ಯಕ್ಕೆ ಬೆಲೆ ಹೆಚ್ಚಾಗಿದೆಯೋ ಅಂಥಾದ್ದನ್ನು ಮಾತ್ರ ಬೆಳೆಯುಕೊಂಡು, ತನಗೆ ಇನ್ನೂ ಜಮೀನು ಹೆಚ್ಚಾಗಿದ್ದಲ್ಲಿ ಅದನ್ನೆಲ್ಲಾ ವ್ಯವಸಾಯ ಮಾಡದೆ ಬಂಜರ್ ಬಿಟ್ಟಿರತಕ್ಕ ನಿದರ್ಶನಗಳು ಅನೇಕವಾಗಿ ನಮ್ಮ ಗಮನಕ್ಕೆ ಬಂದಿವೆ. ಇದರ ದೆಶೆಯಿಂದಲೇ ನಮಗೀಗ ಆಹಾರಕ್ಕೆ ಇಷ್ಟೆಲ್ಲಾ ಕೊರತೆಯಾಗಿಧೆ.

ಚಿಕ್ಕಮಗಳೂರಿನಲ್ಲಿರುವಂಥಾ ಕೆಲವು ಕಾಫಿ ಪ್ಲಾಂಟರುಗಳಿಗೆ ಬರಹ ಮೂಲಕ ಎಚ್ಚರಿಕೆ ಕೊಟ್ಟದ್ದೂ ಅಲ್ಲದೆ ನಾನೇ ಆ ಜಿಲ್ಲೆಗೆ ಹೋಗಿದ್ದಾಗ ಖುದ್ದಾಗಿ ಅವರೆಲ್ಲರನ್ನೂ ಬರಮಾಡಿಕೊಂಡು ಅವರಿಗೆಲ್ಲಾ ಬೇಕಾದಷ್ಟು ಪ್ರಾರ್ಥನೆ ಮಾಡಿಕೊಂಡಿದ್ದೆ. ಅಲ್ಲದೆ ಜಿಲ್ಲಾಧಿಕಾರಿಗಳೂ, ವ್ಯವಸಾಯದ ಇಲಾಖೆ ಡೈರೆಕ್ಟರವರೂ ಬಹಳವಾಗಿ ಕೇಳಿಕೊಂಡಿದ್ದಾರೆ. ಅವರ ಕೂಲಿಗಾರರಿಗೆಲ್ಲಾ ನಾವೀಗ ಸರ್ಕಾರಿ ಡಿಪೋಗಳಿಂದ ಆಹಾರ ಸಾಮಗ್ರಿಗಳನ್ನು ಸರಬರಾಯಿ ಮಾಡುತ್ತಿದ್ದೇವೆ. ಅವರ ಕಾಫಿ ತೋಟದ ಪಕ್ಕದಲ್ಲಿ ಬತ್ತದ ವ್ಯವಸಾಯಕ್ಕೆ ಲಾಯಕ್ಕಾದ ಜಮೀನು ವಿಶೇಷವಾಗಿದೆ. ನಾವು ಇಷ್ಟೆಲ್ಲಾ ಅವರನ್ನು ಪ್ರಾರ್ಥಿಸಿಕೊಂಡಿದ್ದಾಗ್ಯೂ ಅಂಥ ಫಲವತ್ತಾದ ಜಮೀನೆಲ್ಲ ಈಗಲೂ ಇನ್ನೂ ಪಾಳುಬಿದ್ದಿದೆ. ಇದೇ ರೀತಿ ಅಲ್ಲಿ ಭತ್ತದ ವ್ಯವಸಾಯಕ್ಕೆ ಯೋಗ್ಯವಾದ ಜಮೀನುಗಳನು ವಿಶೇಷವಾಗಿ ಪಾಳುಗೆಡವಿದ್ದಾರೆ. ಇದಕ್ಕೆ ಕಾರಣವಾದರೂ ಇಷ್ಟೆ; ಈ ಬತ್ತದ ವ್ಯವಸಾಯ ಕಷ್ಟವಾದ್ದು : ಇದನ್ನು ಬೆಳೆಯಲು ಖರ್ಚುವೆಚ್ಚಗಳು ಹೆಚ್ಚಾಗಿ ಬೀಳುತ್ತವೆ, ಅವರಿಗೆ ಇತರ ಕಮರ್ಷಿಯಲ್ ಕ್ರಾಪುಗಳಷ್ಟು ದುಡ್ಡು ಇದರಲ್ಲಿ ದೊರೆಯುವುದಿಲ್ಲ, ಹೇಗಿದ್ದರೂ ಸರ್ಕಾರದವರು ರೇಷನ್ ಡಿಪೋ ಇಟ್ಟಿದ್ದಾರೆ; ಎಂಬ ಇತ್ಯಾದಿ ಅನೇಕ ಭಾವನೆಗಳಿಂದ ಆ ಜಮೀನುಗಳಲ್ಲಿ ವ್ಯವಸಾಯಮಾಡದೆ ಕೈ ಬಿಟ್ಟಿದ್ದಾರೆ. ಆದರೆ ಅವರು ಕಳೆದ ಮೂರು ವರ್ಷಗಳಲ್ಲಿ ನಮ್ಮ ಒತ್ತಾಯಕ್ಕಾಗಿ ಎಲ್ಲೋ ಕೆಲ ಕೆಲವು ಭಾಗಗಳಲ್ಲಿ ಮಾತ್ರ ವ್ಯವಸಾಯ ಮಾಡಿಸಿದ್ದಾರೆ. ಆದರೆ ನಾವು ಅವರಿಂದ ಎಷ್ಟರಮಟ್ಟಿಗೆ ಆಗಬೇಕೆಂದು ಆಶಿಸಿದ್ದೆವೋ ಅಷ್ಟರಮಟ್ಟಿಗೆ ಆಗದಿದ್ದರೂ ಹೋಗಲಿ, ಅವರವರ ಕಾಫಿ ತೋಟಗಳಲ್ಲಿ ಕೆಲಸ ಮಾಡತಕ್ಕ ಆಳುಕಾಳುಗಳಿಗಾಗುವ ದವಸವನ್ನಾದರೂ ಅವರು ಮನಸ್ಸು ಮಾಡಿದರೆ ಬೆಳೆದುಕೊಳ್ಳಬಹುದಾಗಿತ್ತು. ಅದರೆ ಅವರು ಅಷ್ಟು ಧಾರಾಳವನ್ನು ಕೂಡ ತೋರಿಸಲಿಲ್ಲ. ಆದರೆ ಅದೇ ರೀತಿ ಇರುವಂಥ ನಮ್ಮ ಮೈಸೂರು ಸಕ್ಕರೆ ಕಾರ್ಖಾನೆ ಇರತಕ್ಕ ಸ್ಥಳದಲ್ಲಿ, ಅಂದರೆ ಮಂಡ್ಯದಲ್ಲಿ ಈಗಾಗಲೇ 400–500 ಎಕರೆಗಳಲ್ಲಿ ಕಾರು ರಾಗಿಯನ್ನು ಮತ್ತು 400–500 ಎಕರೆಗಳಲ್ಲಿ ಬತ್ತವನ್ನು ಬೆಳೆದಿದ್ದಾರೆ. ಎಕರೆಯೊಂದಕ್ಕೆ ಸರಾಸರಿ 6-8 ಪಲ್ಲಾದಂತೆ ರಾಗಿಯನ್ನೂ 18-20 ಪಲ್ಲಾದಂತೆ ಭತ್ತವನ್ನೂ ಬೆಳೆದಿದ್ದಾರೆ. ಇದರಲ್ಲಿ ಮುಖ್ಯವಾಗಿ ಅನೇಕರು ಉತ್ಪತ್ತಿ ಹೆಚ್ಚಾಗಿದ್ದರೂ ಲಾಭ ಹೆಚ್ಚಾಗಿ ಬರುವುದಿಲ್ಲವೆಂಬ ಒಂದು ಉದ್ದೇಶದಿಂದಲೇ ಅನೇಕ ಜಮೀನುಗಳನ್ನು ವ್ಯವಸಾಯ ಮಾಡದೆ ಬಂಜರು ಕೆಡವಿದ್ದಾರೆ. ಇಂಥಾ ನಿದರ್ಶನಗಳು ನಮ್ಮ ಗಮನಕ್ಕೆ ವಿಶೇಷವಾಗಿ ಬಂದಿರುವ ಕಾರಣ ಇಧರ ಬಗ್ಗೆ ಒಂದು enabling legislation ಇರತಕ್ಕದ್ದು ಸಾಧುವಾದುದೆಂದು ಇದನ್ನು ತಯಾರಿಸಲಾಗಿದೆ ವಿನಾ ಕಾರಣ ಇದನ್ನು ಉಪಯೋಗಿಸಿ ಯಾರಿಗೂ ತೊಂದರೆ ಕೊಡಬೇಕೆಂಬ ಉದ್ದೇಶ ಖಂಡಿತ ಈ ಮಸೂದೆಯಲ್ಲಿಲ್ಲ. ಇದರಲ್ಲಿ ಹಾಗೇನಾದರೂ ತಿದ್ದುಪಡಿ ಮಾಡತಕ್ಕ ಅಂಶಗಳಿದ್ದರೆ ಈ ಮಸೂದೆ ಸೆಲೆಕ್ಟ್ ಸಮಿತಿಯವರ ಮುಂದೆ ಹೋಗ

ತಕ್ಕದ್ದಾಗಿದೆ, ಆಗ ಅವರು ಎಲ್ಲವನ್ನೂ ಪರ್ಯಾಲೋಚನೆ ಮಾಡೇ ಮಾಡುತ್ತಾರೆ. ಆದರೆ ಇದೇ ಸಂದರ್ಭದಲ್ಲಿ ನಾನು ಈ ಸಭೆಯ ಮಾನ್ಯ ಸದಸ್ಯರ ಮೂಲಕ ಸಾರ್ವಜನಿಕರಲ್ಲಿ ಪ್ರಾರ್ಥಿಸಿಕೊಳ್ಳಬೇಕಾಗಿರುವುದೇನೆಂದರೆ ಸರ್ವರೂ ತಾವು ಕಾರ್ಯೋನ್ಮುಖರಾಗುತ್ತ ಆಗಾಗ್ಯೆ ತಮಗೆ ಸೂಕ್ತವೆಂದು ತೋರಿಬರುವ ಸಲಹೆಗಳನ್ನೆಲ್ಲಾ ಸರ್ಕಾರದವರ ಗಮನಕ್ಕೆ ತಂದಲ್ಲಿ ಅದನ್ನು ಪರಿಶೀಲನೆ ಮಾಡುವುದಕ್ಕೆ ಸರ್ಕಾರದವರು ಸದಾ ಸಿದ್ಧವಾಗಿರುತ್ತಾರೆಂದು ತಿಳಿಸಿ, ಈ ಮಸೂದೆಗೆ ತಾವೆಲ್ಲರೂ ಬೆಂಬಲ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಮತ್ತೊಂದು ಅಂಶವನ್ನು ನಾನೀಗ ಮಾನ್ಯ ಅಧ್ಯಕ್ಷರ ಗಮನಕ್ಕೆ ತರಬೇಕಾಗಿದೆ. ಈ ಮಸೂದೆಯ ಸೆಕ್ಷನ್ 2 ಒಳಪ್ರಕರಣ (3) ರಲ್ಲಿ 'for a period exceeding three years' ಎಂದು ಬಿದ್ದಿದೆ. ಅದು ಮುದ್ರಣದ ತಪ್ಪು, ಅಲ್ಲಿ 2 ವರ್ಷಗಳೆಂದು ತಿದ್ದುಪಡಿ ಮಾಡಿಕೊಳ್ಳಬೇಕು. ಈ ಒಂದು ಅಂಶವನ್ನು ನಾನು ತಮ್ಮೆಲ್ಲರ ಗಮನಕ್ಕೆ ತಂದು ಮತ್ತೊಮ್ಮೆ ತಮ್ಮೆಲ್ಲರನ್ನೂ ಈ ಮಸೂದೆಗೆ ಬೆಂಬಲ ನೀಡಬೇಕೆಂದು ಪ್ರಾರ್ಥಿಸುತ್ತೇನೆ.

Mr. SPEAKER.—Motion moved :

"That the Mysore Cultivation of Fallow Lands Bill, 1951, be taken into consideration."

Sri Rangaramiah may move his amendment.

Sri S. RANGARAMIAH (Mysore District—General).—Sir, I beg to move:

"That the Mysore Cultivation of Fallow Lands Bill, 1951, be referred to a Select Committee consisting of

the Hon'ble Home Minister.

Rajāmantrapravina H. B. Gundappa Gowda,

Sri L. Siddappa,

Sri S. Kariappa,

Sri H. M. Channabasappa,

Sri Mali Mariappa,

Sri G. Narayana Gowda,

Sri H. M. Mallikarjunappa,

Sri M. C. Venkateshan,

Sri K. H. Mudiappa,

Sri M. L. Nanjaraja Urs,

Sri Kadidal Manjappa,

Sri H. K. Veeranna Gowda,

Sri Govinda Das,

Sri S. Ranga Rao,

Sri T. Ramachar and the mover Sri S. Rangaramiah."

Sri L. SIDDAPPA (Shimoga District—General).—Sir, I may kindly be excused from serving on this Committee. I am already on so many Committees.

The Hon'ble Sri K. T. BHASHYAM (Minister for Law and Labour.)—But he is a very useful member of a Select Committee.

Mr. SPEAKER.—Motion moved :

"That the Mysore Cultivation of Fallow Lands Bill, 1951, be referred to a Select Committee consisting of,—

The Hon'ble Home Minister,

Rajamantrapravina H. B. Gundappa Gowda,

Sri L. Siddappa,

Sri S. Kariappa,

Sri H. M. Channabasappa,

Sri Mali Mariappa,

Sri G. Narayana Gowda,

Sri H. M. Mallikarjunappa,

Sri M. C. Venkateshan,

Sri K. H. Mudiappa,

Sri M. L. Nanjaraja Urs,

Sri Kadidal Manjappa,

Sri H. K. Veeranna Gowda,

Sri Govinda Das,

Sri S. Ranga Rao,

Sri T. Ramachar and

Sri S. Rangaramiah."

The Hon'ble Sri K. CHENGALARAYA REDDY (Leader of the House).—About Hon'ble Member Siddappa being omitted, I think he said so because he felt that the Committee was too unwieldy.

Sri L. SIDDAPPA.—That is also one of the reasons.

The Hon'ble Sri K. CHENGALARAYA REDDY.—I do not think the Hon'ble Member means seriously. The Hon'ble the Law Minister said that his presence is very valuable.

Sri L. SIDDAPPA.—Usually in the mornings we make some study.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ಈ ಮಸೂದೆಯನ್ನು ನಾನು ಸ್ವಾಗತಿಸುತ್ತಾ ಮತ್ತು ನನ್ನ ತಿದ್ದುಪಡಿ ಸಮೇತ ಇದನ್ನು ಸೆಲೆಕ್ಟ್ ಸಮಿತಿಯವರ ಪರಿಶೀಲನೆಗೆ ಹಾಕಬೇಕೆಂದು ಸಲಹೆ ಮಾಡುತ್ತ ಒಂದೆರಡು ವಿಷಯಗಳನ್ನು ಮಾತ್ರ ನಾನು ತಿಳಿಸಬೇಕೆಂದಿದ್ದೇನೆ. ಈಗಿನ ಆಹಾರದ ಅಭಾವದಲ್ಲಿ ಈ ಮಸೂದೆಯ ಅಗತ್ಯ ಮತ್ತು ಅವಶ್ಯಕತೆ ನಮಗೆ ಎಷ್ಟರಮಟ್ಟಿಗಿದೆಯೆಂಬುದನ್ನು ನಾನು ಹೆಚ್ಚು ವರ್ಣನೆ ಮಾಡಬೇಕಾಗಿಲ್ಲ. ಆದರೆ ವ್ಯವಸಾಯಕ್ಕೆ ಅನುಕೂಲವಾಗಿದ್ದು ಮತ್ತು ಹಿಡುವಳಿ ಜಮೀನುಗಳಾಗಿದ್ದಂಥ ಜಮೀನುಗಳ ಪೈಕಿ ಈಗ 17 ಲಕ್ಷ ಎಕರೆಗಳಷ್ಟು ಪಾಳುಬಿದ್ದಿದೆಯೆಂದರೆ

....

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—17 ಲಕ್ಷ ಎಕರೆಗಳಷ್ಟು ಜಮೀನು ಪಾಳು ಬಿದ್ದಿವೆಯೆಂದು ಎಲ್ಲಿ ತಿಳಿಸಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ current fallow ಆಗಿರತಕ್ಕ ಜಮೀನು ಜಿಲ್ಲಾವಾರು ಎಷ್ಟೆಷ್ಟಿದೆ ಎಂಬುದಕ್ಕೆ ಒಂದು ಪಟ್ಟಿ ತಯಾರಾಗುತ್ತಿದೆ.

(ಮಾನ್ಯ ಶ್ರೀ ಟಿ. ಮರಿಯಪ್ಪನವರು.)

ಅದು ಬಂದ ಕೂಡಲೇ ತಮಗೆಲ್ಲ ಅಂಕಿ ಅಂಶಗಳನ್ನು ಒದಗಿಸಲಾಗುತ್ತೆ. ಆ ಪಟ್ಟಿಯಲ್ಲಿ ವಿಶದವಾಗಿ ಎಲ್ಲವನ್ನೂ ತಿಳಿಸಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಹೀಗೆ ಪ್ರತಿಯೊಂದು ಜಿಲ್ಲೆಯಲ್ಲೂ ವ್ಯವಸಾಯ ನಡೆಯುತ್ತಿದ್ದಂಥ ಜಮೀನುಗಳ ಪೈಕಿ 17 ಲಕ್ಷ ಎಕರೆಗಳಲ್ಲಿ ಏನೂ ವ್ಯವಸಾಯವೇ ಇಲ್ಲದೆ ಪಾಳು ಬಿದ್ದಿದೆಯೆಂದು ಹೇಳುವಾಗ ದೇಶದಲ್ಲಿ ಆಹಾರಾಭಾವ ಉಂಟಾಗಿರುವುದರಲ್ಲಿ ಆಶ್ಚರ್ಯವೇನಿದೆ? ಒಂದು ವೇಳೆ ಈ 17 ಲಕ್ಷ ಜಮೀನಿನಲ್ಲೂ ವ್ಯವಸಾಯ ನಡೆಯುತ್ತಿದ್ದಾಗ್ಯೂ ನಮಗೆ ಪ್ರತಿ ವರ್ಷ ಸುಮಾರು 24 ಲಕ್ಷ ಪಲ್ಲಗಳ ಆಹಾರದ ಕೊರತೆ ಇದ್ದೇ ಇರುತ್ತೆ, ಅಂದಮೇಲೆ ಅಷ್ಟು ನಮಗೆ ಆಹಾರದ ಕೊರತೆ ಇರುವಾಗಲೂ ಈ 17 ಲಕ್ಷ ಎಕರೆಗಳಷ್ಟು ಭೂಮಿಯಲ್ಲಿ ಯಾವ ಬೆಳೆಯೂ ಇಲ್ಲದಂತೆ ಪಾಳು ಬೀಳಲು ಅವಕಾಶ ಕೊಡತಕ್ಕದ್ದು ತೀರಾ ಅನ್ಯಾಯ. ಇದರಿಂದ ದೇಶಕ್ಕೇ ದೊಡ್ಡ ಕುಂದುಕ. ಸರ್ಕಾರದವರು ಇದನ್ನು ಯಾವುದಾದರೂ ಒಂದು ರೂಪದಲ್ಲಿ ಸರಿಪಡಿಸಲೇಬೇಕಾಗಿದೆ. ಆ ಬಗ್ಗೆ ಈಗ ಸರ್ಕಾರದವರು ಈ ಮಸೂದೆಯನ್ನು ಸಭೆಯ ಮುಂದೆ ತರಬೇಕಾಗಿ ಬಂತು. ಆದರೆ ನನಗೆ ಒಂದು ಅನಿಸುತ್ತಿದೆ, ಹೀಗೆ ಬರಿ ಒಂದು ಕಾನೂನಿನ ಭಯದಿಂದಲೇ ಕೆಲಸವನ್ನೆಲ್ಲಾ ಮಾಡಿಸಲಿಕ್ಕೆ ಸಾಧ್ಯವಾಗಲಾರದೆಂದು ಈ ಕಾನೂನಿನಲ್ಲಿ ತಾವು ಹಾಕಿರತಕ್ಕ ಷರತ್ತುಗಳ ಪೈಕಿ ಕೆಲವು ಬಹಳ ಕಠಿಣವಾಗಿವೆ. ಅವುಗಳನ್ನು ಸ್ವಲ್ಪ ಬದಲಾಯಿಸಬೇಕು. ಹಾಗೆ ಒಂದುವೇಳೆ ಜಮೀನಿನ ಮಾಲೀಕನು ವ್ಯವಸಾಯ ಮಾಡದೆ ಇದ್ದರೆ ಅವನು ವಾರಕ್ಕಾಗಲೀ ಅಥವಾ ಗುತ್ತಿಗೆಗಾಗಲೀ ಕೊಡಬೇಕೆಂದು ಹೇಳಿದ್ದರೆ ಆಗ ಅಷ್ಟು ಭಯವಿಲ್ಲ. 10 ಎಕರೆ ತರಿ, 15 ಎಕರೆ ಖುಷ್ಕಿ ಜಮೀನು ಯಾರಿಗಿದೆಯೋ ಅಂಥವರು ತಮ್ಮ ಜಮೀನನ್ನು ವ್ಯವಸಾಯ ಮಾಡದೆ ಪಾಳುಗೆಡವಿದರೆ, ಅಂಥಾ ಸಂದರ್ಭದಲ್ಲಿ ಹೀಗೆ ವರ್ತಿಸಬೇಕೆಂಬ ಬಗ್ಗೆ ತಾಲ್ಲೂಕು ಅಮಲ್ದಾರರಿಗೆ ಅಧಿಕಾರ ಕೊಡಲಾಗಿದೆ. ಅಂಥಾ ಸಂದರ್ಭಗಳಲ್ಲಿ ಅವರು ಒಬ್ಬ ಯಾರಾದರೂ ತನ್ನ ಜಮೀನನ್ನು ವ್ಯವಸಾಯ ಮಾಡದೆ ಪಾಳುಗೆಡವಿದ್ದಾಗ, ಆ ಮನುಷ್ಯನಿಗೆ ಒಂದು ನೋಟೀಸನ್ನು ಜಾರಿ ಮಾಡಿ, ಆಗಲೂ ಆತ ಕೇಳದಿದ್ದಾಗ ಆತನ ಜಮೀನನ್ನು 3 ವರ್ಷಗಳ ತನಕ ಬೇರೆ ಯಾರಿಗಾದರೂ ವ್ಯವಸಾಯ ಮಾಡತಕ್ಕವರಿಗೆ ಆ ಜಮೀನಿನ ಕಂದಾಯಕ್ಕೆ ಕೊಡಬಹುದೆಂದು ಇದರಲ್ಲಿ ತಿಳಿಸಲಾಗಿದೆ.

ನನ್ನ ಕೈಲಾಗುವುದಿಲ್ಲ. ನನಗೆ - ಬೇಕಾದಷ್ಟು ಜಮೀನಿದೆ. ಆಗ ಅಲ್ಲಿನ ಸ್ಥಳ ವಿದ್ಯಮಾನದಿಂದ ವ್ಯವಸಾಯಗಾರರು ಸಿಕ್ಕುವುದಿಲ್ಲವೆಂದು ಜಮೀನು ಮಾಲೀಕನಾದ ನಾನು ಅಮಲ್ದಾರರಿಗೆ ಹೇಳಿದರೆ ಅವರು ವ್ಯವಸಾಯ ಮಾಡಿಸುವುದಕ್ಕೆ ಏರ್ಪಾಡು ಮಾಡಲು ಅಧಿಕಾರವಿದೆ. ಇದಲ್ಲದೆ ಮೂರು ವರ್ಷದ ವರೆಗೆ ಯಾವ ಜಮೀನು ಪಾಳುಬಿದ್ದಿದೆಯೋ ಅಂಥಾದ್ದನ್ನು ಈ ಕಾನೂನು ಜಾರಿಯಾದ ಮೇಲೆ ಇದರ ಪ್ರಕಾರ ಅಮಲ್ದಾರರು ವ್ಯವಸಾಯ ಮಾಡಿಸುವುದಕ್ಕೆ ಅಧಿಕಾರವಿದೆಯೇ ವಿನಾ ಏನೋ ಒಂದು ವರ್ಷ ಪಾಳು ಬಿಟ್ಟಿದ್ದರೆ ಆ ಜಮೀನನ್ನು ತೆಗೆದುಕೊಳ್ಳುವುದಕ್ಕೆ ಅಧಿಕಾರವಿಲ್ಲ. ಮತ್ತು ಈ ಕಾನೂನಿನ ವ್ಯಾಪ್ತಿಯಿರತಕ್ಕದ್ದು ಮೂರು ವರ್ಷದವರೆಗೆ. ಅಮಲ್ದಾರರು ಗುತ್ತಿಗೆಗೆ ಅಥವಾ ವಾರಕ್ಕೆ ಕೊಡತಕ್ಕದ್ದು ಮೂರು ವರ್ಷಕ್ಕೆ. ಅದು ತಾತ್ಕಾಲಿಕವಾದದ್ದು. ಇದರಿಂದ ಒಳ್ಳೆಯ ಪರಿಣಾಮವಾಗುತ್ತದೆ. ಈ ಮೂಲಕ ಆಹಾರ ಧಾನ್ಯ ಹೆಚ್ಚಿ, ಹಾಳು ಬಿದ್ದಿರುವ ಜಮೀನು ನೇಗಿಲು ಕಂಡು ವ್ಯವಸಾಯಕ್ಕೆ ಬಂದರೆ ಎಲ್ಲರೂ ಸಂತೋಷಪಡುವೆವು. ಅಲ್ಲದೆ ಭಾರತ ದೇಶದಲ್ಲೆಲ್ಲೂ ಇಲ್ಲದೇಯಿರುವ ಕಾನೂನನ್ನು ನಾವು ತಂದಿಲ್ಲ. ಬೊಂಬಾಯಿನಲ್ಲದೆ, ಮಧ್ಯ ಪ್ರಾಂತದಲ್ಲದೆ ಮತ್ತು ಇನ್ನೂ ಕೆಲವು ಪ್ರಾಂತಗಳಲ್ಲಿ ಈಗಲೂ ಜಾರಿಯಲ್ಲಿದೆ. ಮದರಾಸಿನಲ್ಲೂ ಕೂಡ ಸರ್ಕಾರಿ ಆರ್ಡರನ್ನು ಹೊರಡಿಸಿ ಪಾಳು ಜಮೀನನ್ನು ವ್ಯವಸಾಯಕ್ಕೆ ತರಲು ಪ್ರಯತ್ನ ಪಟ್ಟಿದ್ದಾರೆ. ನಮ್ಮ ಸಂಸ್ಥಾನದಲ್ಲೂ ಸಹ ಅನೇಕ ದಿವಸಗಳಿಂದ ಜಿಲ್ಲಾ ಸಮ್ಮೇಳನ, ತಾಲ್ಲೂಕು ಸಮ್ಮೇಳನ ಮತ್ತು ಹಿಂದಿನ ಅಸೆಂಬ್ಲಿಗಳಲ್ಲಿ ಮಾನ್ಯ ಸದಸ್ಯರು ಎಷ್ಟೋ ಸಲ ಈ ವಿಚಾರವನ್ನು ಒತ್ತಾಯಪಡಿಸಿದ್ದಾರೆ. ಇಷ್ಟು ಜಮೀನಿದ್ದರೂ ಆಹಾರಾಭಾವವೆಂದು ಸರ್ಕಾರದವರು ಹೇಳುವುದು ಸರಿಯಲ್ಲ; ಅದಕ್ಕೆ ತಕ್ಕಷ್ಟು ಕಾರ್ಯಕ್ರಮ ತೆಗೆದುಕೊಂಡು ಎಲ್ಲ ಜಮೀನನ್ನೂ ವ್ಯವಸಾಯಕ್ಕೆ ತರಬೇಕು ಎಂದು ಹೇಳಿದ್ದಾರೆ ಮತ್ತು ವ್ಯವಸಾಯಗಾರರು ಬೀಳು ಬಿಟ್ಟಿರುವುದಕ್ಕೆ ನಾನಾ ಕಾರಣಗಳಿವೆಯೆಂದೂ ತಿಳಿಸಿದ್ದಾರೆ. ಮುಖ್ಯವಾಗಿ ಸಂಸ್ಥಾನದಲ್ಲೆಲ್ಲಾ ಒಂದೇ ಕಾಲದಲ್ಲಿ ಅನ್ವಯಿಸುವುದಕ್ಕೆ ಅವಕಾಶವಿಲ್ಲದಿದ್ದರೂ ಆಯಾ ಪ್ರದೇಶಗಳಿಗೆ ತಕ್ಕಂತೆ ಈ ಕಾನೂನನ್ನು ಅನ್ವಯಿಸಿದರೆ ಆಹಾರ ಧಾನ್ಯವನ್ನು ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಅದರಲ್ಲೂ ಕೂಡ ನೋಡಿದ್ದರಲ್ಲಿ ಸೌಕರ್ಯವಿದ್ದು ನಾಲೆ ಆಸರೆಯಿರುವಂಥ ನಾವು ಸ್ಥಳಗಳಲ್ಲೂ ಸಾವಿರಾರು ಎಕರೆ ಪಾಳು ಬಿಟ್ಟಿರುವುದು ಕಂಡುಬಂದಿದೆ. ಶ್ರೀರಂಗಪಟ್ಟಣ ತಾಲ್ಲೂಕೊಂದರಲ್ಲೇ ಸಾವಿರ ಎಕರೆ ಪಾಳುಬಿದ್ದಿದೆ. ಜಮೀನು ವ್ಯವಸಾಯ ಮಾಡತಕ್ಕವರೂ ಇದ್ದಾರೆ. ಆದರೆ ದುರಾಸೆಯಿಂದ ಹೆಚ್ಚಿಗೆ ಗುತ್ತಿಗೆ ಪಡೆಯಲು ಇಷ್ಟು ಗುತ್ತಿಗೆ ಕೊಟ್ಟರೇ ಗುತ್ತಿಗೆ ಕೊಡುವುದು, ಇಲ್ಲದಿದ್ದರೆ ಇಲ್ಲ ಎಂದು ತೀರ ಮೊಂಡರಾದ ರೈತರು ಹಟ ಹಿಡಿದು ಜಮೀನು ಪಾಳು ಕೆಡವಿದ್ದಾರೆ. ಈ ತರಹ ಸಂದರ್ಭಗಳಿಂದ ವ್ಯವಸಾಯಕ್ಕೆ ಅನೇಕ ಕಡೆ ತೊಂದರೆ ಪ್ರಾಪ್ತವಾಗಿದೆ. ಅಂಥ ಜಮೀನುಗಳಿಗೆ ಈ ಕಾನೂನು ಮಾಡಿ ಅನ್ವಯಿಸುವುದು ಆದ್ಯ ಕರ್ತವ್ಯ. ಅದೂ ಅಲ್ಲದೆ ಇನ್ನೊಂದು ವಿಶೇಷ ಇದರಲ್ಲೇನಿದೆಯೆಂದರೆ ಏನೇನು ತಿದ್ದುಪಡಿ ಮಾಡಬೇಕೋ ಅದಕ್ಕೆಲ್ಲಾ ಅವಕಾಶವಿದೆ. ಕೆಲವರು ಈಗಿನ ಕಾನೂನು ನೋಡಿ ಭಯಪಟ್ಟರು. ಅದನ್ನು ಸೆಲೆಕ್ಟ್ ಸಮಿತಿಯಲ್ಲಿ ವಿಚಾರ ಮಾಡಬಹುದು. ಈಗ ಸಂಸ್ಥಾನದಲ್ಲಿ ಪಾಳುಬಿದ್ದಿರುವ ಜಮೀನನ್ನು ಹಾಗೆಯೇ ಬಿಟ್ಟು ಕೊಂಡಿರುತ್ತೇವೆ, ನಮ್ಮನ್ನು ಯಾರು ಕೇಳುವರು ಎಂದು ಯಾರಾದರೂ ಹೇಳಿದರೆ, ಅದನ್ನು ಕೇಳತಕ್ಕದ್ದು ಸಾರ್ವಜನಿಕರ ಹಕ್ಕು ಬಾಧ್ಯತೆಗೆ ಧಕ್ಕೆ ತರುತ್ತದೆ ಎಂದು ಕೆಲವರು ಹೇಳಬಹುದುದು; ಆದರೆ ಸಂಸ್ಥಾನದ ಹಿತದೃಷ್ಟಿಯಿಂದ ಮತ್ತು ಎಲ್ಲಾ ಜನರ ಹಿತದೃಷ್ಟಿಯಿಂದ ಈ ಮಸೂದೆಯನ್ನು ತರತಕ್ಕದ್ದು ಅತ್ಯಗತ್ಯವಾಗಿದೆ. ಆದ್ದರಿಂದ ಇದನ್ನು ಸ್ವಾಗತಿಸುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಈ ಮಸೂದೆಯನ್ನು ಸಮರ್ಥಿಸುತ್ತಾ ಎರಡು ಮಾತುಗಳನ್ನು ಹೇಳಬೇಕೆಂದಿದ್ದೇನೆ. ಇದನ್ನು ತಂದಿರುವ ಉದ್ದೇಶವೇನೆಂಬುದನ್ನು ಮಾನ್ಯ ಮಂತ್ರಿಗಳು ಹೇಳಿದರು. ದೇಶದಲ್ಲಿ ಆಹಾರ ಪರಿಸ್ಥಿತಿಯನ್ನು ಸುಧಾರಿಸುವ ಉದ್ದೇಶದಿಂದ ಎಲ್ಲೆಲ್ಲಿ ಬಂಜರು ಜಮೀನಿದೆಯೋ, ಎಲ್ಲೆಲ್ಲಿ ವ್ಯವಸಾಯಕ್ಕೆ ಲಾಯಕ್ಕಾದ ಜಮೀನು ಪಾಳುಬಿದ್ದಿದೆಯೋ ಅದನ್ನೆಲ್ಲಾ ಸಾಗುವಳಿಗೆ ತರುವುದು ಅತ್ಯಾವಶ್ಯಕ ಎಂದು ತಿಳಿಸಿದ್ದರು. ಹಿಂದೆ

ಆರ್ಥಿಕ ಮುಗ್ಗಟ್ಟಿನಲ್ಲಿದ್ದ ವ್ಯವಸಾಯಗಾರರ ಕಡೆ ಯಾರೂ ನೋಡದೇಯಿರುವ ಕಾಲವಿತ್ತು. ಎರಡು ರೂಪಾಯಿಗೆ ಪಲ್ಲ ರಾಗಿ, ಜೋಳ ಇದ್ದಾಗ ಯಾರೂ ಅವರ ಕಡೆ ನೋಡುತ್ತಿರಲಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಆಹಾರ ಧಾನ್ಯಗಳ ಧಾರಣೆ ಏನೂ ಕಡಿಮೆಯಿಲ್ಲ. ಸಾಮಾನ್ಯವಾಗಿ ಹೇಳುವುದಾದರೆ ದವಸ ಅಥವಾ ಕಮರ್ಷಿಯಲ್ ಕ್ರಾಪ್‌ಗೆ ಬಹಳ ಧಾರಣೆಯಿದೆಯೆಂದು ಹೇಳಬಹುದು. ಆದರೂ ಇಂಥಾ ಕಾಲದಲ್ಲೂ ಸಹ ಏತಕ್ಕೆ 17 ಲಕ್ಷ ಚಿಲ್ಲರೆ ಎಕರೆ ಬಂಜರಿದೆಯೆಂದು ವಿಮರ್ಶೆ ಮಾಡುವಾಗ ಅದಕ್ಕೆ ಏನಾದರೂ ಕಾರಣ ಇದೆಯೆ ಎಂದು ಸೆಲೆಕ್ಟ್ ಸಮಿತಿಯವರು ಸ್ವಲ್ಪ ಯೋಚನೆ ಮಾಡಬೇಕಾದ್ದು ಸೂಕ್ತ ಎಂದು ಹೇಳುತ್ತೇನೆ. ಈ ದಿವಸ ನನ್ನ ಅನುಭವದಲ್ಲಿರುವ ಹಾಗೆ ಹೇಳುವುದಾದರೆ ಎಲ್ಲಕ್ಕಿಂತ ಹೆಚ್ಚಾಗಿ ವ್ಯವಸಾಯದ ಕೂಲಿಗಳ ಸಮಸ್ಯೆ ಬಹುಕಷ್ಟವಾಗಿದೆ. ಅನೇಕ ಕಡೆ ಧಾರಣೆ ಬಹಳ ಚೆನ್ನಾಗಿದೆ ಎಂದು ಹೇಳಿದರೂ ಕೂಲಿಗಾರರ ಸಮಸ್ಯೆ ಮತ್ತು ಎತ್ತುಗಳ ಧಾರಣೆ ಹೆಚ್ಚಿದೆ, ಹೀಗೆ ಅನೇಕ ವಿಧವಾದ ಕಷ್ಟವಿದೆ. ರೈತರಲ್ಲಿ ಈ ದಿವಸ ಒಂದು ವಿಧವಾದ ಅಸಮಾಧಾನವಿದೆ, ಡಿಸ್ಪ್ಯಾರಿಟಿ ಇದೆ. ಆದರೂ ವ್ಯವಸಾಯಕ್ಕೆ ಬೇಕಾದಷ್ಟು ಉತ್ತೇಜನವಿದೆ. ಹೀಗಿರುವಾಗ ಏಕೆ 17 ಲಕ್ಷ ಎಕರೆ ಜಮೀನು ಬಂಜರಿದೆ ಎಂಬುದನ್ನು ಸಮಿತಿಯವರು ವಿಮರ್ಶೆ ಮಾಡಬೇಕು ಎಂದು ಪುನಃ ಒತ್ತಿ ಹೇಳುತ್ತೇನೆ.

ಈ ದಿವಸ ಇಂಗ್ಲೆಂಡು ನಮಗೆ ಗೊತ್ತಿರುವ ಹಾಗೆ ಕೈಗಾರಿಕಾ ದೇಶವಾಗಿದೆ. ಅಲ್ಲಿ ಸೇಕಡ 80—90 ರಷ್ಟು ಬೇಕಾದ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು. ಯುದ್ಧ ಕಾಲದಲ್ಲಿ ಆಮದು ಮಾಡಿಕೊಳ್ಳುವುದಕ್ಕೆ ಬಹಳ ಕಷ್ಟವಾದಾಗ ಒಂದು ಆಕ್ಟ್ ಜಾರಿಗೆ ತಂದರು. ವ್ಯವಸಾಯಕ್ಕೆ ಸಂಬಂಧಪಟ್ಟ ಒಂದು ಆಕ್ಟ್ ಜಾರಿ ಮಾಡಿ ಬಹಳ ಮುಖ್ಯವಾದ ಒಂದು ಕಲಮನ್ನು ಹೇಳಿದ್ದಾರೆ. ಧಾರಣೆಯನ್ನು ಅವರು ಗ್ಯಾರಂಟಿ ಮಾಡಿದ್ದಾರೆ. ಇಷ್ಟು ವರ್ಷಕಾಲ ವ್ಯವಸಾಯಗಾರರಿಗೆ ಎಂಥ ಕಷ್ಟಕಾಲ ಬಂದರೂ ಅಥವಾ ಎಂಥ ಆರ್ಥಿಕ ಪರಿಸ್ಥಿತಿ ಪ್ರಾಪ್ತವಾದರೂ ಗ್ಯಾರಂಟಿ ಕೊಡುತ್ತೇವೆಂದು ಒಂದು ಆಕ್ಟ್ ಪ್ರಕಾರ ತಿಳಿಸಿದ್ದಾರೆ. ಅದನ್ನು ನೋಡಿ ಬಹಳ ಆಶ್ಚರ್ಯವಾಯಿತು. ಐದು ವರ್ಷದಲ್ಲಿ ಸುಮಾರು ಸೇಕಡ 60 ಭಾಗ ಉತ್ಪತ್ತಿಯು ಹೆಚ್ಚಿದೆ, ಅದಕ್ಕೆ ಆ ಆಕ್ಟೇ ಕಾರಣವಿರಬೇಕು. ಇಂಥ ದೊಡ್ಡ ಸಮಸ್ಯೆಯನ್ನು ಈಗ ಎದುರಿಸಬೇಕಾಗಿದೆ. ನಮ್ಮ ದೇಶದಲ್ಲಿ ಆಹಾರದ ಕೊರತೆಯಿದೆ. ಆಹಾರಕ್ಕೆ ಎಷ್ಟು ಪ್ರಾಮುಖ್ಯತೆ ಕೊಡುತ್ತೇವೆಯೋ ಬಾಕಿ ಸಮಸ್ಯೆಗಳಿಗೂ ಅಷ್ಟೇ ಪ್ರಾಮುಖ್ಯತೆ ಕೊಡಬೇಕು. ಈ ದಿವಸ ಪರಿಸ್ಥಿತಿ ಇನ್ನೂ ಹಾಳಾಗುವ ಸ್ಥಿತಿ ಇದೆ. ಆದ್ದರಿಂದ ಸರ್ವರೂ ಇದನ್ನು ಸ್ನೇಹ ಸಹಕಾರಗಳಿಂದ ಬಗೆಹರಿಸಬೇಕೇ ಹೊರತು ಬರೀ ಕಾನೂನಿನಿಂದ ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣ ಕಂಡು ಹಿಡಿದು ಸರ್ವಸಮ್ಮತವಾಗಿ ಸೆಲೆಕ್ಟ್ ಸಮಿತಿಯವರು ಒಂದು ನಿರ್ದಿಷ್ಟ ತೀರ್ಮಾನ ಮಾಡಬೇಕು.

ಅದಲ್ಲದೆ ಈ ಮಸೂದೆಯು ಎಷ್ಟು ದೂರ ಹೋಗಬೇಕೋ ಅಷ್ಟು ದೂರ ಹೋಗಿಲ್ಲ. ಉದಾಹರಣೆಗೆ ಇಂಡಿಯಾ ಸರ್ಕಾರದ ವ್ಯವಸಾಯ ಇಲಾಖೆಯವರು ಒಂದು ಪ್ರೆಸ್ ಕಮ್ಯೂನಿಕ್ ಹೊರಡಿಸಿದ್ದಾರೆ. ಅದೇನೂ ಹೊಸದಲ್ಲ, ಇನ್ನು ಕೆಲವು ಆಕ್ಟುಗಳಲ್ಲಿ ಈ ರೀತಿ ಹೇಳಿದೆ :—

"The C. P. Cultivation of Fallow Lands Act (1948).—According to the provision of the Act farmers owning more than 49 but less than 100 acres of land must bring 10% of the fallow land under cultivation and those who possess 100 acres of land or more must cultivate 20% of the fallow land. Severe penalties have been prescribed for contravention of the Act.

The U. P. Land Utilisation Act (1947).—The Act empowers the Collector of a District to requisition for purposes of cultivation land lying fallow under certain prescribed conditions."

ಮಧ್ಯ ಪ್ರದೇಶದಲ್ಲಿ ಕಾನೂನು ಇದ್ದರೂ ಕೂಡ ಏನೂ ಪ್ರಯೋಜನವಾಗಲಿಲ್ಲ, ಆದ್ದರಿಂದ ಮತ್ತೆ ಕಾನೂನು ತಿದ್ದುಪಡಿ ಮಾಡಿದ್ದಾರೆ. ಅದಕ್ಕೆ ಕಾರಣ ಹೀಗಿದೆ :—

"Madhya Pradesh Cultivation of Fallow Lands.—The Madhya Pradesh Government have enforced compulsory cultivation of fallow land in the State through an amendment to the Central Provinces and Berar Cultivation of Fallow Lands Act, 1948.

The Madhya Pradesh Cultivation of Fallow Lands (Amendment) Act, 1950, which has been promulgated now was necessitated as the Government found that only a little over three lakhs of acres of fallow land were brought under cultivation out of a total area of 76 lakhs of acres of fallow land in the State after the passing of the original Act in 1948."

ಆದ್ದರಿಂದ ನನ್ನ ಅಭಿಪ್ರಾಯದಲ್ಲಿ ಈ ಮಸೂದೆಯನ್ನು ತಂದಿರುವುದು ಬಹಳ ಸಮಂಜಸವಾಗಿದೆ.

ಆದುದರಿಂದ ನನ್ನ ಅಭಿಪ್ರಾಯದಲ್ಲಿ ಈ ಮಸೂದೆಯನ್ನು ತಂದಿರುವುದು ಬಹಳ ಸಮಂಜಸವಾಗಿದೆ. ಒಂದುವೇಳೆ ಇದನ್ನು ಜಾರಿಮಾಡುವುದರಲ್ಲಿ ಏನಾದರೂ ಕಷ್ಟಗಳು, ಅಡಚಣೆಗಳು ಬರಬಹುದು. ಇದನ್ನೆಲ್ಲಾ ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ವಿಮರ್ಶೆ ಮಾಡಬಹುದು. ಇದರ ಜೊತೆಗೆ ವ್ಯವಸಾಯಕ್ಕೆ ಉತ್ತೇಜಕವಾದ ಬೇರೆ ಇನ್ನಾವ ಕಾನೂನುಗಳು ಆಗಬೇಕೆಂದು ಕಂಡುಬರುತ್ತದೆಯೋ ಅದನ್ನೂ ಯೋಚಿಸಿ ಜಾರಿಗೆ ತಂದು ವ್ಯವಸಾಯಕ್ಕೆ ಉತ್ತೇಜನ ಕೊಡಬೇಕೆಂದು ಹೇಳಿ, ಈ ಮಸೂದೆಯನ್ನೂ ಸೂಚನೆಯನ್ನೂ ಸಮರ್ಥಿಸುತ್ತೇನೆ.

Sri G. A. ACHARYA (Bangalore District–General).—Can the Government guarantee the fixity of prices to agricultural produce?

Sri T. MARIAPPA.—He is making a suggestion that a separate bill may be brought forward.

Sri H. B. GUNDAPPA GOWDA.—There was a committee appointed in 1944 under the Chairmanship of Sri V. T. Krishnamachari about the fixity of prices for agricultural produce. I do not know what happened to it. Of course, that is a different matter.

ಈ ಮಸೂದೆ ಬಹು ಸುಲಭವಾದದ್ದೂ ಅನುಕೂಲವಾದದ್ದೂ ಆಗಿರುವ ಹಾಗೆ ಕಾಣುತ್ತದೆ. ಆದರೆ ಇದರಿಂದ ಸರ್ಕಾರದವರ ಉದ್ದೇಶ ಸಫಲವಾಗುವಂತೆ ಕಾಣುವುದಿಲ್ಲ. ಏಕೆಂದರೆ, ನಮ್ಮಲ್ಲಿ ಲೆಕ್ಕ ಹಾಕಿದರೆ, ಬಹು ಮಂದಿ absentee landlords ಇದ್ದಾರೆ. ನಮ್ಮ

(SRI H. B. GUNDAPPA GOWDA.)

ದೇಶದಲ್ಲಿ absentee landlords ನ್ನು ಎಷ್ಟು discourage ಮಾಡಿದರೆ ಅಷ್ಟು ಒಳ್ಳೆಯದು. ಅವರು ಎಷ್ಟೋ ವಾಸವಾಗಿಕೊಂಡಿರುತ್ತಾರೆ, ಎಷ್ಟೋ ಜಮೀನು ಕೊಂಡುಕೊಂಡಿರುತ್ತಾರೆ. ಇಂಥವರು ವರ್ಷಕ್ಕೊಮ್ಮೆ ಕಂದಾಯ ಕೊಡುತ್ತಾರೆ, ತಮ್ಮ ಜಮೀನು ಪಾಳುಬಿದ್ದರೂ ಅವರಿಗೆ ಚಿಂತೆಯಿಲ್ಲ. ಇಂಥವರ ಜಮೀನನ್ನು ವ್ಯವಸಾಯಮಾಡದೆ ಪಾಳು ಬಿದ್ದರೆ ಈ ಮಸೂದೆಯ ಮೂಲಕ ಸರ್ಕಾರದವರೇ ಅವರ ಅನುಕೂಲಕ್ಕಾಗಿ ಒಬ್ಬ ಏಜೆಂಟನ್ನು ಕೊಟ್ಟ ಹಾಗಾಗುತ್ತದೆ. ಅಮಲ್ದಾರರನ್ನು ಅವರ ಸಹಾಯಕ್ಕಾಗಿ ಅವರ ಪರವಾಗಿ ಒಬ್ಬರು ಏಜೆಂಟ್ ಮಾಡಿದ ಹಾಗಾಯಿತು. ಅವರಿಗೆ ಬರುವ ಆದಾಯ ಬಂದೇ ಬರುತ್ತದೆ.

The Hon'ble Sri K. T. BHASHYAM.—But they do not get such produce as they would have got if they had cultivated.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಅವರ ಅನಾದರಣೆಯೇ ಕಾರಣ. ಆದರೆ ಯಾರಾದರೂ ಒಬ್ಬರು ಬಂದು ತಮ್ಮ ಜಮೀನನ್ನು ವ್ಯವಸಾಯಮಾಡಿಯೇ ಮಾಡುತ್ತಾರೆಂದು ಖಾತ್ರಿಯಾಯಿತು.

The Hon'ble Sri K. T. BHASHYAM.—The country benefits.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—I am entering into a deeper point there.

ಅಂಥವರ ಜಮೀನನ್ನು ಬೇರೆ ಯಾರೂ ವ್ಯವಸಾಯ ಮಾಡದಿದ್ದರೆ ರೆವೆನ್ಯೂ ಇಲಾಖೆಯವರೇ ಅದನ್ನು ವ್ಯವಸಾಯಮಾಡಿಸುತ್ತಾರೆ ಎಂದಿದೆ. ಒಂದು ವಿಚಾರ ನಾನು ಹೇಳುತ್ತೇನೆ. ಅಮಲ್ದಾರರು ಹೋದಮಾತ್ರಕ್ಕೇ ರೈತರು ಆ ಜಮೀನನ್ನು ವ್ಯವಸಾಯಮಾಡಲು ಮುಂದೆ ಬರುತ್ತಾರೆಂದು ನಂಬಬೇಡಿ. ರೈತ ತನ್ನ ಸ್ವಂತ ಜಮೀನಾದರೆ ಅದನ್ನು ವ್ಯವಸಾಯಮಾಡಲು ಅವನಿಗೆ ಎಷ್ಟೋ ಉತ್ಸಾಹವಿರುತ್ತದೆ, ಶ್ರದ್ಧೆ ಇರುತ್ತದೆ. ಅದು ಬಿಟ್ಟು ಹೀಗೆಮಾಡಿದರೆ ಏನು ಪ್ರಯೋಜನ? ಇಂತಹ half-way methods ನಿಂದ ಏನೂ ಸುಖವಿಲ್ಲ. ಏನುಮಾಡಬೇಕೆಂದರೆ ಯಾರೇ ಆಗಲಿ ತಮ್ಮ ಜಮೀನನ್ನು ನಾಲ್ಕೈದು ವರ್ಷ ವ್ಯವಸಾಯಮಾಡದೇಯಿದ್ದರೆ ಆ ಜಮೀನನ್ನು ಸರ್ಕಾರದವರು 'ರೆಸ್ಯೂಂ' ಮಾಡಿಕೊಳ್ಳಬೇಕು. ಹಾಗೆ ಮಾಡಿ ಅದನ್ನು ಯಾರಿಗೆ ಜಮೀನಿಲ್ಲವೋ ಅವರಿಗೆ ಕೊಡಿ. The Government have got power to acquire lands. ಅಂತಹ ಜಮೀನನ್ನು ಅಕ್ವೈರ್ ಮಾಡಿಕೊಳ್ಳಿ. ಐದುವರ್ಷ ಕಾಲಾವಕಾಶ ಕೊಡಿ. ಏಕೆ ವ್ಯವಸಾಯಮಾಡಲಿಲ್ಲ, ಯಾರಾದರೂ ಮೈನರ್‌ಗಳ ದ್ವಾರೆಯೇ, ಸೈನ್ಯದಲ್ಲಿ ಕೆಲಸಮಾಡುವವರಿಗೆ ಸೇರಿದ್ದೆ ಎಂಬುದನ್ನೆಲ್ಲಾ ನೋಡಿ ಅಂತಹ ಸಂದರ್ಭಗಳಲ್ಲಿ ವಿನಾಯಿತಿ ಕೊಡಬಹುದು. ಇಂತಹ ಏನೂ ಕಾರಣವಿಲ್ಲದೆ ಯಾವಾಗ ಐದುವರ್ಷಕಾಲ ವ್ಯವಸಾಯ ಮಾಡಲಿಲ್ಲವೋ ಆಗ ಅದನ್ನು ಅಕ್ವೈರ್‌ಮಾಡಿ ವ್ಯವಸಾಯ ಮಾಡತಕ್ಕ ಜಮೀನಿಲ್ಲದವರಿಗೆ ಕೊಡಿ. You can give exemptions if there are real reasons.

The Hon'ble Sri K. T. BHASHYAM.—Put it in the Select Committee.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಎಷ್ಟೋ ಕಡೆ ಜನ ತಮಗೆ ವ್ಯವಸಾಯಕ್ಕೆ ಜಮೀನೇ ಇಲ್ಲದೆ ತೊಂದರೆ ಪಡುತ್ತಿದ್ದಾರೆ. ಅಂಥವರಿಗೋಸ್ಕರ absentee landlords ನಿಂದ ಬೇಕಾದಷ್ಟು ಅಕ್ವೈರ್ ಮಾಡಿಕೊಡಿ.

Sri H. K. VEERANNA GOWDA (Mandya District—General).—The present Bill is the first step towards that end.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಇದೇನೂ ಮೊದಲನೆ ಹಂತವಲ್ಲ, ಹೊಸದಲ್ಲ. ಯುದ್ಧ ಕಾಲದಲ್ಲಿ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಪ್ರಕಾರ ಬೊಂಬಾಯಿ ಸರ್ಕಾರದವರು ಮಾಡಿದ್ದರು. ಇದು ಯುದ್ಧಕಾಲದ ಕಾರ್ಯಕ್ರಮವಾಗಿ 1943ನೆಯ ಇಸವಿಯಿಂದಲೇ ಪ್ರಾರಂಭವಾಗಿದೆ, ಆದರೆ ಇದರಿಂದ ಏನೂ ಒಳ್ಳೆಯ ಪರಿಣಾಮವಾಗಿಲ್ಲ. ಆದುದರಿಂದ the only solution is to take away that land which is not utilised by the owner. Then things will be all right. Land will be cultivated to the utmost extent.

The Hon'ble Sri T. MARIAPPA.—It is a socialistic piece of legislation!

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಹಾಗಲ್ಲ, ಒಬ್ಬ ಎಷ್ಟಾದರೂ ಜಮೀನನ್ನಿಟ್ಟುಕೊಳ್ಳಲಿ. ಅದರಲ್ಲಿ ವ್ಯವಸಾಯ ಮಾಡುತ್ತಾನೆಯೋ ಇಲ್ಲವೇ ಎಂಬುದನ್ನು ನೋಡಬೇಕು. ಕೆಲವರು ಹೇಳಿದಂತೆ, ಜಮೀನು ರಾಷ್ಟ್ರೀಕರಣ ಮಾಡಿದರೆ ಹಿಂದೂ ಪದ್ಧತಿಯನ್ನೇ ಎಂದರೆ ಹಿಂದೂ ಕಾನೂನನ್ನೇ ಬದಲಾಯಿಸಬೇಕಾಗುತ್ತದೆ. ಸೆಲೆಕ್ಟ್ ಸಮಿತಿಗೆ ಈ ಮಸೂದೆ ಹೋದಾಗ ನಾನು ಹೇಳಿರುವ ಸೂಚನೆಯನ್ನೂ ಚರ್ಚೆಮಾಡುವುದಕ್ಕೆ ಅವಕಾಶವಿದೆಯೆಂದು ಸರ್ಕಾರದವರು ಒಪ್ಪಿಕೊಂಡರೆ ಸಾಕು.

ಶ್ರೀ ಎಚ್. ಸಿ. ಲಿಂಗಾರೆಡ್ಡಿಯವರು (ಕೋಲಾರ ಜಿಲ್ಲೆ).—ಮಾನ್ಯ ಅಧ್ಯಕ್ಷರೆ, ವ್ಯವಸಾಯವಿಲ್ಲದೇ ಇರುವ ಜಮೀನುಗಳನ್ನು ಸಾಗುವಳಿಗೆ ಕೊಡುವುದಕ್ಕೆ ಸಂಬಂಧಪಟ್ಟ ಈ ಮಸೂದೆಯ ವಿಚಾರವಾಗಿ ನಾನು ಕೆಲವು ಅಂಶಗಳನ್ನು ಹೇಳುತ್ತೇನೆ. ಈ ವಿಷಯದಲ್ಲಿ ನಾನು ಒಂದು ಠರಾವನ್ನು ಕಳುಹಿಸಿದ್ದೇನೆ. ಅದು 41ನೆಯ ಠರಾವು, ಈ ರೀತಿ ಇದೆ:

> "This Assembly is of the opinion that with a view to step up food production and tide over the food crisis, a detailed survey of uncultivated cultivable lands be made and an extensive scheme of collective co-operative and State farming be launched in the State of Mysore."

ಈಗ ಶ್ರೀಮಾನ್ ಗುಂಡಪ್ಪಗೌಡರು ಮತ್ತು ಸಿದ್ಧವೀರಪ್ಪನವರು ಮುಂತಾದ ಸ್ನೇಹಿತರ ಹೇಳಿದುದನ್ನು ನೋಡಿದರೆ, ಸರ್ಕಾರದವರು ತಂದಿರತಕ್ಕ ಈ ಮಸೂದೆ ನಪ್ಪೆಯಾಗಿದೆ, ಅಷ್ಟು ಮುಂದೆ ಹೋಗಿಲ್ಲವೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಾನ್ಯ ಸಚಿವರೂ ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಒಂದು ಪ್ರಶ್ನೆಗೆ ಉತ್ತರವಾಗಿ ನಮ್ಮ ದೇಶದಲ್ಲಿ 17 ಲಕ್ಷ ಎಕರೆ ಜಮೀನು ಪಾಳು ಬಿದ್ದಿದೆ, ಇದನ್ನು ಸಾಗುವಳಿಗೆ ತರಬಹುದಾಗಿತ್ತು, ಆದರೆ ಆಗಿಲ್ಲ ಎಂದು ತಿಳಿಸಿದ್ದಾರೆ. ಅನೇಕ ಪಾಶ್ಚಾತ್ಯ ದೇಶಗಳು ಜಿರಾಯತಿ ದೇಶಗಳಲ್ಲ. ನಮ್ಮ ದೇಶ ಜಿರಾಯತಿ ದೇಶ. ಆಗಿದ್ದರೂ ಕೂಡ ನಮಗೆ ಬೇಕಾಗಿರುವ ಆಹಾರಧಾನ್ಯವನ್ನು ಈ ಹೊತ್ತು ರಷ್ಯ, ಇಟಲಿ, ಅಮೇರಿಕ, ಬರ್ಮ ಮುಂತಾದ ದೇಶಗಳಿಂದ ತರಬೇಕಾಗಿರುವ ಪರಿಸ್ಥಿತಿಯನ್ನು ನೋಡಿದರೆ

ನಾವು ಆಹಾರ ಬೆಳೆಯುವ ವಿಚಾರದಲ್ಲಿ ಎಷ್ಟು ಮುಂದೆ ಹೋಗಬೇಕಾಗಿದೆ ಎಂಬುದು ಗೊತ್ತಾಗುತ್ತದೆ. ನಮ್ಮ ದೇಶದ ಜನರು ಇನ್ನೂ ಹಿಂದಿನ ಕಾಲದ ವ್ಯವಸಾಯ ಪದ್ಧತಿಗಳನ್ನೇ ಇಟ್ಟುಕೊಂಡು ನಮ್ಮ ಜಮೀನುಗಳಲ್ಲಿ ಎಷ್ಟು ಬೆಳೆಯಬಹುದೋ ಅಷ್ಟನ್ನು ಬೆಳೆಯುತ್ತಿಲ್ಲ. ಬಹಳ ಜಮೀನು ಪಾಳು ಬಿದ್ದಿವೆ. ಅವನ್ನು ಯಾವ ರೀತಿ ಉಳುಮೆಮಾಡಿ ಹೆಚ್ಚು ಆಹಾರ ಬೆಳೆಯಬೇಕೆಂಬ ವಿಚಾರಕ್ಕೆ ಗಮನಕೊಡುವುದು ಬಹು ಮುಖ್ಯವಾದ ವಿಷಯವಾಗಿದೆ.

ಜೋಡಿಗ್ರಾಮಗಳು ಕೋಲಾರ ಮತ್ತು ಇನ್ನೂ ಅನೇಕ ಜಿಲ್ಲೆಗಳಲ್ಲಿ ವಿಶೇಷವಾಗಿವೆ. ಅಲ್ಲಿ ಜಮೀನುಗಳನ್ನು ಉಳುಮೆ ಮಾಡಿ ಹೆಚ್ಚು ಬೆಳೆ ಬೆಳೆಯುವುದಕ್ಕೆ ಸಾಕಾದಷ್ಟು ಗಮನಕೊಡುತ್ತಾ ಇಲ್ಲ ಎಂದು ಗೊತ್ತಾಗುತ್ತಾ ಇದೆ. ಕಾರಣವೇನೆಂದರೆ ಆ ಜಮೀನುಗಳನ್ನು ಜೋಡಿದಾರರಿಂದ ಮತ್ತು ಜೋಡಿ ರೈತರಿಂದ ಸರ್ಕಾರದವರು ತೆಗೆದುಕೊಂಡು ಯಾವಾಗ ಅವರನ್ನು ಓಡಿಸುತ್ತಾರೋ ಎಂಬ ಉದ್ದೇಶದಿಂದ ಹೆಚ್ಚು ಮುತುವರ್ಜಿ ವಹಿಸುತ್ತಾ ಇಲ್ಲ. ಈಗ ಜಮೀನುಗಳು ಅನೇಕ ಕಡೆ ಉಳುಮೆ ಆಗದೆ ಹಾಗೇ ಬಿದ್ದಿವೆ. ಇನ್ನು ಅನೇಕ ಕಡೆ ನಮ್ಮ ಮಿತ್ರರು ಹೇಳಿದಂತೆ (Absentee landlords) ಜಮೀನಿರತಕ್ಕವರು ಪಟ್ಟಣಗಳಿಗೆ ಬಂದು ಆ ಕಡೆ ಹೆಚ್ಚು ಗಮನ ಕೊಡುತ್ತಿಲ್ಲ. ಆದ್ದರಿಂದ ಈ ಮಸೂದೆ ಬಹಳ ಅವಶ್ಯಕವಾಗಿದೆ. ಇದರಲ್ಲಿ ಮೂರು ವರ್ಷಗಳ ಕಾಲ ಪಾಳುಬಿದ್ದಿರುವ ಜಮೀನನ್ನು ಸಾಗುವಳಿಗೆ ತರುವ ಅಂಶವನ್ನು ನಮೂದಿಸಿದೆ. ಮೂರು ವರ್ಷಗಳವರೆಗೆ ಏಕೆ ಕಾಯಬೇಕೋ ಗೊತ್ತಿಲ್ಲ. ಒಂದು ವರ್ಷ ಅಥವಾ 6 ತಿಂಗಳು ಜಮೀನು ಸಾಗುವಳಿ ಆಗದಿದ್ದರೆ ಅದನ್ನು ಸೇರಿಸಿಕೊಳ್ಳುವುದು ಬಹಳ ಅಗತ್ಯವಾಗಿದೆ. ಇನ್ನೊಂದು ಏನೆಂದರೆ 10 ಎಕರೆ ತರಿ, 15 ಎಕರೆ ಖುಷ್ಕಿ ಎಂದು ಹೇಳಿದ್ದೀರಿ. ಅದಕ್ಕೆ ಹೆಚ್ಚು ಇರತಕ್ಕ ಜಮೀನುದಾರರಿಗೆ ಇದು ಅನ್ವಯಿಸುತ್ತದೆ. ಎಂದರೆ 10 ಎಕರೆ ತರಿ, 15 ಎಕರೆ ಖುಷ್ಕಿ ಜಮೀನು ಇರತಕ್ಕವರು ಜಮೀನನ್ನು ಹಾಗೇ ಇಟ್ಟುಕೊಳ್ಳಬಹುದು ಎಂದು ಅರ್ಥವಾಗುವುದಕ್ಕೆ ಕಾರಣವಿದೆ. Absentee landlords ಆಗಿ ಪಟ್ಟಣಗಳಿಗೆ ಹೋಗಿ ಸೇರಿಕೊಂಡಿರುವವರೂ 10 ಎಕರೆ ತರಿ, 15 ಎಕರೆ ಖುಷ್ಕಿ ಜಮೀನು ಸಾಗುವಳಿ ಮಾಡದೆ ಇಟ್ಟುಕೊಂಡಿರಬಹುದು ಎಂದು ಅರ್ಥವಾಗಿರುವುದರಿಂದ ಅದಕ್ಕೆ ತಕ್ಕ ಗಮನ ಕೊಟ್ಟು ಸೆಲೆಕ್ಟ್ ಸಮಿತಿಯವರು ಸೂಕ್ತವಾದ ಬದಲಾವಣೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಇಷ್ಟು ಹೇಳಿ ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಈ ಮಸೂದೆಯ ಉದ್ದೇಶ ಒಳ್ಳೆಯದು, ಸರಿ. ಆದರೆ ಶಾಸನ ರೂಪವಾಗಿ ಈ ಕೆಲಸ ಮಾಡಬೇಕಾಗಿ ಬಂತಲ್ಲಾ ಎಂದು ನನಗೆ ವ್ಯಸನವಾಗುತ್ತದೆ. ದೇಶದಲ್ಲಿ ಇನ್ನೂ ಆಹಾರ ಇಲ್ಲವೇ ಇಲ್ಲ ಎಂದು ಹೇಳುವ ಹಾಗೆ ಇರುವ ಕಾಲದಲ್ಲೂ ಕೂಡ ಅನೇಕ ಬಂಜರು ಭೂಮಿಗಳಿರತಕ್ಕದ್ದು ಎಂದಿಗೂ ದೇಶಕ್ಕೆ ಹಿತಕರವಾದುದಲ್ಲ. ರೈತ ಇದು ನನ್ನ ಕಾರ್ಯ, ನನ್ನ ದೇಶದ ಸೇವೆ, ನಾನು ಭೂಮಿಯನ್ನು ಸಾಗುವಳಿ ಮಾಡಿ ದೇಶಕ್ಕೆ ಅನ್ನ ನೀಡಬೇಕು ಎಂದು ಧರ್ಮಬುದ್ಧಿಯಿಂದ ಕೆಲಸ ಮಾಡಬೇಕಾದ್ದು ನ್ಯಾಯ. ಅದು ಬಿಟ್ಟು ಶಾಸನದಿಂದ ಈ ಕೆಲಸ ಮಾಡಿಸಬೇಕಾಗಿ ಬಂದದ್ದು ನಿಜವಾಗಿಯೂ ಕ್ಷೇಮವಾದುದಲ್ಲ. ಆದರೂ ಕೂಡ ಇದರ ಉದ್ದೇಶ ಒಳ್ಳೆಯದಾಗಿದೆ. ಆ ಉದ್ದೇಶಕ್ಕೋಸ್ಕರ ಈ ಮಸೂದೆಯನ್ನು ನಾನು ಸ್ವಾಗತಿಸಬೇಕಾಗಿದೆ. ಸೆಲೆಕ್ಟ್ ಸಮಿತಿಗೆ ಹೋದಾಗ ಈ ವಿಚಾರಗಳನ್ನು ಅವರ ಗಮನಕ್ಕೆ ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ. ಜಮೀನು ಪಾಳು ಬೀಳುವುದಕ್ಕೆ ಕಾರಣವೇನು? ಅನೇಕ ಕಾರಣಗಳಿವೆ. ಸರಿಯಾದ ಪ್ರತಿಫಲ ದೊರೆಯದೆ ಜಮೀನು ಸಾಗುವಳಿ ಮಾಡದೇ ಹೋಗಬಹುದು. ಅಥವಾ Absentee landlords ಗಳ ದೆಸೆಯಿಂದ ಜಮೀನನ್ನು ಇತರರು ತೆಗೆದುಕೊಂಡು ನಿರ್ಲಕ್ಷ್ಯ ಮಾಡಿ ಜಮೀನು ಸಾಗುವಳಿ ಆಗದೇ ಹೋಗಬಹುದು. ಮೊನ್ನೆ ಮದರಾಸು ನ್ಯಾಯವಿಧಾಯಕ ಸಭೆಯಲ್ಲಿ ಇದೇ ವಿಚಾರ ಚರ್ಚೆ ಮಾಡಿದಾಗ ಅಲ್ಲಿನ ಆಹಾರ ಮಂತ್ರಿಗಳು ಈಗಿನ ಪ್ರೊಕ್ಯೂರ್‌ಮೆಂಟ್ ಪಾಲಿಸಿಯಿಂದಲೂ ಕೂಡ ರೈತರು ಹೆಚ್ಚು ಶ್ರದ್ಧೆಯಿಂದ ಸಾಗುವಳಿ ಮಾಡದೇ ಜಮೀನು ಪಾಳುಬಿದ್ದಿದೆ ಎಂದು ಹೇಳಿರುತ್ತಾರೆ. ಆದರೆ ಈ ಮಸೂದೆ ಜಾರಿಗೆ ಬರುವುದರಿಂದ ಕೆಲವು ಕಾಲ ಪಾಳು ಭೂಮಿ ಇನ್ನೂ ಜಾಸ್ತಿ ಆದರೂ ಆದೀತು ಎಂದು ನನಗೆ ಅನ್ನಿಸುತ್ತದೆ. Absentee landlords ಜಮೀನು ಸಾಗುವಳಿ ಮಾಡದೇ ಹೇಗೆ ಒಂದು ಗುಂಪಾಗಿದ್ದಾರೋ ಅದೇ ರೀತಿ ರೈತರು ಒಂದು ಗುಂಪಾಗಿ ನಾವು ಹೇಳತಕ್ಕ ದರದಲ್ಲಿ ಕೊಟ್ಟರೇ ಸಾಗುವಳಿ ಮಾಡುತ್ತೇವೆ ಇಲ್ಲವೇ ಇದ್ದರೆ ಇಲ್ಲ ಎಂದು ಹೇಳಿ ಅವರು ಹಾಕತಕ್ಕ ಷರತ್ತುಗಳು ಲಭಿಸುವವರೆಗೂ ಕೆಲವು ಕಾಲ ಜಮೀನು ಪಾಳು ಬಿಡಬಹುದು. ಆ ದೃಷ್ಟಿಯಿಂದ ನೋಡಿದರೆ ಶ್ರೀಮಾನ್ ಗುಂಡಪ್ಪಗೌಡರು ಹೇಳಿದ ಹಾಗೆ 5 ವರ್ಷ ಅಥವಾ 6 ವರ್ಷ ಕಾಲ ಉತ್ತಮವಾದ ಜಮೀನು ಪಾಳುಬಿದ್ದರೆ ಅದನ್ನು ಸರ್ಕಾರದ ವಶಪಡಿಸಿಕೊಳ್ಳುವುದು ಉತ್ತಮವಾಗಿ ಕಾಣುತ್ತದೆ. ವಶಪಡಿಸಿಕೊಂಡ ಜಮೀನಿಗೆ ಏನಾದರೂ ಪರಿಹಾರ ಕೊಡಬೇಕು ಎನ್ನುವುದು ಕಾಂಗ್ರೆಸ್ಸಿನ ನೀತಿ, ಅದು ರಾಜ್ಯಾಂಗದಲ್ಲಿಯೇ ಅಡಕವಾಗಿದೆ. ಅದರಂತೆ ಸರ್ಕಾರದವರು ಕೊಡುತ್ತಾರೆ. ಆದ್ದರಿಂದ ಆ ವಿಚಾರ ಅಷ್ಟಾಗಿ ಬರುವುದಿಲ್ಲ. ಮದರಾಸಿನಲ್ಲಿ ಸರ್ಕಾರದವರು ಇದನ್ನು ಸರ್ಕಾರಿ ಹುಕುಂ ಮೂಲಕ ಜಾರಿಗೆ ತಂದಿದ್ದಾರೆ. ಇಲ್ಲಿ ಅಮಲ್ದಾರರಿಗೆ ಕೊಟ್ಟಿರತಕ್ಕ ಅಧಿಕಾರವನ್ನು ಅಲ್ಲಿ ಕಲೆಕ್ಟರಿಗೆ ಕೊಟ್ಟಿದ್ದಾರೆಯೇ ಹೊರತು ತಹಸೀಲ್‌ದಾರರಿಗೆ ಕೊಟ್ಟಿಲ್ಲ. ಅದೇ ರೀತಿ ನಾವೂ ಕೂಡ ಡೆಪ್ಯುಟಿ ಕಮೀಷನರಿಗೆ ಅಧಿಕಾರ ಕೊಡಬೇಕೆಂದು ನಾನು ಒಂದು ತಿದ್ದುಪಡಿಯನ್ನು ಸೂಚಿಸಿದ್ದೇನೆ. ಇದು ಸೆಲೆಕ್ಟ್ ಸಮಿತಿಗೆ ಹೋಗುವುದರಿಂದ ಅವರು ಈ ವಿಚಾರಗಳನ್ನೆಲ್ಲಾ ದೀರ್ಘವಾಗಿ ಪರಿಶೀಲಿಸಿ ಮುಂದಿನ ಸಭೆಯಲ್ಲಿ ಇದನ್ನು ತರುತ್ತಾರೆಂದು ಭಾವಿಸಿ ಈ ಮಸೂದೆಯನ್ನು ಅನುಮೋದಿಸುತ್ತೇನೆ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮಾನ್ಯ ಅಧ್ಯಕ್ಷರೇ, ಮಾನ್ಯ ಸ್ನೇಹಿತರಾದ ಶ್ರೀಮಾನ್ ಗುಂಡಪ್ಪಗೌಡರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಬೇಕಾಗಿತ್ತು ಎಂದು ತಿಳಿಸಿರುವುದು ಬಹಳ ಸಂತೋಷಕರವಾದ ವಿಷಯ. ಸೂಕ್ತವಾದ ಯಾವ ಬದಲಾವಣೆಯನ್ನು ಮಾಡಬಹುದೋ ಅದನ್ನು ಸೆಲೆಕ್ಟ್ ಸಮಿತಿಯಲ್ಲಿ ಮಾಡಬಹುದಾಗಿದೆ. ಈಗ ಮಾನ್ಯ ಸಭೆಯಲ್ಲಿ ಎಲ್ಲ ಕಡೆಗಳಿಂದಲೂ ಬಂದಿರತಕ್ಕ ಸಲಹೆಗೂ ಮತ್ತು ಸಹಾಯಕ್ಕೂ ನಾನು ತುಂಬಾ ವಂದಿಸುತ್ತೇನೆ. ಸೆಲೆಕ್ಟ್ ಸಮಿತಿಗೆ ಹಾಕಬೇಕಾಗಿರತಕ್ಕ ಈ ಮಸೂದೆಯನ್ನು ಸಭೆಯವರು ಅಂಗೀಕಾರ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—The question is :

"That the Mysore Cultivation of Fallow Lands Bill, 1951, be referred to a Select Committee consisting of—

The Hon'ble Home Minister,
Rajamantrapravina H. B. Gundappa Gowda,
Sri L. Siddappa,
Sri S. Kariappa,
Sri H. M. Channabasappa,
Sri Mali Mariappa,
Sri G. Narayana Gowda,
Sri H. M Mallikarjunappa,
Sri M. C. Venkateshan,
Sri K. H. Mudiappa.
Sri M. L. Nanjaraj Urs,
Sri Kadidal Manjappa,
Sri H. K. Veeranna Gowda,
Sri Govinda Das,
Sri S. Ranga Rao,
Sri T. Ramachar, and
Sri S. Rangaramiah.

The motion was adopted.

Mysore House Rent and Accommodation Control Bill, 1951.

Motion to consider.

The Hon'ble Sri K. T. BHASHYAM (Minister for Law and Labour).—Sir, I beg to move :

"That the Mysore House Rent and Accommodation Control Bill, 1951, be taken into consideration."

Sir, the Bill has been published in the Gazette on the 12th January 1951 under Rule 36 of the Mysore Legislative Rules. In moving that the Bill be taken into consideration, I beg to bring to the notice of the Hon'ble Members the need for it. The House Rent and Accommodation Order has been in force since 1942. We passed an executive order by which we gave relief to tenants and the people who were in need of accommodation. Then we amended it in 1945 in the light of the experience gained. Then again in 1948 we passed the House Rent and Accommodation Control Order and that has been in force till now.

Hon'ble Members are aware that there has been public agitation that these cases should be handled by the judiciary rather than by the executive. At present the House Rent Controllers are in charge of these cases and the Deputy Commissioners also are in charge of accommodation orders. Against their orders, appeals lie to the Labour Commissioner. As you all know, there is only one Labour Commissioner in the State and all the appeals from all parts of the State should come to him. On his decision, revision lies to the Government. So far as power to make requisitions and fixation of fair rent are concerned, they will continue to rest in the Deputy Commissioner. Eviction cases and cases of providing amenities to the tenants will lie with the Munsiffs of the local areas. Against the orders alike of the Deputy Commissioner and of the Munsiffs, appeal will lie to the District Judges. Against the decision of the District Judge an aggrieved party may go in revision to the High Court. There is Section 23 according to which where Government take charge of a building there is no provision for appeal. Except that, all other cases are handled by the judiciary. The sooner this is given effect to, it is better. I have great pleasure in commending this Bill to the House. This is the 17th Bill and if this is disposed of, all the Legislative Business of this Assembly will have been disposed of. I commend this Bill for the consideration of the House.

Mr. SPEAKER.—Motion moved :

"That the Mysore House Rent and Accommodation Control Bill, 1951, be taken into consideration."

Sri V. S. NARAYANA RAO (Bangalore City—General).—I beg to move ;

"That the Mysore Hou e Rent and Accommodation Control Bill, 1951, be referred to a Select Committee consisting of the following members:—

Sri W. H. Hanumanthappa,
Sri M. N. Jois.
Sri G. Veerappa,
Sri Muddaramiah,
Sri B. M Shamanna Gowda,
Sri S. Ranga Rao,
Sri T. Ramachar,
Sri M. Madiah,
Sri B. C. Nanjundaiya,
Sri M. Muniswamy,
Sri K. Sampangiramiah and
The mover.

ರಾಜಮಂತ್ರಪ್ರವೀಣ ಶ್ರೀ ಎಚ್. ಬಿ. ಗುಂಡಪ್ಪ ಗೌಡರು (ಹಾಸನ ಜಿಲ್ಲೆ).—ನೀವೇನೋ ಇದರ ಪ್ರಕಾರ ಸಿವಿಲ್ ಕೋರ್ಟುಗಳಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಇದರಿಂದ ಇನ್ನೂ ಕೋರ್ಟ್ ವ್ಯಾಜ್ಯ (litigation) ಜಾಸ್ತಿಯಾಗುವ

ದಕ್ಕೆ ಕಾರಣವಾಯಿತೇ ಹೊರತು ಕೇಸುಗಳು ಬೇಗ ಇತ್ಯರ್ಥವಾಗುವುದಕ್ಕೆ ಅವಕಾಶವಾಗಲಿಲ್ಲ.

Of course, it goes to the Select Committee. But my point is, in a simple matter like this where the question of title is not involved, I think, the object of the Bill will not be fructified by referring cases to the courts because so much of litigation is encouraged. These things after all require some remedy. If the remedy is expeditious, I have no objection but if it is a case of going to the Civil Court and then to the District Court, you and I all know how things will proceed there.

ಮಾನ್ಯ ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಪ್ರಧಾನ ಸಚಿವರು).—ಜ್ಯುಡಿಷಿಯಲ್ ತೀರ್ಮಾನಕ್ಕೆ ಅವಕಾಶಮಾಡಿಕೊಡಬೇಕೆಂದು ಎಲ್ಲರೂ ಕೇಳುತ್ತಾರೆ!!

Rajamantrapravina H. B. GUNDAPPA GOWDA.—But that is exactly the difficulty.

ಇನ್ನೊಂದೇನೆಂದರೆ, ಮನೆಗಳನ್ನು ರಿಪೇರಿ ಮಾಡಿಸುವ ವಿಷಯ. ರೂಲ್ಸ್ ಪ್ರಕಾರ ಮನೆಯ ಮಾಲೀಕರುಗಳು ಕಾಲಕಾಲಕ್ಕೆ ಮನೆಗಳನ್ನು ರಿಪೇರಿ ಮಾಡಿಸಿಕೊಡಬೇಕೆಂದಿದೆ. ಅವರು ರಿಪೇರಿಮಾಡಿಸಿ ಕೊಡದೆ ಇದ್ದರೆ ಬಾಡಿಗೆಯುವರೇ ರಿಪೇರಿ ಮಾಡಿಸಿಕೊಳ್ಳಬಹುದು. ಆದರೆ ಅದಕ್ಕಾಗಿ ಅವರು ಖರ್ಚು ಮಾಡತಕ್ಕ ಹಣ ಒಂದು ತಿಂಗಳಿನ ಬಾಡಿಗೆಗೆ ಮೀರಿರಕೂಡದು ಎಂದು ಹೇಳಿದೆ. ಹೀಗೆ ಒಂದು ತಿಂಗಳ ಬಾಡಿಗೆಯಿಂದ ಏನು ರಿಪೇರಿಯಾದೀತು! ಅದರಲ್ಲೂ ನಾಲ್ಕಾರು ವರ್ಷಗಳು ರಿಪೇರಿ ಮಾಡದೆ ಬಿಟ್ಟು ಬಿಟ್ಟಿರತಕ್ಕ ದೊಡ್ಡ ದೊಡ್ಡ ಕಟ್ಟಡಗಳ ವಿಷಯದಲ್ಲಾದರೋ ಏನೇನೂ ಸಾಕಾಗುವುದಿಲ್ಲ. 100 ರೂಪಾಯಿ ಬಾಡಿಗೆ ಕೊಡುವ ಮನೆಗೆ ರಿಪೇರಿ ಮಾಡಬೇಕಾದರೆ ಬರೀ ನೂರು ರೂಪಾಯಿ ಸಾಲ್ಲಾಗುವುದಿಲ್ಲ, ಸಾವಿರ ರೂಪಾಯಿಯಾದರೂ ಆಗುವುದಿಲ್ಲ. ಅನೇಕ ವರ್ಷಗಳಿಂದ ರಿಪೇರಿಯನ್ನೇ ಮಾಡಿಸದೆ ಅಷ್ಟು ಕೆಟ್ಟುಹೋಗಿರುತ್ತದೆ. ಅಂಥ ಸಂದರ್ಭಗಳಲ್ಲೂ ಈ ರೀತಿ ಒಂದು ತಿಂಗಳ ಬಾಡಿಗೆಯಷ್ಟು ತೆಗೆದುಕೊಳ್ಳಬಹುದೆಂದರೆ ಹೇಗೆ?

The Hon'ble Sri R. CHENNIGARAMIAH (Minister for Local Self-Government).—For example.........

Sri H. B. GUNDAPPA GOWDA.—For example, the buildings occupied by my Hon'ble friends here and the one which I am occupying. ಇಂಥಾ ದೊಡ್ಡ ಮನೆಗಳಿಗೆ ಒಂದು ತಿಂಗಳ ಬಾಡಿಗೆಯನ್ನುವುದು ಸ್ವಲ್ಪವೂ ಸಾಲುವುದಿಲ್ಲ.

The Hon'ble Sri K. T. BHASHYAM.—The Munsiff will decide that.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಈ ಮಸೂದೆಯಲ್ಲಿರುವ ಪ್ರಕಾರ "the amount so deducted or recoverable in any year shall not exceed one-twelfth of the rent payable for the year" ಎಂದಿದೆ. ಇದಕ್ಕೆ ಬದಲು "the amount being recoverable in so many months' rent as is required to cover such expenses" ಎಂದು ಮಾಡಿದರೆ ಸರಿಹೋಗುತ್ತದೆ.

The Hon'ble Sri K. T. BHASHYAM.—We shall see it in the Select Committee.

Mr. SPEAKER.—Motion moved:

"That the Mysore House Rent and Accommodation Control Bill, 1951, be referred to a Select Committee consisting of the following members:

Sri W. H. Hanumanthappa,
Sri M. N. Jois,
Sri G. Veerappa,
Sri Mudduramiah,
Sri B. M. Shamanna Gowda,
Sri S. Ranga Rao,
Sri T. Ramachar,
Sri M. Madiah,
Sri B. C. Nanjundaiya,
Sri M. Muniswamy,
Sri K. Sampangiramiah, and
The Mover.

Janab MOHAMED HANIEF (Bangalore—Muslim).—Sir, the Transfer of Property Act was in force before this. The exigencies of war called for such a remedy and these orders were passed. Those who have experience from the working of these orders know fully well that rightly or wrongly they are not getting the type of justice as they really expect. The Munsiff, the District Judge and the High Court are the only channels through which people feel they would get justice. Provision has been made in this Act which is a welcome measure. It requires an examination and in the examination, the present channels of administering these orders through the Executive may not be perpetuated. For the information of Sri Gundappa Gowda I may say that a petition takes not less than six to seven months for disposal. I may also tell you that there are cases pending disposal for three years. I can give examples, but I do not want to do that. I am telling with personal knowledge because I have got to deal with these cases every day and it would not be possible to get justice as quickly as you think you can. Therefore this is a Bill which has come in time and it will redress the grievances which are generally felt by the public.

ಶ್ರೀ ಎಲ್. ಸಿದ್ದಪ್ಪನವರು (ಶಿವಮೊಗ್ಗ ಜಿಲ್ಲಾ).—ಅಧ್ಯಕ್ಷರೇ, ಈ ಮಸೂದಾ ಕಾನೂನನ್ನು ಸ್ವಾಗತಿಸುತ್ತಾ, ಇದರ ವಿಷಯದಲ್ಲಿ ಹೆಚ್ಚಿಗೆ ನಾನೇನನ್ನೂ

(ಶ್ರೀ ಎಲ್. ಸಿದ್ದಪ್ಪನವರು.)

ಹೇಳುವುದಿಲ್ಲ. ಹೇಗಿದ್ದರೂ ಇದು ಸೆಲೆಕ್ಟ್ ಸಮಿತಿಗೆ ಹೋಗುವುದಾದ್ದರಿಂದ ಅಲ್ಲಿ ಎಲ್ಲಾ ಅಂಶಗಳನ್ನೂ ಕೂಲಂಕಷವಾಗಿ ನೋಡಿಕೊಳ್ಳುವುದಕ್ಕೆ ಅವಕಾಶವಿದೆ. ಈ ಬಿಲ್ಲಿನ ಕೊನೆಯಲ್ಲಿ ಕೊಟ್ಟಿರತಕ್ಕ ಫುಟ್ ನೋಟ್‌ನ ವಿಷಯದಲ್ಲಿ ಒಂದು ಮಾತು ಹೇಳಬೇಕಾಗಿದೆ ಅಷ್ಟೆ. ಈ ಫುಟ್ ನೋಟ್ ನಿಜವಾಗಿಯೂ ಸದಸ್ಯರುಗಳಿಗೆ ಬಹಳ ಸಹಾಯಕವಾಗಿದೆ. ಸಭೆಯ ಮುಂದೆ ಅನೇಕ ದೊಡ್ಡ ದೊಡ್ಡ ಬಿಲ್ಲುಗಳನ್ನು ತರುತ್ತಿರುತ್ತೀರಿ. ಆ ಬಿಲ್ಲುಗಳಿಗೂ ಇದೇ ರೀತಿ ಮಸೂದಾ ಕಾನೂನಿನ ಕೊನೆಯಲ್ಲಿ Notes on clauses ಕೊಟ್ಟರೆ ಸದಸ್ಯರಿಗೆ ಬೇಗ ಓದಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

The Hon'ble Sri K. T. BHASHYAM.—So you like the notes?

Sri L. SIDDAPPA.—Yes.

The Hon'ble Sri K. T. BHASHYAM.—May I add, Sir, that the Select Committee may be directed to submit their report during the Session itself because this is a matter of urgency and the lawyers and litigants have all requested that this Bill be passed at once. So, the report of the Select Committee may be submitted during the course of the Session.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಅಧ್ಯಕ್ಷರೆ, ಈ ಮಸೂದೆಯನ್ನು ಸ್ವಾಗತಿಸುತ್ತಾ, ಒಂದೆರಡು ಸೂಚನೆಗಳನ್ನು ಮಾತ್ರ ಕೊಡಬೇಕೆಂದು ನಾನು ಇಷ್ಟಪಡುತ್ತೇನೆ. ಒಂದನೆಯದು, ಇದುವರೆಗೂ ಮನೆಗಳನ್ನು ಬಿಡಿಸಬೇಕಾದರೆ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟಿನ 106 ನೆಯ ಸೆಕ್ಷನ್ ಪ್ರಕಾರ ಬಾಡಿಗೆದಾರನಿಗೆ ನೋಟೀಸ್ ಕೊಡಬೇಕೆಂದಿತ್ತು; ಆ ರೀತಿ ನೋಟೀಸ್ ಕೊಡುವುದನ್ನೂ ಈ ಕಾನೂನಿನಲ್ಲಿಯೇ ಅಡಕ ಮಾಡಿಬಿಟ್ಟರೆ ಒಳ್ಳೆಯದು. ಎರಡನೆಯದಾಗಿ, ಈ ಮಸೂದೆಯ ಪ್ರಕಾರ ಯಾವಾಗ ಇವಿಕ್ಷನ್ ಪ್ರಶ್ನೆಯನ್ನು ಮುನ್‌ಸೀಫ್ ಕೋರ್ಟಿಗೆ ವಹಿಸಿದಿರೋ ಅದರ ಜೊತೆಗೆ ಸ್ವಾಧೀನದ ವಿಚಾರ ಮುಂತಾಗಿ ಎಲ್ಲಾ ವಿಷಯಗಳನ್ನೂ ಅದಕ್ಕೇ ವಹಿಸುವುದು ಒಳ್ಳೆಯದು. ಅವುಗಳ ಮೇಲೆ ಸ್ಟ್ಯಾಂಪ್ ಚಾರ್ಜ್ ಹಾಕಿ ಸರ್ಕಾರಕ್ಕೆ ಸ್ವಲ್ಪ ಉತ್ಪತ್ತಿ ಬರಮಾಡಿಕೊಳ್ಳಬಹುದು. ಬೇಕಾದರೆ ಇದಕ್ಕಾಗಿಯೇ ಒಂದು ಪ್ರತ್ಯೇಕ ಮುನಿಸೀಫ್ ಕೋರ್ಟನ್ನೇ ಏರ್ಪಾಡು ಮಾಡಿ. ಈಗ ಮೈಸೂರು ಡಿಸ್ಟ್ರಿಕ್ಟನ್ನು ನೋಡುವುದಾದರೆ ಅಲ್ಲಿ ಒಂದು ವರ್ಷಕ್ಕೆ 600—700 ಕೇಸುಗಳು ಬರುತ್ತವೆ. ಈಗಿರುವಂತೆ ಕೋರ್ಟುಗಳು ತಮ್ಮ ಇತರೇ ಕೆಲಸದ ಜೊತೆಗೆ ಇದನ್ನೂ ಮಾಡಬೇಕೆಂದರೆ ಬಹಳ ಕಾಲಾತೀತವಾಗುತ್ತದೆ. ಆದ್ದರಿಂದ ಮೈಸೂರು ಬೆಂಗಳೂರಲ್ಲಿ ಒಂದು ಪ್ರತ್ಯೇಕ ಮುನ್‌ಸೀಫ್ ಕೋರ್ಟನ್ನು ಏರ್ಪಡಿಸಿದರೆ ಸರಿಹೋಗುತ್ತದೆಂದು ನನ್ನ ಸಲಹೆ.

ಈ ಸಂದರ್ಭದಲ್ಲಿ ಮನೆ ಮಾಲೀಕರ ಹಿತರಕ್ಷಣೆಯನ್ನೂ ತಾವು ಸ್ವಲ್ಪ ನೋಡಿಕೊಳ್ಳಬೇಕೆಂದು ಕೇಳುತ್ತೇನೆ. ಏಕೆಂದರೆ ಎಷ್ಟೋ ವೇಳೆ ಬಾಡಿಗೆಯವರು ಒಂದೆರಡು ತಿಂಗಳು ಬಾಡಿಗೆ ಕೊಟ್ಟು, ಆಮೇಲೆ ಸುಮ್ಮನೆ ಬೀಗ ಹಾಕಿಕೊಂಡ ಹೊರಟುಹೋಗುತ್ತಾರೆ. ಅಂಥಾ ಸಂದರ್ಭಗಳಲ್ಲಿ ಮನೆ ಮಾಲೀಕರಿಗೆ ವೃಥಾ ಖರ್ಚಿಗೆ ಅವಕಾಶವಾಗುತ್ತದೆ. ತತ್ರಾಪಿ ಹೆಂಗಸರು ಮಾಲೀಕರಾಗಿದ್ದರೆ ಅವರಿಗೆ ಈ ರೀತಿಯಲ್ಲಾ ಮಾಡಿ ಬಹಳ ಕಿರುಕುಳ ಕೊಡುತ್ತಾರೆ. ಅಂಥ ಸಂದರ್ಭದಲ್ಲಿ ಬಾಡಿಗೆದಾರರಿಂದ ಅಡ್ವಾನ್ಸು ತೆಗೆದುಕೊಳ್ಳುವ ಏರ್ಪಾಡು ಮಸೂದೆಯಲ್ಲಿರಬೇಕು.

ಆಮೇಲೆ, ಇದರಲ್ಲಿ ಮನೆಯ ಮಾಲೀಕನಿಗೆ ವಾಸಕ್ಕೆ ಸ್ವಂತ ಮನೆಯಿದ್ದರೆ ಅವನು ಬಾಡಿಗೆದಾರನನ್ನು ಬಿಡಿಸುವುದಕ್ಕಾಗುವುದಿಲ್ಲವೆಂದು ಹೇಳಿದೆ. ಒಂದು ಪಕ್ಷ ಮಾಲೀಕನಿಗೆ ನಾಲ್ಕಾರು ಮಕ್ಕಳುಗಳಿದ್ದು ಅವರಲ್ಲಿ ಯಾರಾದರೂ ಪ್ರತ್ಯೇಕವಾಗಿ ವಾಸಿಸಬೇಕೆಂದು ಅಪೇಕ್ಷೆಪಟ್ಟರೆ ಅಂಥ ಸಂದರ್ಭದಲ್ಲಿ ಯಾರಾದರೂ ಮನೆಯನ್ನು ಬಿಡಿಸಿಕೊಳ್ಳುವುದಕ್ಕೆ ಅವಕಾಶ ಮಾಡಿ ಕೊಡಬೇಕೆಂದು ಹೇಳುತ್ತೇನೆ. ಆದ್ದರಿಂದ landlord ಎನ್ನುವುದಕ್ಕೆ ಅರ್ಥ ಮಾಡುವುದರಲ್ಲಿ "landlord includes his sons if he is a member of the joint family ಎಂದು ಸೇರಿಸಿದರೆ ಒಳ್ಳೆಯದು.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಸ್ವಾಮಿ, ಈ ಮಸೂದೆಯ ಬಗ್ಗೆ ವರದಿಯನ್ನು ಸೆಲೆಕ್ಟ್ ಕಮಿಟಿಯವರು ಈ ಅಧಿವೇಶನದಲ್ಲೇ ಒಪ್ಪಿಸಬೇಕೆಂದಿದೆ. ಅದು ಬಹಳ ಕಷ್ಟ. ಸಾಧ್ಯವಾಗಲಾರದು. ಆದುದರಿಂದ ಅದನ್ನು ಮುಂದಿನ ಅಧಿವೇಶನಕ್ಕೆ ಒಪ್ಪಿಸುವಂತೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಟಿ. ರಾಮಾಚಾರ್ಯರು.—ಈ ಮಸೂದೆಯ ಬಗ್ಗೆ ಸೆಲೆಕ್ಟ್ ಸಮಿತಿಯ ವರದಿಯನ್ನು ಮುಂದಿನ ಅಧಿವೇಶನಕ್ಕೆ ಒಪ್ಪಿಸುವುದಕ್ಕೆ ಅವಕಾಶ ಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಈಗಲೇ ಒಪ್ಪಿಸಬೇಕೆಂದರೆ ಬಹಳ ಕಷ್ಟವಾಗುತ್ತದೆ.

The Hon'ble Sri K. T. BHASHYAM.—I agree. The next session is coming of in March. We can very well have it then.

Sri V. S. NARAYANA RAO.—I want to make a request that whenever a Select Committee meets, notice may be sent to all the members, even though they may not be members of the Committee. That will enable the members to send in amendments for consideration by the Select Committee.

Mr. SPEAKER.—The question is:

"That the Mysore House Rent and Accommodation Control Bill, 1951, be referred to a Select Committee consisting of—

Sri W. H. Hanumanthappa,
Sri M. N. Jois,
Sri G. Veerappa,
Sri Muddur‍amiah,
Sri B. M. Sh‍manna Gowda,
Sri S. Ranga Rao,
Sri T. Ramachar,
Sri M. Madiah,
Sri B. C. Nanjundiah,
Sri Muniswamy,
Sri K. Sampangiramiah and,
Sri V. S. Narayana Rao.

The motion was adopted.

Hours of Business for the next day's sitting.

ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು.)—27ನೆಯ ತಾರೀಖು ಎಷ್ಟು ಹೊತ್ತಿಗೆ ಸಭೆ ಸೇರಬೇಕೆಂಬ ಬಗ್ಗೆ ಅನೇಕ ಮಾನ್ಯ ಸದಸ್ಯರು ಮಧ್ಯಾಹ್ನ 3 ಘಂಟೆಯಿಂದ ರಾತ್ರಿ 8 ಘಂಟೆಗಳ ತನಕ ಸಭೆ ಸೇರುವಂತೆ ಮಾಡಬೇಕೆಂದು ಅವರ ಅಭಿಪ್ರಾಯವನ್ನು ಈಗಾಗಲೇ ಸೂಚಿಸಿದ್ದಾರೆ. ಆದರೆ ಈ ತಹಲ್‌ವರಿಗೆ ಆ ಕಾಲವನ್ನು ಇನ್ನೂ ನಿರ್ಧರಮಾಡಿಲ್ಲ. ತಾವೆಲ್ಲರೂ ಒಪ್ಪುವುದಾಗಿದ್ದರೆ, ಎಲ್ಲರ ಆಶೆಯಂತೆ ಸಭೆಯನ್ನು ಆ ದಿವಸ ಮಧ್ಯಾಹ್ನ 3 ಘಂಟೆಯಿಂದ ರಾತ್ರಿ 8 ಘಂಟೆಯ ತನಕ ನಡೆಸಲಾಗುತ್ತೆ.

(ಆಗಬಹುದೆಂದು ಎಲ್ಲರೂ ಅನುಮತಿಕೊಟ್ಟರು.)

The Hon'ble Sri K. T. BHASHYAM.—If the Hon'ble Speaker wants us to meet at Three of the Clock, we are quite willing to do so, but we felt like sitting as usual from 1 to 6 p.m. If the Hon'ble Speaker desires that the Assembly should meet at 3 p.m. we are all willing to co-operate with him.

(*A Voice*: It is also the sentiment of other members.)

Mr. SPEAKER.—Yes.

The House stands now adjourned to meet on Saturday from 3 p.m to 8 p.m.

The Assembly adjourned at Twenty-five Minutes past Six of the Clock to meet again at Three of the Clock on Saturday, 27th January 1951.

WD 2915—GPB—500—2-3-51.